ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 7 ಮಂಗಳವಾರ 2023

ಸಂಪುಟ: 43 | ಸಂಚಿಕೆ: 317 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಆರ್‌ಎಸ್ ಜಲಾಶಯದಲ್ಲಿ ಸಾಕಷ್ಟು ನೀರಿನ ಸಂಗ್ರಹ

ಬೇಸಿಗೆಯಲ್ಲಿ ಕುಡಿಯುವ ನೀರಿನ ಚಿಂತೆ ಬೇಡ

ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಅಭಯ

ಮೈಸೂರು, ಮಾ. 6(ಆರ್‌ಕೆ)– ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದಲ್ಲಿ ಸಾಕಷ್ಟು ನೀರಿನ ಸಂಗ್ರಹ ಇರುವುದರಿಂದ ಈ ಬಾರಿ ಬೇಸಿಗೆಯಲ್ಲಿ ಮೈಸೂರು, ಮಂಡ್ಯ ಹಾಗೂ ಬೆಂಗಳೂರು ನಗರಗಳಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗುವುದಿಲ್ಲ ಎಂದು ಕಾವೇರಿ ನೀರಾವರಿ ನಿಗಮದ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಮಸ್ವಾಮಿ ತಿಳಿಸಿದ್ದಾರೆ.

ಕೆಆರ್‌ಎಸ್ ಜಲಾಶಯದಲ್ಲಿ ಇಂದು 104.66 ಅಡಿ ನೀರು ಸಂಗ್ರಹ ಇರುವುದರಿಂದ ಈ ವರ್ಷ ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಮೈಸೂರು, ಮಂಡ್ಯ ಹಾಗೂ ಬೆಂಗಳೂರು ನಗರಗಳಿಗೆ ಕುಡಿಯುವ ನೀರು ಪೂರೈಕೆಗೆ ಕೊರತೆ ಉಂಟಾಗುವುದಿಲ್ಲ. ಆದರೆ ಪ್ರಸ್ತುತ ಬೆಳೆದು ನಿಂತಿರುವ ಬೆಳೆಗೆ ಮಾತ್ರ ಕಟ್ಟು ನೀರಿನ ಪದ್ಧತಿಯಂತೆ ▶ 8ನೇ ಪುಟಕ್ಕೆ



ಬೃಂದಾವನ ಗಾರ್ಡನ್‌ನಲ್ಲಿ ಅತ್ಯಾಧುನಿಕ ಸಂಗೀತ ಕಾರಂಜಿ

ಹಳೇ ಕಾರಂಜಿ ತೆರವು, ಏಪ್ರಿಲ್ ಅಂತ್ಯಕ್ಕೆ ಲೋಕಾರ್ಪಣೆ

ಮೈಸೂರು, ಮಾ.6(ಆರ್‌ಕೆ)–ವಿಶ್ವವಿಖ್ಯಾತ ಪ್ರವಾಸಿ ತಾಣಗಳಲ್ಲಿ ಒಂದಾದ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜ ಜಲಾಶಯ(ಕೆಆರ್‌ಎಸ್)ದ ಬೃಂದಾವನ ಗಾರ್ಡನ್‌ನ ಸಂಗೀತ ನೃತ್ಯ ಕಾರಂಜಿಯನ್ನು ಹೊಸದಾಗಿ ಅತ್ಯಾಧುನಿಕ, ವಿಶ್ವದರ್ಜೆ ಮಾದರಿ ನಿರ್ಮಾಣ ಮಾಡುವ ಕಾಮಗಾರಿ ಆರಂಭವಾಗಿದೆ.


ಕೆಆರ್‌ಎಸ್ ಅಣೆಕಟ್ಟೆ ನಿರ್ಮಾಣವಾದಾಗ ರಚನೆಯಾದ ಬೃಂದಾವನ ಗಾರ್ಡನ್ ಉತ್ತರ ಭಾಗದಲ್ಲಿರುವ ಹಳೆಯ ಸಂಗೀತ ಕಾರಂಜಿಯನ್ನು ತೆರವುಗೊಳಿಸಿ, ಹೊಸದಾಗಿ ನಿರ್ಮಿಸುವ 2 ಕೋಟಿ ರೂ. ಅಂದಾಜು ವೆಚ್ಚದ ಕಾಮಗಾರಿಗೆ ಚಾಲನೆ ದೊರೆತಿದ್ದು, ಏಪ್ರಿಲ್ ಕಡೇ ವಾರದಲ್ಲಿ ಇದನ್ನು ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲು ಕಾವೇರಿ ನೀರಾವರಿ ನಿಗಮ (KNNL) ಮುಂದಾಗಿದೆ. ಕಾಮಗಾರಿಗಾಗಿ ಬೃಂದಾವನ ಉದ್ಯಾನವನದ ಉತ್ತರ ಭಾಗದಲ್ಲಿರುವ ಕಾರಂಜಿಗೆ



ಪ್ರವೇಶ ಬಂದ್ ಮಾಡಲಾಗಿದ್ದು, ಹಳೆಯ ಮ್ಯೂಸಿಕಲ್ ಫೌಂಟನ್ ಅನ್ನು ತೆರವುಗೊಳಿಸಲಾಗಿದೆ. ಅತ್ಯಾಧುನಿಕವಾಗಿ ವಿಶೇಷ ವಿನ್ಯಾಸದ ಕಾರಂಜಿ ನಿರ್ಮಿಸಲು ಗ್ಲೋಬಲ್ ಟೆಂಡರ್ ಮೂಲಕ ಮುಂಬೈ ಮೂಲದ ಗ್ರೀನ್ ಕ್ಯೂರ್ ▶ 8ನೇ ಪುಟಕ್ಕೆ

ಇಂದು ಮೈಸೂರಲ್ಲಿ ಫಲಾನುಭವಿಗಳ ಸಮ್ಮೇಳನ: ಸಿಎಂ ಉದ್ಘಾಟನೆ

ಮೈಸೂರು, ಮಾ.6–ಕೇಂದ್ರ ಹಾಗೂ



ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳಲ್ಲಿ ಪ್ರಯೋಜನ ಪಡೆದಿರುವ ಫಲಾನುಭವಿಗಳ ಸಮ್ಮೇಳನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಾಳೆ (ಮಾ.7) ಉದ್ಘಾಟಿಸಲಿದ್ದಾರೆ.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಮಧ್ಯಾಹ್ನ 1 ಗಂಟೆಗೆ ಆಯೋಜಿಸಲಾಗಿರುವ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳಲ್ಲಿ ಪ್ರಯೋಜನ ಪಡೆದುಕೊಂಡಿರುವವರಿಗೆ ಆದೇಶ ಪತ್ರಗಳನ್ನು ಅವರು ವಿತರಿಸಲಿದ್ದಾರೆ. ಇದರೊಂದಿಗೆ ವಿವಿಧ ಇಲಾಖೆಗಳು ಸಿದ್ಧಪಡಿಸಿರುವ ▶ 8ನೇ ಪುಟಕ್ಕೆ

ಹಾಸಿಗೆ, ದಿಂಬು, ಬಿಸ್ಕತ್ತು, ಕಾಫಿಯಂತಹ ವಸ್ತುಗಳಲ್ಲೂ 'ಕೈ' ಭ್ರಷ್ಟಾಚಾರ

ಬೆಂಗಳೂರು, ಮಾ.6(ಕೆಎಂಶಿ)– ದಿಂಬು, ಹಾಸಿಗೆ, ಬಿಸ್ಕತ್ತು, ಕಾಫಿಯಂಥ ಸಣ್ಣ ವಿಷಯದಿಂದ ಹಿಡಿದು ನೀರಾವರಿಯವರೆಗೆ ಭ್ರಷ್ಟಾಚಾರ ಮಾಡಿರುವ ಕಾಂಗ್ರೆಸ್, ಭ್ರಷ್ಟಾಚಾರದ ಕೂಪ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದ್ದಾರೆ.

ಭ್ರಷ್ಟಾಚಾರದ ವಿರುದ್ಧ ಕಾಂಗ್ರೆಸ್ ಕರೆ ನೀಡಿರುವ ಬಂದ್‌ಗೆ ಸಂಬಂಧಿಸಿದಂತೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಖುದ್ದು ಬಂದ್ ಆಗುವ ಕಾಲ ಬಂದಿದೆ ಕಾಂಗ್ರೆಸ್ ಮಾಡಿರುವ ಕರ್ಮಕಾಂಡ ಒಂದೆರಡಲ್ಲ. ಪ್ರತಿಭಟನೆ, ಬಂದ್ ಮೂಲಕ ತಮ್ಮ ರಾಜಕೀಯ ಭವಿಷ್ಯ ಬರೆಯಬಹುದೆಂದು ಬಂದ್‌ಗೆ ಕರೆ ನೀಡಿದ್ದಾರೆ. ಅವರಿಗೆ ▶ 8ನೇ ಪುಟಕ್ಕೆ

ಹೊಸ ಹೆಚ್3ಎನ್2 ವೈರಸ್

ಅಪಾಯಕಾರಿಯಲ್ಲ

■ ಆರೋಗ್ಯ ಸಚಿವ ಡಾ.ಸುಧಾಕರ್ ಅಭಯ ■ ರಾಜ್ಯದಲ್ಲಿ ಇದುವರೆಗೆ 26 ಪ್ರಕರಣ ಪತ್ತೆ
■ ಜ್ವರ, ಕೆಮ್ಮು, ಶೀತ ಇದರ ಲಕ್ಷಣ ■ ಆರೋಗ್ಯ ಸಿಬ್ಬಂದಿ ಮಾಸ್ಕ್ ಧರಿಸುವುದು ಕಡ್ಡಾಯ

ಬೆಂಗಳೂರು, ಮಾ.6(ಕೆಎಂಶಿ)–ಹೆಚ್3ಎನ್2



ವೈರಸ್ ಸೋಂಕು ಅಪಾಯಕಾರಿಯಲ್ಲ. ಈ ವೈರಸ್ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ ಸುಧಾಕರ್ ತಿಳಿಸಿದರು.

ರಾಜ್ಯದಲ್ಲಿ ಜನವರಿಯಿಂದ ಇಲ್ಲಿಯವರೆಗೆ 26 ಪ್ರಕರಣಗಳು ವರದಿಯಾಗಿವೆ. ಜ್ವರ, ಕೆಮ್ಮು, ಶೀತ ಸಂಬಂಧಿ ಲಕ್ಷಣಗಳಿದ್ದು, ಇದು ಕೂಡ ಸಾಂಕ್ರಾಮಿಕ ವೈರಸ್ ಎಂದರು.

ಹೆಚ್3ಎನ್2 ವೈರಸ್ ಸೋಂಕು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ತಜ್ಞರೊಂದಿಗೆ ವಿಧಾನಸೌಧದಲ್ಲಿ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಹೆಚ್3ಎನ್2 ವೈರಸ್‌ನ ಹೆಚ್ಚು ಸೋಂಕು ದೇಶದೆಲ್ಲೆಡೆ ವರದಿಯಾಗುತ್ತಿರುವುದರಿಂದ ಜನರು ಸಹಜವಾಗಿ ಗಾಬರಿಯಾಗುತ್ತಾರೆ. ಹೀಗಾಗಿ ಇಲಾಖೆಯ ಹಿರಿಯ



ಅಧಿಕಾರಿಗಳ ಜೊತೆಗೆ ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ಆದರೆ, ಗಾಬರಿ, ಆತಂಕಪಡುವಂಥ ಯಾವುದೇ ಪರಿಸ್ಥಿತಿ ಇಲ್ಲ. ಹಾಗಂತ ನಿರ್ಲಕ್ಷ್ಯ ವಹಿಸದೇ ಆದಷ್ಟು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಹೇಳಿದರು. ಕೋವಿಡ್ ಸಂದರ್ಭದಲ್ಲಿ ಆರೋಗ್ಯ ಸಿಬ್ಬಂದಿಗೆ ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಲಾಗಿತ್ತು. ಈಗಲೂ ಎಲ್ಲಾ ಆರೋಗ್ಯ ಸಿಬ್ಬಂದಿ ಮಾಸ್ಕ್‌ಗಳನ್ನು ಧರಿಸಬೇಕು. ಈ ಬಗ್ಗೆ ಮಾರ್ಗಸೂಚಿ ಹೊರಡಿಸಲಾಗುವುದು ಎಂದರು.

ವರ್ಷಕ್ಕೆ ಒಂದು ಬಾರಿ ಇನ್‌ಫ್ಲುಯೆಂಜಾ ಲಸಿಕೆಯನ್ನು ಆರೋಗ್ಯ ಸಿಬ್ಬಂದಿ ಪಡೆದುಕೊಳ್ಳಬೇಕು. ಐಸಿಯುನಲ್ಲಿ ಕೆಲಸ ಮಾಡುವವರು ಹಾಗೂ ಸಿಬ್ಬಂದಿಗೆ ಸರ್ಕಾರದಿಂದ ಲಸಿಕೆ



ನೀಡುವ ಬಗ್ಗೆ ಚರ್ಚೆ ಮಾಡಲಾಗಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ಸೂಚನೆಯಂತೆ ವಾಣಿವಿಲಾಸ ಹಾಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸಾರಿ ಹಾಗೂ ಐಎಲ್‌ಐ ಪ್ರಕರಣಗಳಲ್ಲಿ 25 ಟೆಸ್ಟ್ ಪ್ರತಿವಾರ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಹೆಚ್3ಎನ್2 ವೈರಸ್ ಸೋಂಕು 15 ವರ್ಷದೊಳಗಿನ ಮಕ್ಕಳಿಗೆ ಹಾಗೂ 65 ವರ್ಷ ಮೇಲ್ಪಟ್ಟ ವೃದ್ಧರಿಗೆ ಸುಲಭವಾಗಿ ತಗುಲಬಹುದು. ಗರ್ಭಿಣಿಯರಿಗೂ ಸೋಂಕು ತಗುಲುವ ಸಾಧ್ಯತೆ ಇದೆ. ಇವರು ಮುನ್ನೆಚ್ಚರಿಕೆಯಿಂದ ಇರಬೇಕು. ಅನಗತ್ಯ ಗುಂಪು ಸೇರಬಾರದು. ಸಾಬೂನಿನಿಂದ ಕೈ ತೊಳೆದುಕೊಳ್ಳಬೇಕು ಎಂದು ಸಲಹೆ ಮಾಡಿದರು. ರಾಜ್ಯದ ಇದುವರೆಗಿನ ಅಂಕಿ–ಅಂಶಗಳು ನೋಡಿದಾಗ ಆತಂಕಪಡುವ ಅಗತ್ಯ ಇಲ್ಲ. ಜನವರಿ, ಫೆಬ್ರವರಿ ಹಾಗೂ ಮಾರ್ಚ್‌ನಲ್ಲಿ ಎಚ್1ಎನ್1 ವೈರಸ್ 20 ಪ್ರಕರಣಗಳು, ಹೆಚ್3ಎನ್2 ವೈರಸ್ –26, ಇನ್‌ಫ್ಲುಯೆಂಜಾ ▶ 8ನೇ ಪುಟಕ್ಕೆ

ಭಕ್ತರ ಮನೆ ಬಾಗಿಲಿಗೆ ಭಾಗಮಂಡಲ ಭಗಂಡೇಶ್ವರ, ತಲಕಾವೇರಿ ಪ್ರಸಾದ



ಮಡಿಕೇರಿ, ಮಾ.6–ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ವತಿಯಿಂದ ಮಡಿಕೇರಿ ಅಂಚೆ ಕಚೇರಿಯ ಸಹಕಾರದೊಂದಿಗೆ ಕಾವೇರಿ ಕ್ಷೇತ್ರದ ಪ್ರಸಾದವನ್ನು ಭಕ್ತರ ಮನೆ ಬಾಗಿಲಿಗೆ ತಲುಪಿಸುವ ಆನ್‌ಲೈನ್ ಸೇವೆಗೆ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಇಂದು ಚಾಲನೆ ನೀಡಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿತ ಸರಳ ಕಾರ್ಯಕ್ರಮದಲ್ಲಿ ಶ್ರೀ ತಲಕಾವೇರಿಯ 100 ಎಂ.ಎಲ್ ತೀರ್ಥ, ತ್ರಿವೇಣಿ ಸಂಗಮ ಭಾಗಮಂಡಲದ ಶ್ರೀ ಭಗಂಡೇಶ್ವರ ದೇಗುಲದ ಪಂಚಕಜ್ಜಾಯ, ಕುಂಕುಮ, ಗಂಧವನ್ನು ಒಳಗೊಂಡ ಪ್ರಸಾದದ ಡಬ್ಬಿಯನ್ನು ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದರು. ಪವಿತ್ರ ಕಾವೇರಿ ಕ್ಷೇತ್ರದ ಪ್ರಸಾದವನ್ನು ಪಡೆಯಲು ಆಸಕ್ತಿ ಇರುವವರು www.indiapost.com ವೆಬ್‌ಸೈಟ್‌ಗೆ ಲಾಗ್ ಇನ್ ಆಗಿ, 300ರೂ. ಪಾವತಿಸಿ ಪ್ರಸಾದಕ್ಕೆ ತಮ್ಮ ಬೇಡಿಕೆಯನ್ನು ಸಲ್ಲಿಸಬಹುದು. ಈ ಆನ್‌ಲೈನ್ ಬೇಡಿಕೆಗೆ ಅನುಗುಣವಾಗಿ ಪ್ರಸಾದವನ್ನು ಅಂಚೆ ಮೂಲಕ ಸಂಬಂಧಿಸಿದವರಿಗೆ ತಲುಪಿಸಲಾಗುತ್ತದೆ. ಭಕ್ತರ ಬೇಡಿಕೆಗೆ ಅನುಗುಣವಾಗಿ ಭವಿಷ್ಯದ ದಿನಗಳಲ್ಲಿ ಪ್ರಸಾದದೊಂದಿಗೆ ಲಾಡು ಕೂಡ ಸೇರ್ಪಡೆ ಮಾಡುವ ಚಿಂತನೆ ಇದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾಹಿತಿ ನೀಡಿದರು.

ಭಾರತದಾದ್ಯಂತ ಪ್ರಸಾದ ಸೇವೆ: ಮಡಿಕೇರಿ ಅಂಚೆ ಕಚೇರಿಯ ಸೂಪರಿಂಟೆಂಡೆಂಟ್ ರಮೇಶ್ ಬಾಬು ಮಾತನಾಡಿ, ವೆಬ್‌ಸೈಟ್ ಮೂಲಕ ಬರುವ ಬೇಡಿಕೆಗೆ ಅನುಗುಣವಾಗಿ ಪ್ರಸಾದವನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡಲಾಗಿದೆ. ▶ 8ನೇ ಪುಟಕ್ಕೆ

ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಕ್ರೆಡಿಟ್ ವಾರ್!

ಯೋಜನೆಗೆ ಅನುಮತಿ ಪಡೆದಿದ್ದೇ ನಾವು; ಮಾ.9ರಂದು ಹೆದ್ದಾರಿ ಪರಿಶೀಲಿಸ್ತೇನೆ...

● ಮಾ.12ಕ್ಕೆ ಪ್ರಧಾನಿ ಮೋದಿ ಉದ್ಘಾಟನೆಗೆ ಸಿದ್ಧತೆ ನಡೆಯುತ್ತಿರುವ ವೇಳೆ ಗೊಂದಲ ● ಮೈಸೂರಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಘೋಷಣೆ

ಮೈಸೂರು, ಮಾ.6(ಎಂಟಿವೈ)– ಮೈಸೂರು–ಬೆಂಗಳೂರು ದಶಪಥ ಹೆದ್ದಾರಿಯ ಕ್ರೆಡಿಟ್ ವಾರ್ ಮತ್ತೆ ಮುನ್ನೆಲೆಗೆ ಬಂದಿದ್ದು, ಉದ್ಘಾಟನೆಗೆ ಸಜ್ಜಾಗಿರುವ ದಶಪಥ ರಸ್ತೆಯನ್ನು ಮಾ.9ರಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಪರಿಶೀಲಿಸಲು ನಿರ್ಧರಿಸಿದ್ದಾರೆ. ಮಾ.12ರಂದು ದಶಪಥ ರಸ್ತೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದು, ಅದಕ್ಕಾಗಿ ಸಿದ್ಧತೆ ಮಾಡುತ್ತಿರುವ ಬೆನ್ನಲ್ಲೇ ಕಾಂಗ್ರೆಸ್ ನಾಯಕರು ರಸ್ತೆ ಕಾಮಗಾರಿ ಪರಿಶೀಲಿಸಲು ನಿರ್ಧರಿಸಿರುವುದು ಕುತೂಹಲ ಮೂಡಿಸಿದೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಮೈಸೂರು–



ಬೆಂಗಳೂರು ನಡುವಿನ ರಸ್ತೆ ಈ ಹಿಂದೆ ರಾಜ್ಯ ಹೆದ್ದಾರಿಯಾಗಿತ್ತು. ಅದನ್ನು ಮೇಲ್ದರ್ಜೆಗೇರಿಸಿದ್ದು ಅಂದಿನ ಕೇಂದ್ರ ಸಚಿವ ಆಸ್ಕರ್ ಫರ್ನಾಂಡಿಸ್. ಫರ್ನಾಂಡಿಸ್ ಅವರೇ ಈ ರಸ್ತೆಯನ್ನು ದಶಪಥ ರಸ್ತೆಯಾಗಿ ಮಾರ್ಪಡಿಸಲು ಅನುಮತಿ ನೀಡಿದರು. ಅಂದು ನಾನು ಮುಖ್ಯಮಂತ್ರಿಯಾಗಿದ್ದೆ. ಡಾ. ಹೆಚ್.ಸಿ.ಮಹದೇವಪ್ಪ ಲೋಕೋಪಯೋಗಿ ▶ 8ನೇ ಪುಟಕ್ಕೆ

ಮಹಾ ಲಂಚ ಪ್ರಕರಣದಲ್ಲಿ ಮಾಡಾಳ್ ವಿರೂಪಾಕ್ಷಪ್ಪನ ಸರ್ಕಾರವೇ ರಕ್ಷಿಸುತ್ತಿದೆ

● ವಿಪಕ್ಷ ನಾಯಕ ಸಿದ್ದರಾಮಯ್ಯ ಆರೋಪ ● ನಾನು ಲೋಕಾಯುಕ್ತ ಬಂದ್ ಮಾಡಿದ್ದ ಸಾಬೀತುಪಡಿಸಿದರೆ ತಕ್ಷಣ ನನ್ನ ಸ್ಥಾನಕ್ಕೆ ರಾಜೀನಾಮೆ ನೀಡ್ತೇನೆ

ಮೈಸೂರು, ಮಾ.6(ಎಂಟಿವೈ)– ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಟೆಂಡರ್ ಪ್ರಕ್ರಿಯೆಯಲ್ಲಿ ಲಂಚ ಪಡೆದ ಪ್ರಕರಣದಲ್ಲಿ ಮೊದಲನೇ ಆರೋಪಿಯಾಗಿರುವ ದಾವಣಗೆರೆ ಜಿಲ್ಲೆ ಚನ್ನಗಿರಿ ಕ್ಷೇತ್ರದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪನನ್ನು ಸರ್ಕಾರವೇ ರಕ್ಷಿಸುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ಮೈಸೂರಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರವೇ ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿದೆ. ಶೇ.40 ಕಮಿಷನ್ ದಂಧೆಯಲ್ಲಿ ಎಲ್ಲರೂ ನಿರತರಾಗಿದ್ದಾರೆ. ಅದರ ಫಲವೇ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪ್ರಕರಣ ಬೆಳಕಿಗೆ ಬಂದಿದೆ. ಆದರೂ, ಬಿಜೆಪಿ



ನಾಯಕರು ಏನೂ ನಡೆದೇ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ಭ್ರಷ್ಟಾಚಾರ, ಲಂಚ ಸ್ವೀಕಾರ ಪ್ರಕರಣದಲ್ಲಿ ಮೊದಲನೇ ಆರೋಪಿ ಬಿಜೆಪಿ ಶಾಸಕನೇ. ಆದರೂ, ಜನರನ್ನು ದಿಕ್ಕು ತಪ್ಪಿಸುವ ಹೇಳಿಕೆ ನೀಡುತ್ತಿದ್ದಾರೆ ಎಂದು ಕಿಡಿಕಾರಿದರು. ಭಾರೀ ಮೊತ್ತದ ಹಣ ಲಂಚ ಪಡೆಯುವಾಗ ಸಿಕ್ಕಿ ಬಿದ್ದಿದ್ದರೂ ಹಾಗೂ ಮನೆಯಲ್ಲಿ ಅಪಾರ ಪ್ರಮಾಣದ ನಗದು ಸಿಕ್ಕಿದ್ದರೂ ಪ್ರಕರಣದ ಪ್ರಮುಖ ಆರೋಪಿಯನ್ನು ಬಂಧಿಸಿಲ್ಲ. ಎಫ್‌ಐಆರ್ ದಾಖಲಾಗಿ ಐದು ದಿನ ಕಳೆದರೂ ಶಾಸಕ ಮಾಡಾಳ್ ವಿರೂಪಾಕ್ಷಪ್ಪನನ್ನು ಬಂಧಿಸದೇ ಇರುವುದು ಹಲವು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ತಲೆಮರೆಸಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದಾರೆ. ಬಿಜೆಪಿ ಬಣ್ಣ ಬಯಲಾಗುತ್ತದೆ ಎಂದು ▶ 8ನೇ ಪುಟಕ್ಕೆ

20–25 ವರ್ಷದಿಂದ ದುಡಿಯುತ್ತಿರುವ ಮೈಸೂರು ನಗರ ಪಾಲಿಕೆಯ ಎಲ್ಲಾ ಪೌರಕಾರ್ಮಿಕರ ಖಾಯಂಗೆ ಪಟ್ಟು

170 ಕಾರ್ಮಿಕರ ಖಾಯಂ ತಾತ್ಕಾಲಿಕ ಪಟ್ಟಿ ರದ್ದು

ಇಂದು ಸಿಎಂ, ಉಸ್ತುವಾರಿ ಸಚಿವರ ಬಳಿ ಚರ್ಚಿಸಲು ಮೇಯರ್ ನಿರ್ಧಾರ

ಮೈಸೂರು, ಮಾ.6(ಆರ್‌ಕೆ)– ಮೈಸೂರು ನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರನ್ನು ಖಾಯಂಗೊಳಿಸುವಂತೆ ಪಟ್ಟು ಹಿಡಿದ ಹಿನ್ನೆಲೆಯಲ್ಲಿ 170 ಕಾರ್ಮಿಕರ ಖಾಯಮಾತಿ ತಾತ್ಕಾಲಿಕ ಪಟ್ಟಿಯನ್ನು ಸೋಮವಾರ ರದ್ದುಪಡಿಸಲಾಗಿದೆ. ನೇರಪಾವತಿ ಹಾಗೂ ಹೆಚ್ಚುವರಿ ಕಾರ್ಮಿಕರು ಸೇರಿ ಒಟ್ಟು 1680 ಪೌರಕಾರ್ಮಿಕರನ್ನೂ ಖಾಯಂಗೊಳಿಸಬೇಕೆಂಬ ಬೇಡಿಕೆಯೊಂದಿಗೆ ನಗರ ಪಾಲಿಕೆ ಮುಂಭಾಗ ಮೂರು ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದರು. ತಮ್ಮ ಬೇಡಿಕೆಯನ್ನು ಸರ್ಕಾರದ ಗಮನಕ್ಕೆ ತರುವುದಾಗಿ ಮೇಯರ್ ಶಿವಕುಮಾರ್ ಪ್ರತಿಭಟನೆ ಕೈಬಿಡುವಂತೆ ಮನವೊಲಿಸಿದ್ದಲ್ಲದೆ ಮಾತುಕತೆಗೆ ಆಹ್ವಾನಿಸಿದ್ದರು. ಈ ವೇಳೆ ಪ್ರತಿಭಟನಾನಿರತ ಎಲ್ಲಾ ಪೌರಕಾರ್ಮಿಕರೂ ಮೇಯರ್ ಕೊಠಡಿಗೆ ದೌಡಾಯಿಸಿದ್ದರಿಂದ ಒಂದು ರೀತಿಯಲ್ಲಿ ಮುತ್ತಿಗೆ ಹಾಕಿದಂತಹ ವಾತಾವರಣ ಸೃಷ್ಟಿಯಾಯಿತು.



> "ಪ್ರತಿಭಟನೆ ನಡೆಸುತ್ತಿದ್ದ ಪೌರಕಾರ್ಮಿಕರನ್ನು ನಾನೇ ಕಚೇರಿಗೆ ಆಹ್ವಾನಿಸಿದ್ದೆ. ಎಲ್ಲಾ ಪೌರಕಾರ್ಮಿಕರ ಸೇವೆಯನ್ನೂ ಖಾಯಂಗೊಳಿಸಬೇಕು. ಆ ವರೆಗೆ 170 ಮಂದಿ ಖಾಯಮಾತಿ ತಾತ್ಕಾಲಿಕ ಪಟ್ಟಿ ರದ್ದುಪಡಿಸಬೇಕೆಂದು ಒತ್ತಾಯಿಸಿದರು. ಹಾಗಾಗಿ ತಾತ್ಕಾಲಿಕ ಪಟ್ಟಿ ರದ್ದುಪಡಿಸಲು ಸೂಚನೆ ನೀಡಿದ್ದೇನೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರಿಗೆ ವಿವರಿಸಿ ಅವರ ಮೂಲಕ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ಸೂಕ್ತ ಕ್ರಮಕ್ಕೆ ಮನವಿ ಮಾಡುವುದಾಗಿ ತಿಳಿಸಿದ್ದೇನೆ. –ಮೇಯರ್ ಶಿವಕುಮಾರ್

ಮಾಜಿ ಮೇಯರ್‌ಗಳಾದ ನಾರಾಯಣ, ಪುರುಷೋತ್ತಮ್ ನೇತೃತ್ವದಲ್ಲಿ ಪೌರಕಾರ್ಮಿಕರು, ಮೇಯರ್ ಶಿವಕುಮಾರ್ ಹಾಗೂ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ಅವರನ್ನು ಭೇಟಿ ಮಾಡಿ, ಚರ್ಚಿಸಿದರು. 170 ಮಂದಿಗೆ ಮಾತ್ರ ಖಾಯಂ ಮಾಡುತ್ತಿರುವ ಕ್ರಮ ಸರಿಯಲ್ಲ. 20–25 ವರ್ಷಗಳಿಂದ ಪಾಲಿಕೆಯಲ್ಲಿ 1680 ಮಂದಿ ಪೌರಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದು, ಅವರಲ್ಲಿ ಕೆಲವರು ನಿವೃತ್ತಿ ಅಂಚಿನಲ್ಲಿದ್ದಾರೆ. ಅಂತಹ ▶ 6ನೇ ಪುಟಕ್ಕೆ

ಬಿಜೆಪಿಯ ಭಿನ್ನಮತ ನಿವಾರಣೆಗೆ ಆರ್‌ಎಸ್‌ಎಸ್ ಮಧ್ಯಪ್ರವೇಶ

● ಸೋಮಣ್ಣ, ಶಿವರಾಮ್ ಹೆಬ್ಬಾರ್, ನಾರಾಯಣಗೌಡ ಸೇರಿ ಹಲವು ಸಚಿವರು, ಶಾಸಕರು ಪಕ್ಷ ತೊರೆಯುವ ಸನ್ನಾಹ

● ಮತ್ತೆ ಅಧಿಕಾರ ಹಿಡಿಯಲು ಕಸರತ್ತು ನಡೆಸುತ್ತಿರುವ ಬಿಜೆಪಿಗೆ ಚುನಾವಣೆ ಹೊಸ್ತಿಲಲ್ಲಿ ಹೊಸ ತಲೆನೋವು

ಬೆಂಗಳೂರು, ಮಾ.6(ಕೆಎಂಶಿ)– ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ಬಿಜೆಪಿಯಲ್ಲಿ ಉಂಟಾಗಿರುವ ಆಂತರಿಕ ಬೇಗುದಿ ನಿವಾರಣೆಗೆ ಆರ್‌ಎಸ್‌ಎಸ್ ರಂಗ ಪ್ರವೇಶ ಮಾಡಿದೆ.

ಇನ್ನೇನು ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದೇ ಬಿಟ್ಟೆವು ಎಂಬ ಭ್ರಮೆಯಲ್ಲಿದ್ದ ಬಿಜೆಪಿಯಲ್ಲಿ ಕಳೆದೊಂದು ವಾರದಿಂದ ಆರಂಭಗೊಂಡಿರುವ ಅತೃಪ್ತಿ, ಅಸಮಾಧಾನ ದೆಹಲಿಯವರೆಗೂ ಬಿಸಿ ಮುಟ್ಟಿಸಿದ್ದು, ಇದೇ ರೀತಿ ಬಿಟ್ಟರೆ, ಪಕ್ಷ ನೆಲಕಚ್ಚುತ್ತದೆ ಎಂಬ ಭೀತಿ ಆರ್‌ಎಸ್‌ಎಸ್ ಅನ್ನು ಕಾಡುತ್ತಿದೆ.


ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಪುತ್ರ ವಿಜಯೇಂದ್ರ, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಸೇರಿದಂತೆ ಪಕ್ಷದ ಕೆಲವು ನಾಯಕರ ಧೋರಣೆಯಿಂದ ಅಸಮಾಧಾನಗೊಂಡಿರುವ ಸಚಿವರಾದ ವಿ.ಸೋಮಣ್ಣ, ಶಿವರಾಮ್ ಹೆಬ್ಬಾರ್, ನಾರಾಯಣಗೌಡ ಸೇರಿದಂತೆ ಕೆಲವು ಸಚಿವರು, ಶಾಸಕರು ಬಿಜೆಪಿ ತೊರೆಯುವ ಚಿಂತನೆಯಲ್ಲಿದ್ದಾರೆ.

ಇದು ಆರ್‌ಎಸ್‌ಎಸ್‌ಗೆ ಆಘಾತ ತರಿಸಿದ್ದು, ಖುದ್ದು ಆರ್‌ಎಸ್‌ಎಸ್ ಮುಖಂಡರೇ, ಇದೀಗ ಶಾಸಕರು ಮತ್ತು ಸಚಿವರ ನೇರ ಸಂಪರ್ಕಕ್ಕೆ ಬಂದಿದ್ದಾರೆ. ಬಿಜೆಪಿಯಲ್ಲಿದ್ದು, ಅಸಮಾಧಾನಗೊಂಡಿರುವ ಶಾಸಕರು, ಸಚಿವರು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ಮುಖಂಡರೊಂದಿಗೆ ಸಂಪರ್ಕದಲ್ಲಿರುವ ಮಾಹಿತಿ ಆರ್‌ಎಸ್‌ಎಸ್ ಅಂಗಳ ತಲುಪಿದೆ.

ಸೋಮಣ್ಣ ಅವರಂಥ ಹಿರಿಯರೇ ಕಾಂಗ್ರೆಸ್‌ಗೆ ಸೇರಲು ಮುಂದಾಗಿರುವುದು ಪಕ್ಷಕ್ಕೆ ಹಿನ್ನಡೆಯಾಗಲಿದೆ ಎಂಬ ಮಾಹಿತಿ ಅರಿತಿರುವ ಆರ್‌ಎಸ್‌ಎಸ್‌ನ ಹಿರಿಯ ಮುಖಂಡ ಮುಕುಂದ್ ಮಧ್ಯೆ ಪ್ರವೇಶ



ವಿ.ಸೋಮಣ್ಣ



ಶಿವರಾಮ್ ಹೆಬ್ಬಾರ್



ನಾರಾಯಣಗೌಡ

ಮಾಡಿದ್ದು, ಅಸಮಾಧಾನಿತರನ್ನು ಸಮಾಧಾನ ಪಡಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಪ್ರವಾಸದಲ್ಲಿರುವ ಮುಕುಂದ್ ಈ ಎಲ್ಲಾ ಅತೃಪ್ತರನ್ನು ಸಂಪರ್ಕಿಸಿ ಸಮಾಧಾನಪಡಿಸುವ ಮತ್ತು ತಮಗೆ ಯಾವುದೇ ರೀತಿಯ ಹಿನ್ನಡೆ ಪಕ್ಷದಲ್ಲಿ ಆಗದಿರುವಂತೆ ನೋಡಿಕೊಳ್ಳುವ ಹೊಣೆಗಾರಿಕೆಯ ಭರವಸೆ ನೀಡಿದ್ದಾರೆ. ಸೋಮಣ್ಣ ಅವರ ಪುತ್ರ ಡಾ.ಅರುಣ್ ಸೋಮಣ್ಣ ಅವರಿಗೆ ಗುಬ್ಬಿ ವಿಧಾನಸಭಾ ಕ್ಷೇತ್ರದ ಟಿಕೆಟ್ ನೀಡುವುದು. ಗೋವಿಂದರಾಜನಗರದ ಜತೆಗೆ ಬೆಂಗಳೂರಿನ ವಿಜಯನಗರ ಸೇರಿ ಕೆಲವು ಕ್ಷೇತ್ರ. ತುಮಕೂರು ಹಾಗೂ ಚಾಮರಾಜನಗರ ಜಿಲ್ಲೆಯ ಹೊಣೆಗಾರಿಕೆ ನೀಡುವ ವಾಗ್ದಾನ ಸಹ ಮಾಡಿದ್ದಾರೆ. ಮತ್ತೊಂದೆಡೆ ಕಾಂಗ್ರೆಸ್ ನಾಯಕರು ಸೋಮಣ್ಣ ಸೇರಿದಂತೆ ಹಲವು ಸಚಿವರು ಮತ್ತು ಶಾಸಕರನ್ನು ಸೇರಿಸಿಕೊಳ್ಳಲು ಉತ್ಸುಕರಾಗಿದ್ದು, ಟಿಕೆಟ್ ನೀಡುವ ಖಾತ್ರಿ ನೀಡಿದ್ದಾರೆ. ಸೋಮಣ್ಣ ಅವರಿಗೆ ಗೋವಿಂದರಾಜನಗರ ಟಿಕೆಟ್ ಹಾಗೂ ಅವರ ಪುತ್ರ ಡಾ.ಅರುಣ್ ಅವರಿಗೆ ರಾಜಾಜಿನಗರಕ್ಕೆ ಟಿಕೆಟ್ ನೀಡುವ ಭರವಸೆ ನೀಡಿದ್ದು, ಈ ವಿಚಾರದಲ್ಲಿ ಮಾಜಿ ಸಚಿವ ಎಂ.ಕೃಷ್ಣಪ್ಪ ಅವರನ್ನು ಒಪ್ಪಿಸಲು ಮುಂದಾಗಿದ್ದಾರೆ. ಅವರ ಪುತ್ರ ಪ್ರಿಯಕೃಷ್ಣ ಅವರಿಗೆ ರಾಜರಾಜೇಶ್ವರಿ ನಗರ ಅಥವಾ ಯಶವಂತಪುರ ಕ್ಷೇತ್ರದ ಟಿಕೆಟ್ ಕೊಡುವ ಚಿಂತನೆಯೂ ನಡೆದಿದೆ. ಈ ಮಧ್ಯೆ, ನಾರಾಯಣಗೌಡ ಕಾಂಗ್ರೆಸ್ ಸೇರುವುದು ಖಚಿತವಾಗಿದೆ. ಹೆಬ್ಬಾರ್ ಕೂಡ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ಅವರ ಕ್ಷೇತ್ರದಲ್ಲಿ ಈಗಾಗಲೇ ಒಬ್ಬರಿಗೆ ಟಿಕೆಟ್ ನೀಡುವುದು ಖಾತ್ರಿಯಾಗಿದ್ದು, ಹೆಬ್ಬಾರ್‌ಗೆ ಯಾವ ರೀತಿ ಅವಕಾಶ ಮಾಡಿಕೊಡಬೇಕು ಎಂಬ ಚರ್ಚೆ ನಡೆಸಲಾಗುತ್ತಿದೆ.

ಅಧಿಕಾರದ ಚುಕ್ಕಾಣಿ ಹಿಡಿಯಲೇಬೇಕು ಎಂದು ಪಣ ತೊಟ್ಟಿರುವ ಕಾಂಗ್ರೆಸ್ ಮ್ಯಾಜಿಕ್ ಸಂಖ್ಯೆಯ ಗುರಿ ಮುಟ್ಟಲು ಆಪರೇಷನ್ ಹಸ್ತ ಕಾರ್ಯಾಚರಣೆಗಳನ್ನು ತೆರೆಮರೆಯಲ್ಲಿ ಆರಂಭಿಸಿದೆ. ಜೆಡಿಎಸ್‌ನ ಕೆಲವು ಶಾಸಕರನ್ನು ಸೆಳೆಯುವಲ್ಲಿ ಯಶಸ್ವಿಯಾಗಿರುವ ಕಾಂಗ್ರೆಸ್, ಬಿಜೆಪಿಯಲ್ಲಿರುವ ಅತೃಪ್ತರನ್ನು ಸೆಳೆಯಲು ಎಲ್ಲಾ ಮಾರ್ಗಗಳನ್ನು ಆ ಪಕ್ಷದ ಮುಖಂಡರು ಬಳಸಿಕೊಳ್ಳುತ್ತಿದ್ದಾರೆ.

ಅದರಲ್ಲೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ತಮಗಿರುವ ರಾಜಕೀಯ ಸ್ನೇಹ ಬಳಕೆ ಮಾಡಿಕೊಂಡು ಬಿಜೆಪಿಯ ಕೆಲವು ಸಚಿವರು, ಶಾಸಕರನ್ನು ಸೆಳೆಯಲು ಅಹೋರಾತ್ರಿ ನಿರಂತರ ಕಾರ್ಯಾಚರಣೆ ನಡೆಸಿದ್ದಾರೆ.

ನಾಳೆಯಿಂದ ವಸ್ತುಪ್ರದರ್ಶನ, ಮಾರಾಟ ಮೇಳ

ಮೈಸೂರು, ಮಾ.6–ಜಿಲ್ಲಾ ಪಂಚಾಯತ್, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ–ಕೌಶಲ್ಯ ಅಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು, ಮಹಿಳಾ ಉದ್ಯಮಿಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಸಂಬಂಧ ವಿಭಾಗೀಯ ಮಟ್ಟದ ಒಂದು ವಾರದ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳವನ್ನು ಮಾ.8 ರಿಂದ ಮಾ.15 ರವರೆಗೆ ಜೆ.ಕೆ. ಗ್ರೌಂಡ್ ಮೈದಾನದಲ್ಲಿ ಏರ್ಪಡಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಡಾ.ಹೆಚ್.ವಿ.ನಾಗರಾಜರಾವ್ ಅವರಿಂದ 'ಶಿವತತ್ತ್ವ ದರ್ಪಣ' ಕೃತಿ ಬಿಡುಗಡೆ ಸಮಾರಂಭ

ಮೈಸೂರು, ಮಾ. 6– ಮೈಸೂರಿನ ಸಂವಹನ: ಪ್ರಕಾಶಕರು ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ನಾಳೆ (ಮಾ.7) ಸಂಜೆ 5 ಗಂಟೆಗೆ ಪ್ರೊ. ವೈ.ಎಸ್.ಗೌರಮ್ಮ ಅವರ 'ಶಿವತತ್ತ್ವ ದರ್ಪಣ' ಕೃತಿ ಬಿಡುಗಡೆ ಸಮಾರಂಭವನ್ನು ಶಂಕರ ಮಠದ ರಸ್ತೆಯಲ್ಲಿರುವ ಹೊಸಮಠದ ಶ್ರೀ ನಟರಾಜ ಸಭಾಭವನದಲ್ಲಿ ಏರ್ಪಡಿಸಲಾಗಿದೆ. ಸಾನ್ನಿಧ್ಯವನ್ನು ಹೊಸಮಠದ ಶ್ರೀ ಚಿದಾನಂದಸ್ವಾಮಿಗಳು ವಹಿಸಲಿದ್ದಾರೆ. ಹಿರಿಯ ಸಂಸ್ಕೃತ ವಿದ್ವಾಂಸರಾದ ವಿದ್ವಾನ್ ಡಾ.ಹೆಚ್.ವಿ. ನಾಗರಾಜರಾವ್ ಕೃತಿಯನ್ನು ಲೋಕಾರ್ಪಣೆಗೊಳಿಸಿ, ಕೃತಿ ಕುರಿತು ಮಾತನಾಡಲಿದ್ದಾರೆ.

ಜೆಎಸ್‌ಎಸ್ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲರಾದ ಡಾ.ಚಂದ್ರಶೇಖರಯ್ಯ ಅಧ್ಯಕ್ಷತೆ ವಹಿಸುವರು. ಲೇಖಕರಾದ ಪ್ರೊ. ವೈ.ಎಸ್. ಗೌರಮ್ಮ, ಡಿ.ಎನ್. ಲೋಕಪ್ಪ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್ ಉಪಸ್ಥಿತರಿರುವರು.

ವೈ.ಎಸ್. ಗೌರಮ್ಮ ಅವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕರಾಗಿ 36 ವರ್ಷಗಳ ಬೋಧನಾ ಅನುಭವವನ್ನು ಹೊಂದಿ, ಮಹಾರಾಜ ಕಾಲೇಜು, ಯುವರಾಜ ಕಾಲೇಜು, ಲಲಿತ ಕಲಾ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಇವರು 10 ಕೃತಿಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿಯೂ ಆಗಿದ್ದಾರೆ.

ಪ್ರೊ. ಗೌರಮ್ಮನವರು ಶಿವನಿಗೆ ಸಂಬಂಧಪಟ್ಟ ಶಾಸ್ತ್ರಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿ 'ಶಿವತತ್ತ್ವ ದರ್ಪಣ' ಕೃತಿಯನ್ನು ರಚನೆ ಮಾಡಿದ್ದಾರೆ. ಈ ಕೃತಿಯಲ್ಲಿ ಶಿವನ ನಾಮಾವಳಿಗಳು, ಸ್ತೋತ್ರಗಳು ಶಿವನಿಗೆ ಸಂಬಂಧಿಸಿದ ಕಥಾನಕಗಳು, ಜ್ಯೋತಿರ್ಲಿಂಗಗಳು, ಶಿವನನ್ನು ಪೂಜೆ ಮಾಡುವ ವಿಧಾನ, ಶಿವನ ಗುಣ ವಿಶೇಷಗಳು, 'ಶಿವರಾತ್ರಿ' ಮಹತ್ವ ಇನ್ನೂ ಮುಂತಾದ ಸಂಗತಿಗಳನ್ನು ಸರಳವಾಗಿ ವಿವರಿಸಿದ್ದಾರೆ. ಶಿವತತ್ತ್ವವನ್ನು ಅರಿಯುವವರಿಗೆ ಈ ಪುಸ್ತಕ ಉಪಯುಕ್ತವಾದ ಆಕರ ಗ್ರಂಥವಾಗಿದೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ: ಹೆಣ್ಣು ಮಕ್ಕಳ ಕ್ರಿಕೆಟ್ ಪಂದ್ಯಾವಳಿ

ಮೈಸೂರು, ಮಾ.6– ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ವತಿಯಿಂದ ಮಾ.8 ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ 19 ವರ್ಷದ ಒಳಗಿನ ಹೆಣ್ಣು ಮಕ್ಕಳ ಕ್ರಿಕೆಟ್ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಎಲ್ಲಾ ತಾಲೂಕಿನ ಆಸಕ್ತ ಅರ್ಹ ಮಹಿಳಾ ತಂಡಗಳು ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ:0821–2564179 ಅಥವಾ ಮೈಸೂರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ದ್ವಿತೀಯ ದರ್ಜೆ ಸಹಾಯಕಿ ಕಾವ್ಯ ಅವರನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣಾ ನೀತಿ ಸಂಹಿತೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಡಿಸಿ ಸೂಚನೆ

ಮೈಸೂರು, ಮಾ.6–ಜಿಲ್ಲೆಯಲ್ಲಿ ನ್ಯಾಯಯುತ ಮತ್ತು ಶಾಂತಿಯುತ ಚುನಾವಣೆಗಾಗಿ ನೀತಿ ಸಂಹಿತೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಶ್ರಮಿಸುವಂತೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು.

ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆ–2023ರ ಸಂಬಂಧ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ನೆರೆಯ ಕೇರಳ ರಾಜ್ಯದ ವೈನಾಡು ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ವರಿಷ್ಠಾಧಿಕಾರಿಗಳು, ಅಬಕಾರಿ ಇಲಾಖೆ ಆಯುಕ್ತರು ಹಾಗೂ ಇತರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಜಂಟಿ ಸಮನ್ವಯ ವರ್ಚುವಲ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಚುನಾವಣೆಯನ್ನು ಮುಕ್ತ ಹಾಗೂ ನಿಷ್ಪಕ್ಷಪಾತವಾಗಿ ನಡೆಸುವ ಸಂಬಂಧ ಅಕ್ರಮ ಮದ್ಯ ತಯಾರಿಕೆ, ಶೇಖರಣೆ ಹಾಗೂ ಸಾಗಾಣಿಕೆಯನ್ನು ತಡೆಗಟ್ಟಲು



ಕ್ರಮ ಕೈಗೊಳ್ಳಬೇಕು. ಹೊರ ರಾಜ್ಯಗಳಿಂದ ಮದ್ಯ ಸರಬರಾಜು ಆಗದಂತೆ ನೋಡಿಕೊಳ್ಳಬೇಕು. ಚುನಾವಣಾ ಸಂದರ್ಭದಲ್ಲಿ ಯಾವುದೇ ರೀತಿಯ ಸರಕುಗಳು ಅಕ್ರಮ ಸಾಗಾಣಿಕೆಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು. ಮೈಸೂರು ಜಿಲ್ಲೆಯು ಕೇರಳ ರಾಜ್ಯದೊಂದಿಗೆ ಗಡಿ ಪ್ರದೇಶವನ್ನು ಹೊಂದಿದೆ. ಗಡಿ ಭಾಗದಲ್ಲಿ ಚೆಕ್‌ಪೋಸ್ಟ್‌ಗಳನ್ನು ಗುರುತಿಸಲಾಗಿದ್ದು, ಇದಕ್ಕಾಗಿ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಗಡಿ ಭಾಗಗಳ ಚೆಕ್ ಪೋಸ್ಟ್‌ಗಳಲ್ಲಿ ರಾಜ್ಯಕ್ಕೆ ಬರುವ ಹಾಗೂ ಇಲ್ಲಿಂದ ಹೊರ ಹೋಗುವ ವಾಹನಗಳ ಮೇಲೆ ನಿಗಾ ಇಡಬೇಕಾಗುತ್ತದೆ. ಇದಕ್ಕಾಗಿ ಗಡಿ ಭಾಗದ ರಾಜ್ಯಗಳ ಗಡಿ ಜಿಲ್ಲೆಗಳಿಂದಲೂ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡುವಂತೆ ಸೂಚಿಸಿದರು.

ಚೆಕ್‌ಪೋಸ್ಟ್‌ಗಳಲ್ಲಿ 24X7 ಅವಧಿಯಲ್ಲಿಯೂ ಕಾರ್ಯ ನಿರ್ವಹಿಸಬೇಕಾಗುತ್ತದೆ. ಜಿಲ್ಲೆಯಿಂದ ನಿಯೋಜಿಸಲಾದ ನೋಡಲ್ ಅಧಿಕಾರಿಗಳೊಂದಿಗೆ ಹೊರ ಜಿಲ್ಲೆಗಳ ಅಧಿಕಾರಿಗಳು ಸಮನ್ವಯದಿಂದ ಕರ್ತವ್ಯ ಕೈಗೊಳ್ಳಬೇಕಾಗುತ್ತದೆ. ನೇಮಕ ಮಾಡಲಾಗುವ ಹೊರ ಜಿಲ್ಲೆಗಳ ಅಧಿಕಾರಿಗಳ ಮಾಹಿತಿಯನ್ನು ಜಿಲ್ಲಾಡಳಿತ ಪೊಲೀಸ್, ಅಬಕಾರಿ ಇಲಾಖೆಗಳ ಕಚೇರಿಗೆ ಸಲ್ಲಿಸಬೇಕು ಎಂದರು.

ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಗಳು, ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕಾಗುತ್ತದೆ. ಮತದಾನದ ಅವಧಿಯಲ್ಲಿ ಚೆಕ್‌ಪೋಸ್ಟ್‌ನ ಕರ್ತವ್ಯ ನಿರತ ಅಧಿಕಾರಿಗಳು ಅತ್ಯಂತ ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕಿದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸುವ ಸಂಬಂಧ ಎಲ್ಲಾ ಸಹಕಾರ ನೀಡುವಂತೆ ತಿಳಿಸಿದರು. ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ಆಯುಕ್ತೆ ನಂದಿನಿ, ಅಪರ ಜಿಲ್ಲಾಧಿಕಾರಿ ಕವಿತಾ ರಾಜರಾಂ ಹಾಗೂ ಕೇರಳ ರಾಜ್ಯದ ವೈನಾಡು ಜಿಲ್ಲೆಯ ಜಿಲ್ಲಾಧಿಕಾರಿಗಳು, ಪೊಲೀಸ್, ಅಬಕಾರಿ, ಅರಣ್ಯ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಇವಿಎಂ ಮೂಲಕ ಮತದಾನದ ಬಗ್ಗೆ ಅರಿವು ಮೂಡಿಸಿ: ಡಿಸಿ ಸಲಹೆ

ಜಿಲ್ಲಾಧಿಕಾರಿಗಳಿಂದ ವಿದ್ಯುನ್ಮಾನ ಮತ ಯಂತ್ರಗಳ ಪ್ರಾತ್ಯಕ್ಷಿಕೆ ಕೇಂದ್ರ ಉದ್ಘಾಟನೆ

ಮೈಸೂರು,ಮಾ.6– ವಿದ್ಯುನ್ಮಾನ ಮತ ಯಂತ್ರದ ಮೂಲಕ ಮತದಾನ ಮಾಡುವುದರ ಬಗ್ಗೆ ಹೆಚ್ಚು ಜನರಿಗೆ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿಗಳಾದ ಡಾ. ಕೆ.ವಿ.ರಾಜೇಂದ್ರ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿಗಳ ಕಚೇರಿಯಲ್ಲಿ ವಿದ್ಯುನ್ಮಾನ ಮತ ಯಂತ್ರಗಳ ಪ್ರಾತ್ಯಕ್ಷಿಕೆ ಕೇಂದ್ರವನ್ನು ಉದ್ಘಾಟಿಸಿದ ಅವರು ಸಾರ್ವಜನಿಕರೊಬ್ಬರಿಂದ ಮತದಾನ ಮಾಡಿಸುವ ಮೂಲಕ ಇವಿಎಂ ಹೇಗೆ ಕೆಲಸ ಮಾಡುತ್ತದೆ ಎಂದು ವಿವರಿಸಿದರು.

ಕಚೇರಿಗೆ ಬರುವ ಎಲ್ಲಾ ಸಾರ್ವಜನಿಕರಿಗೆ ಸಿಬ್ಬಂದಿಯೋರ್ವರು ಸದಾ ಕೇಂದ್ರದಲ್ಲಿ ಜಾಗರೂಕರಾಗಿದ್ದು ಇವಿಎಂ ಮೂಲಕ ಮತದಾನ ಮಾಡುವ ಬಗ್ಗೆ ಅರಿವು ಮೂಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕಿ ಕುಮುದಾ, ಚುನಾವಣಾ ತಹಸೀಲ್ದಾರ್ ರಾಮಪ್ರಸಾದ್ ಹಾಗೂ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಬಿ.ಎನ್.ನಂದಿನಿ, ಅಬಕಾರಿ ಇಲಾಖೆಯ ಆಯುಕ್ತ ರವಿಶಂಕರ್ ಭಾಗವಹಿಸಿದ್ದರು.

ವಿಷ್ಣು ಸಹಸ್ರನಾಮ ಪಾರಾಯಣ, ಒಂಟಿಕೊಪ್ಪಲು ಪಂಚಾಂಗ ವಿತರಣೆ



ಮೈಸೂರು, ಮಾ.6–ಶ್ರೀ ರಾಮಾನುಜ ಅಭ್ಯುದಯ ಸಹಕಾರ ಸಂಘದ ವತಿಯಿಂದ ವಿಷ್ಣುಸಹಸ್ರನಾಮ ಪಾರಾಯಣ ಹಾಗೂ ಒಂಟಿಕೊಪ್ಪಲ್ ಪಂಚಾಂಗ ವಿತರಿಸುವ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಉದ್ಘಾಟಿಸಿದರು.

ಈ ವೇಳೆ ವಿಪ್ರ ಮುಖಂಡರಾದ ನಂ. ಶ್ರೀಕಂಠ ಕುಮಾರ್ ಮಾತನಾಡಿ, ವಿಷ್ಣು ಸಹಸ್ರನಾಮ ವೇದ ಮತ್ತು ಪುರಾಣಗಳ ಪ್ರಕಾರ ಶ್ರೀ ಮಹಾವಿಷ್ಣು ವಿಶ್ವದ ರಕ್ಷಕ ಎಂದು ಹೇಳಲಾಗುತ್ತದೆ. ವಿಷ್ಣು ಸಹಸ್ರನಾಮ ಎಂಬುದು ಶ್ರೀ ಮಹಾವಿಷ್ಣುವಿನ ಸಾವಿರ ಹೆಸರುಗಳು ಶ್ರೇಷ್ಠ ವಿಷ್ಣು ಸಹಸ್ರನಾಮವನ್ನು ಪಠಿಸುವುದರಿಂದ ನಾವು ಸುಲಭವಾಗಿ ಮಹಾವಿಷ್ಣುವಿನ ಕೃಪೆಗೆ ಪಾತ್ರರಾಗಬಹುದು. ಹಾಗೆಯೇ ವಿಷ್ಣು ಸಹಸ್ರನಾಮವನ್ನು ಎಲ್ಲರಿಗೂ ತಿಳಿಸಬೇಕು ಎಂದು ಕರೆ ನೀಡಿ ಪಂಚಾಂಗದ ಇತಿಹಾಸ ತಿಳಿಸಿದರು. ವಿಪ್ರ ಮುಖಂಡರಾದ ಸುಂದರೇಶ್, ಪಾರ್ಥಸಾರಥಿ ರಾಮಾನುಜ ಸಹಕಾರ ಸಂಘದ ನಿರ್ದೇಶಕರಾದ ರಾಜಗೋಪಾಲ್, ಪುಟ್ಟಸ್ವಾಮಿ, ಟಿ.ಎಸ್. ಅರುಣ್, ಅನಂತ್‌ರಾಮು, ಮುರುಳಿ, ಶಾಂತರಾಮ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್ ಉದ್ಘಾಟನೆ

ಮೈಸೂರು,ಮಾ.6(ಪಿಎಂ)– ಸುಯೋಗ್ ಆಸ್ಪತ್ರೆಯಲ್ಲಿ ಅಸ್ತಿತ್ವಕ್ಕೆ ತಂದಿರುವ ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್‌ನ ಉದ್ಘಾಟನಾ ಸಮಾರಂಭವು ಅಂತಾರಾಷ್ಟ್ರೀಯ ಮಹಿಳಾ ದಿನವಾದ ಮಾ.8ರಂದು ನಡೆಯಲಿದೆ ಎಂದು ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರ ಆರೋಗ್ಯ ಗಮನದಲ್ಲಿಟ್ಟುಕೊಂಡು ನಗರದ ಆಸಕ್ತ ಮಹಿಳೆಯರು ನಮ್ಮ ಆಸ್ಪತ್ರೆಯಲ್ಲಿ ಸಭೆ ಸೇರಿ ಸದರಿ ಕ್ಲಬ್ ಸ್ಥಾಪಿಸಿದ್ದಾರೆ. ಸುಯೋಗ್ ಆಸ್ಪತ್ರೆಯಲ್ಲಿ ಅಂದು ಬೆಳಗ್ಗೆ 11ಕ್ಕೆ ಹಮ್ಮಿಕೊಂಡಿರುವ ಸಮಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಕ್ಲಬ್ ಉದ್ಘಾಟಿಸಲಿದ್ದಾರೆ. ಇದೇ ವೇಳೆ ಆಸ್ಪತ್ರೆಯಲ್ಲಿ ವರ್ಷವಿಡಿ ಏರ್ಪಡಿಸಿರುವ ಸ್ತ್ರೀಯರ ಆರೋಗ್ಯ ತಪಾಸಣೆಗೂ ಚಾಲನೆ ದೊರೆಯಲಿದೆ ಎಂದರು.

ಮೈಸೂರು ವೈದ್ಯಕೀಯ ಕಾಲೇಜಿನ ಡೀನ್ ಮತ್ತು ನಿರ್ದೇಶಕಿ ಡಾ.ದಾಕ್ಷಾಯಿಣಿ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಮಹಿಳಾ ವೈದ್ಯರು, ಶುಶ್ರೂಷಕಿಯರು, ಆರೋಗ್ಯ ಸ್ವಚ್ಛತಾ ಕಾರ್ಯ ನಿರ್ವಾಹಕರನ್ನು ಆಸ್ಪತ್ರೆಯ ನಿರ್ದೇಶಕಿ ಸುಧಾ ಯೋಗಣ್ಣ ಸನ್ಮಾನಿಸಲಿದ್ದಾರೆ ಎಂದು ತಿಳಿಸಿದರು.



ಪ್ರಸ್ತುತ ಮಹಿಳೆಯರಲ್ಲಿ ಸ್ತನ, ಗರ್ಭಕೋಶದ ಕ್ಯಾನ್ಸರ್ ತೀವ್ರವಾಗಿ ಹರಡುತ್ತಿದೆ. ಗರ್ಭಕೋಶದ ಕ್ಯಾನ್ಸರ್ ಬಾರದಂತೆ ತಡೆಯಲು ಲಸಿಕೆ ಲಭ್ಯವಿದ್ದು, ಋತುಮತಿ ಆದ ಬಳಿಕ ಈ ಲಸಿಕೆ ಪಡೆಯುವುದರಿಂದ ಗರ್ಭಕೋಶದ ಕ್ಯಾನ್ಸರ್ ಬಾರದಂತೆ ತಡೆಗಟ್ಟಬಹುದು. ಜೊತೆಗೆ ಎಲ್ಲಾ ಮಹಿಳೆಯರೂ ಈ ಲಸಿಕೆ ಪಡೆಯಬಹುದು. ಇದರಿಂದ ಗರ್ಭಕೋಶದ ಕ್ಯಾನ್ಸರ್ ಬರುವ ಸಾಧ್ಯತೆ ಕಡಿಮೆಯಾಗಲಿದೆ. ಗರ್ಭಕೋಶದ ಕ್ಯಾನ್ಸರ್ ತಡೆಗಟ್ಟುವ ಲಸಿಕೆಯನ್ನು ಆಸ್ಪತ್ರೆಯಿಂದ ಕಡಿಮೆ ದರದಲ್ಲಿ ಖರೀದಿ ಕೈಗೆಟಕುವ ದರದಲ್ಲಿ ನೀಡಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಕ್ಲಬ್‌ನ ಗೌರವ ಸಲಹೆಗಾರರಾದ ಡಾ.ಸೀಮಾ ಯೋಗಣ್ಣ ಮಾತನಾಡಿ, ಆಸಕ್ತ ಸ್ತ್ರೀಯರನ್ನು ಉಚಿತವಾಗಿ ಕ್ಲಬ್ ಸದಸ್ಯರಾಗಿಸಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಕ್ಲಬ್‌ನ ಮುಖ್ಯ ಧ್ಯೇಯೋದ್ದೇಶ. ಅಲ್ಲದೆ, ಸ್ತ್ರೀಯರ ಆರೋಗ್ಯ ಕಾಪಾಡುವ ಸಲುವಾಗಿ ಉಚಿತ ಆರೋಗ್ಯ ಶಿಬಿರಗಳನ್ನು ಪ್ರತಿ ತಿಂಗಳು ಆಯೋಜಿಸುವುದು, ಸ್ತ್ರೀಯರಲ್ಲಿ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತಿರುವ ಸ್ತನ, ಗರ್ಭಕೋಶದ ಕ್ಯಾನ್ಸರ್ ಅನ್ನು ಪ್ರಾರಂಭದಲ್ಲಿ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ನೀಡುವ ಚಟುವಟಿಕೆಗಳನ್ನು ಕ್ಲಬ್ ನಿರ್ವಹಿಸಲಿದೆ ಎಂದರು.

ಕ್ಲಬ್‌ನ ಪದಾಧಿಕಾರಿ ರಾಜೇಶ್ವರಿ ಮಾತನಾಡಿ, ಕ್ಲಬ್‌ನ ಸದಸ್ಯರ ವಾಟ್ಸಪ್ ಗ್ರೂಪ್ ರಚಿಸಿ ಆ ಮೂಲಕ ಆರೋಗ್ಯದ ಬಗ್ಗೆ ತಜ್ಞ ವೈದ್ಯರಿಂದ ಅಗತ್ಯ ಸಲಹೆ ಕೊಡಿಸಲಾಗುವುದು. ಕ್ಲಬ್‌ನ ಸದಸ್ಯತ್ವ ಪಡೆಯಲು ಮೊ.ಸಂ. 74067 60053 ಅಥವಾ 72591 44447 ಅನ್ನು ಸಂಪರ್ಕಿಬಹುದು ಎಂದರು. ಆಸ್ಪತ್ರೆ ಸಿಇಓ ಡಾ.ಎಂ.ವಿ.ಮಂಜುನಾಥ್, ಕ್ಲಬ್‌ನ ಪದಾಧಿಕಾರಿಗಳಾದ ವಿಜಯಾ ಮಂಜುನಾಥ್, ಪದ್ಮಾ ಮಹದೇವ್, ಪನ್ನಗ ವಿಜಯಕುಮಾರ್ ಗೋಷ್ಠಿಯಲ್ಲಿದ್ದರು.

ನಾಳೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಮೈಸೂರು, ಮಾ.6– ನಗರದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಮಾ.8ರಂದು ಬುಧವಾರ ಬೆಳಿಗ್ಗೆ 10.30ಕ್ಕೆ ಹುಣಸೂರು ರಸ್ತೆಯಲ್ಲಿರುವ 'ಜ್ಞಾನ ಸರೋವರ ರಿಟ್ರೀಟ್ ಸೆಂಟರ್'ನಲ್ಲಿ 'ಸುಖೀ ಮಹಿಳೆ – ಸುಖೀ ಕುಟುಂಬ' ವಿಷಯದ ಮೇಲೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಮಲೇಶಿಯ ಈ.ವಿ.ವಿ. ದಕ್ಷಿಣ ಪೂರ್ವ ಏಷಿಯಾ ಕೇಂದ್ರಗಳ ನಿರ್ದೇಶಕಿ ರಾಜಯೋಗಿನಿ ಬಿಕೆ ಮೀರಾಜಿ ನೆರವೇರಿಸಲಿದ್ದು, ಮುಖ್ಯ ಅತಿಥಿಗಳಾಗಿ ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಜಿ.ಎಲ್. ತ್ರಿಪುರಾಂತಕ, ಸೋಮಾನಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ.ಬಿ.ಎನ್. ಆಶಾ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಶ್ರಾಂತ ಉಪ ನಿರ್ದೇಶಕಿ ಶ್ರೀಮತಿ ಮಂಜುಳ ಭಾಗವಹಿಸಲಿದ್ದಾರೆ. ದಿವ್ಯ ಸಾನಿಧ್ಯವನ್ನು ಈ.ವಿ.ವಿ. ಮೈಸೂರು ಉಪ ವಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿಕೆ ಲಕ್ಷ್ಮೀಜಿ ವಹಿಸಲಿದ್ದಾರೆ ಎಂದು ಸಮರ್ಪಿತ ಸಹೋದರ ಬಿಕೆ ಮಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಮೊಹಮ್ಮದ್ ಕಮಾಲ್

ಮೈಸೂರು, ಮಾ. 6– ಮೈಸೂರಿನ ಹನುಮಂತನಗರದ ಸಲಾಫಿ ಮಸೀದಿ ಹಿಂಭಾಗದ ನಿವಾಸಿ ಮೊಹಮ್ಮದ್ ಕಮಾಲ್ (77) ಭಾನುವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಇಬ್ಬರು ಪುತ್ರರು, ಓರ್ವ ಸಹೋದರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಶೋಕ ರಸ್ತೆಯಲ್ಲಿರುವ ಮಸೀದಿ–ಇ–ಅಜಾಮ್‌ನಲ್ಲಿ ನಮಾಜ್–ಇ–ಜನಾಜ ಸೋಮವಾರ ನಡೆದ ನಂತರ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಅಬ್ದುಲ್ ಅಜೀಜ್




ಮೈಸೂರು, ಮಾ. 6– ಮೈಸೂರಿನ ಸಿಎಫ್‌ಟಿಆರ್‌ಐನ ನಿವೃತ್ತ ನೌಕರ, ಉದಯಗಿರಿ ನಿವಾಸಿ ಅಬ್ದುಲ್ ಅಜೀಜ್ (85) ಭಾನುವಾರ ನಿಧನರಾದರು. ಮೃತರು ಪುತ್ರ ಅಬ್ದುಲ್ ಕರೀಂ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಉದಯಗಿರಿಯಲ್ಲಿರುವ ಕ್ಯೂಬಾ ಮಸೀದಿಯಲ್ಲಿ ನಮಾಜ್–ಇ–ಜನಾಜ ನಡೆದ ನಂತರ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.



ಮುಮ್ತಾಜ್ ಬಾನು

ಮೈಸೂರು,ಮಾ.6– ಮೈಸೂರಿನ ಎನ್.ಆರ್.ಮೊಹಲ್ಲಾ, ಎ.ಜಿ.ಬ್ಲಾಕ್ ನಿವಾಸಿ ಮುಮ್ತಾಜ್ ಬಾನು ಸಾಹೆಬಾ(60) ಅವರು ಅನಾರೋಗ್ಯದಿಂದ ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಪತಿ, 6 ಮಂದಿ ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ(ಮಾ.7) ಬೆಳಗ್ಗೆ 10ಕ್ಕೆ 'ಮಸೀದಿ ಹಜ್ರತ್ ಅಲಿ'ಯಲ್ಲಿ ನಮಾಜ್–ಎ–ಜನಾಜ ನಡೆಸಿ, ನಂತರ ಟಿಪ್ಪು ಸರ್ಕಲ್ ಬಳಿಯ ಮುಸ್ಲಿಂರ ರುದ್ರಭೂಮಿ ಗೇಟ್ ನಂ–2ರಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.3.2023 ಮಂಗಳವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.02.2023ರಿಂದ 17.03.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬೆಳಗ್ಗೆ 11 ರಿಂದ ಶ್ರೀ ಮದ್ದಿವ್ಯರಥಾರೋಹಣ, ಸಂಜೆ ಹಂಸವಾಹನೋತ್ಸವ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕಣ್ಣಿನ ಅಲರ್ಜಿ ಮತ್ತು ಇಸುಬು, ಹುಳಕಡ್ಡಿ, ಬಿಳಿಮಚ್ಚೆ ಮೊಡವೆ ಪಿತ್ತಗಂದೆ ಕಾಯಿಲೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ.

■ **ಕ್ಯಾತಮಾರನಹಳ್ಳಿ ಗ್ರಾಮಸ್ಥರು :** ಹುಲಿಯಮ್ಮ ಜಾತ್ರಾ ಮಹೋತ್ಸವ, ಬೆಳಗ್ಗೆ 10 ರಿಂದ ಹುಲಿವೇಷ, ಮಧ್ಯಾಹ್ನ 2 ಗಂಟೆಯಿಂದ ಕುಸ್ತಿ ಪಂದ್ಯಾವಳಿ, ಸ್ಥಳ: ಕ್ಯಾತಮಾರನಹಳ್ಳಿ ದೇವಸ್ಥಾನ ಆವರಣ.

■ **ಶ್ರೀ ಯೋಗಿ ನಾರೇಯಣ ಯತೀಂದ್ರರ (ಕೈವಾರ ತಾತಯ್ಯ) 297ನೇ ಜಯಂತ್ಯೋತ್ಸವ ಮತ್ತು ರಥೋತ್ಸವ ಸಮಿತಿ:** ರಥೋತ್ಸವ ಕಾರ್ಯಕ್ರಮ, ಉದ್ಘಾಟನೆ: ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ್, ಅಧ್ಯಕ್ಷತೆ: ಮೀನಾ ತೂಗುದೀಪ ಶ್ರೀನಿವಾಸ್, ಮುಖ್ಯ ಅತಿಥಿಗಳು: ಸಂಘದ ಗೌರವ ಅಧ್ಯಕ್ಷೆ ರೇಣು, ಶ್ರೀ ಕೈವಾರ ತಾತಯ್ಯ ಬಲಿಜನಾಯ್ಡು ಒಕ್ಕೂಟದ ಗೌರವಾಧ್ಯಕ್ಷ ಟಿ.ಕೆ.ಅಪ್ಪಸ್ವಾಮಿ, ಶ್ರೀ ಯೋಗಿನಾರೇಯಣ ಬಣಜಿಗ ಸಂಘದ ಅಧ್ಯಕ್ಷ ಎಂ. ನಾರಾಯಣ್, ಬಲಿಜ ಸಂಘದ ಅಧ್ಯಕ್ಷ ಯತಿರಾಜ್, ವಿ. ಕೃಷ್ಣಪ್ಪ, ಭಾನುಪ್ರಕಾಶ್, ಕೆ.ಸಿ. ಪ್ರಕಾಶ್ ಕಿತ್ತೂರು, ಸ್ಥಳ: ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 10ಕ್ಕೆ.

■ **ಶ್ರೀ ಯೋಗಿನಾರಾಯಣ ಸಹಕಾರ ಸಂಘ :** ಶ್ರೀ ಕೈವಾರ ತಾತಯ್ಯನವರ ಜಯಂತಿ ಪ್ರಯುಕ್ತ ತಾತಯ್ಯನವರ ಭಾವಚಿತ್ರ ಬೆಳ್ಳಿರಥದಲ್ಲಿ ಮೆರವಣಿಗೆ, ಉಪಸ್ಥಿತರು: ಸಂಘದ ಅಧ್ಯಕ್ಷ ಕೆ.ಸುಬ್ಬಯ್ಯ, ಉಪಾಧ್ಯಕ್ಷ ಪಿ.ಪ್ರಕಾಶ್, ನಿರ್ದೇಶಕರಾದ ಡಾ. ಎಸ್. ಕೃಷ್ಣಪ್ಪ, ಎಸ್.ತುಳಸಿಕುಮಾರ್, ಶ್ರೀನಿವಾಸಪ್ರಸಾದ್ ಎಂ.ಎಸ್., ಪಿ.ಮುನಿರಾಜು, ಆರ್.ಸುಧಾಕರ್, ಹೆಚ್.ಆರ್.ನವೀನ್, ಆರ್.ಶೈಲಜಾ, ಎನ್.ರೇಖಾ, ಎಸ್. ಶ್ಯಾಮಲ, ಸ್ಥಳ: ಶ್ರೀ ಗಣಪತಿ ದೇವಸ್ಥಾನದಿಂದ, ಗನ್‌ಹೌಸ್, ಬೆಳಗ್ಗೆ 10.30 ರಿಂದ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ (ಕೈವಾರ ತಾತಯ್ಯ), ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಕಿರುರಂಗ ಮಂದಿರ, ಕರ್ನಾಟಕ ಕಲಾಮಂದಿರದ ಆವರಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಕನ್ನಡ ವೇದಿಕೆ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸಾಧಕ ಮಹಿಳೆಯರಿಗೆ ಬಾಹ್ಯಾಕಾಶದ ಚತುರೆ ಕಲ್ಪನಾ ಚಾವ್ಲಾ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಸಿ.ರೇಣುಕಾಂಬ, ಸನ್ಮಾನಿಸುವವರು: ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಪ್ರಧಾನ ಭಾಷಣ: ಸಮಾಜ ಸೇವಕ ಡಾ.ಮಂಜುಳಾ ಉಮೇಶ್, ಅಧ್ಯಕ್ಷತೆ: ಕಲಾವಿದ ಡಾ.ಜಮುನಾರಾಣಿ ವಿ.ಮಿರ್ಲೆ, ಮುಖ್ಯ ಅತಿಥಿಗಳು: ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಸಮಾಜ ಸೇವಕ ಡಾ.ಶ್ರೀಷಾಭಟ್, ಪ್ರಾಸ್ತಾವಿಕ ನುಡಿ:ನಾಲಾ ಬೀದಿ ರವಿ, ಟಿ.ಎನ್.ಗಿರಿಜಾಮಣಿ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಸುಬ್ಬರಾಯನಕೆರೆ, ಬೆಳಗ್ಗೆ 11.30ಕ್ಕೆ.

■ **ಶ್ರೀ ಸಿದ್ದಪ್ಪಾಜಿ ದೇವಸ್ಥಾನ :** ಶ್ರೀ ಸಿದ್ದಪ್ಪಾಜಿ ದೇವರ 73ನೇ ವರ್ಷದ ಪೂಜಾ ಮತ್ತು ಜಾತ್ರಾ ಮಹೋತ್ಸವ, ಸಂಜೆ 7ಕ್ಕೆ ಖಂಡಾಯ ಮತ್ತು ಜಾನಪದ ಕಲಾತಂಡಗಳೊಂದಿಗೆ ರಥೋತ್ಸವ, ಮಹಾಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನ, ಒಂಟಿಕೊಪ್ಪಲ್.

■ **ಸಂವಹನ : ಪ್ರಕಾಶಕರು, ಕನ್ನಡ ಸಾಹಿತ್ಯ ಕಲಾಕೂಟ :** ಪ್ರೊ. ವೈ.ಎಸ್. ಗೌರಮ್ಮ ಅವರ ಶಿವತತ್ತ್ವ ದರ್ಪಣ ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಹೊಸಮಠಾಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಕೃತಿ ಲೋಕಾರ್ಪಣೆ : ಹಿರಿಯ ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ. ನಾಗರಾಜರಾವ್, ಅಧ್ಯಕ್ಷತೆ : ಜೆಎಸ್‌ಎಸ್ ಕಾಲೇಜು ವಿಶ್ರಾಂತ ಪ್ರಾಂಶುಪಾಲ ಪ್ರೊ. ಚಂದ್ರಶೇಖರಯ್ಯ, ಉಪಸ್ಥಿತರು : ಕೃತಿ ಲೇಖಕ ಪ್ರೊ. ವೈ.ಎಸ್. ಗೌರಮ್ಮ, ಸಂವಹನ ಪ್ರಕಾಶಕ ಡಿ.ಎನ್. ಲೋಕಪ್ಪ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಶ್ರೀ ನಟರಾಜ ಸಭಾ ಭವನ, ಶಂಕರ ಮಠದ ರಸ್ತೆ, ಸಂಜೆ 5ಕ್ಕೆ.

■ **ತನುಮನ ಸಂಸ್ಥೆ, ಮೈಸೂರು :** ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ, ಉದ್ಘಾಟನೆ: ಕವಿ ಹನಸೋಗೆ ಸೋಮಶೇಖರ್, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು : ಅಹಿಂದ ಚಿಕ್ಕಜವರಪ್ಪ, ದೇವಗಳ್ಳಿ ಸೋಮಶೇಖರ್, ಮಧುಕುಮಾರ್, ಎಂ. ಭೈರಪ್ಪ, ಬಬಿತಾ (ಸುಮಾ), ಹರೀಶ್‌ಬಾಬು, ವಿ.ಸಿ. ನಾರಾಯಣ, ವಿ.ಪಿ. ಸುಶೀಲಾ, ಸ್ಥಳ: ವಿಶ್ವಮೈತ್ರಿ ಬುದ್ಧವಿಹಾರ, ಸಂಜೆ 5.30ಕ್ಕೆ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಬೆಳದಿಂಗಳ ಸಂಗೀತ–252, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಸಂದೀಪ್ ನಾರಾಯಣ್ ಅವರಿಂದ ಗಾಯನ, ವಿದ್ವಾನ್ ಹೆಚ್.ಎನ್. ಭಾಸ್ಕರ್–ವಯೋಲಿನ್, ವಿದ್ವಾನ್ ಕೆ.ಯು. ಜಯಚಂದ್ರರಾವ್–ಮೃದಂಗ, ವಿದ್ವಾನ್ ಗಿರಿಧರ್ ಉಡುಪ–ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಸದಾಶಿವ ಪಾಟೀಲ್, ವ್ಯಾಖ್ಯಾನ– ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್.ಎಸ್., 8.45 ಕರೆಗೊಂದು ಗೀತೆ, 10.00 ಅವಧರಿಸು ಬಾ ಅಮರನಾರೇಯಣ–ಕಾರ್ಯಕ್ರಮ ಸರಣಿ ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್. ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ. ಎನ್. ರಘು, 10.30 ನಮ್ಮ ಆರೋಗ್ಯ – ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಪ್ರಣವ ಹೆಲ್ತ್ ಕೇರ್, ಕುವೆಂಪುನಗರ, ಮೈಸೂರು, ಭಾಗವಹಿಸುವ ತಜ್ಞರು– ಎಂ.ಎಸ್. ಗಿರೀಶ್

ಮಧ್ಯಾಹ್ನ: 12.30 ದೇವರನಾಮ–ಕೆ.ಎಂ. ಚಂದ್ರಿಕಾ, ಎನ್. ಶ್ರೀನಾಥ್, 12.45 ರಸ ರಾಮಾಯಣದ ಕವಿ ಗಜಾನನ ಈಶ್ವರ ಹೆಗಡೆ ಅವರೊಂದಿಗೆ ಸಂವಾದ, ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆಗಳು–ಅಮೃತಾ ನಿತಿನ್ ಶಾಸ್ತ್ರಿ, 4.00 ಕಥಾ ಕಾಲಕ್ಷೇಪ "ಭಕ್ತ ಪುರಂದರದಶರು", ಪ್ರಸ್ತುತಿ– ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಕಿಸಾನ್ ವಾಣಿ– ಇತ್ತೀಚೆಗೆ ನಾಗೇನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದದಲ್ಲಿ ಆಯೋಜಿಸಲಾಗಿದ್ದ ನೈಸರ್ಗಿಕ ಹಾಗೂ ಸಾವಯವ ಕೃಷಿ ತರಬೇತಿ ಕಾರ್ಯಾಗಾರದಲಿ ಡಾ. ಗೋವಿಂದರಾಜು ಅವರು ನೀಡಿದ ಉಪನ್ಯಾಸದ ಆಯ್ದ ಭಾಗಗಳ ಪ್ರಸಾರ, 9.15 ಯಕ್ಷಗಾನದ ಹಾಡುಗಳು–ಚೇವಾರು ಶಂಕರ ಕಾಮತ್ ಮತ್ತು ಬಳಗದವರಿಂದ ರತಿ ಕಲ್ಯಾಣ ಪ್ರಸಂಗದ ಹಾಡು, 9.30 ಡಾ.ಎಸ್. ವಿಜಯರಾಘವನ್–ವೀಣಾವಾದನ, 10.00 ಗಮಕ ವಾಚನ, ವಾಚನ–ವಸಂತಾ ವೆಂಕಟೇಶ್, ವ್ಯಾಖ್ಯಾನ– ಡಾ.ಎನ್.ಕೆ.ರಾಮಶೇಷನ್

ವಿಚ್ಛೇದಿತ ಮಹಿಳೆಗೆ ಬ್ಲಾಕ್‌ಮೇಲ್ ಮಾಡಿ ಹಣ ಸುಲಿಗೆ; ಪುತ್ರನ ಹತ್ಯೆ ಯತ್ನ

ಯುವಕ, ಆತನ ಗೆಳತಿ, ತಂದೆ-ತಾಯಿ ವಿರುದ್ಧ ಪ್ರಕರಣ ದಾಖಲು


ಮೈಸೂರು, ಮಾ. 6– ಫೇಸ್‌ಬುಕ್ ಮೂಲಕ ವಿಚ್ಛೇದಿತ ಮಹಿಳೆಯ ಸ್ನೇಹ ಸಂಪಾದಿಸಿ ಮದುವೆಯಾಗುವುದಾಗಿ ನಂಬಿಸಿ, ದೈಹಿಕ ಸಂಪರ್ಕ ಪಡೆದ ನಂತರ ಬ್ಲಾಕ್‌ಮೇಲ್ ಮಾಡಿ 25 ಲಕ್ಷ ರೂ. ಸುಲಿಗೆ ಮಾಡಿದ್ದಲ್ಲದೇ ಆಕೆಯ ಮಗನನ್ನು ಕಾರು ಹತ್ತಿಸಿ ಕೊಲೆ ಮಾಡಲು ಪ್ರಯತ್ನಿಸಿದ ಬಗ್ಗೆ ದೂರು ದಾಖಲಾಗಿದೆ. ಮಹಿಳೆಗೆ ಬ್ಲಾಕ್‌ಮೇಲ್ ಮಾಡಿದ ಸುಮಂತ್, ಆತನ ಗೆಳತಿ, ತಂದೆ ಅನಂತ್ ಮತ್ತು ತಾಯಿ ಲೀಲಾವತಿ ಆರೋಪಕ್ಕೆ ಗುರಿಯಾಗಿರುವವರು.

ವಿವರ: ಕಳೆದ 11 ವರ್ಷದ ಹಿಂದೆ ಗಂಡನಿಂದ ವಿಚ್ಛೇದನ ಪಡೆದು 16 ವರ್ಷದ ಮಗನ ಜೊತೆ ವಾಸಿಸುತ್ತಿದ್ದ 36 ವರ್ಷ ಮಹಿಳೆಗೆ 2 ವರ್ಷದ ಹಿಂದೆ ಫೇಸ್‌ಬುಕ್ ಮೂಲಕ ರಾಮಕೃಷ್ಣನಗರ ಐ ಬ್ಲಾಕ್ ನಿವಾಸಿ ಸುಮಂತ್ ಪರಿಚಯವಾಗಿದ್ದು, ಆಕೆಯನ್ನು ಮದುವೆಯಾಗುವುದಾಗಿ ನಂಬಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಮಹಿಳೆ ವಿಜಯನಗರದಲ್ಲಿ ತಾನು ವಾಸವಿದ್ದ ಬಾಡಿಗೆ ಮನೆ ಖಾಲಿ ಮಾಡಿ ಸುಮಂತ್‌ನೊಂದಿಗೆ ರಾಮಕೃಷ್ಣನಗರ ಐ ಬ್ಲಾಕ್ ಮನೆಯಲ್ಲಿ ವಾಸಿಸಲಾರಂಭಿಸಿದ್ದಾಳೆ ಎಂದು ದೂರಿನಲ್ಲಿ ಹೇಳಲಾಗಿದೆ.

ಈಕೆ ಜೊತೆ ದೈಹಿಕ ಸಂಪರ್ಕದ ದೃಶ್ಯಗಳನ್ನು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದ ಸುಮಂತ್, ಅದನ್ನು ತೋರಿಸಿ ಹಣ ಕೊಡದಿದ್ದರೆ ವಿಡಿಯೋ ಹಾಗೂ ಫೋಟೋಗಳನ್ನು ಆಕೆಯ ಸಂಬಂಧಿಕರು, ಸ್ನೇಹಿತರಿಗೆ ಕಳುಹಿಸುವುದಾಗಿಯೂ, ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡುವುದರ ಜೊತೆಗೆ ವೇಶ್ಯಾವಾಟಿಕೆ ನಡೆಸುತ್ತಿರುವುದಾಗಿ ಪೊಲೀಸರಿಗೆ ದೂರು ನೀಡುವುದಾಗಿ ಬ್ಲಾಕ್‌ಮೇಲ್ ಮಾಡಿ 25 ಲಕ್ಷ ರೂ.ಗಳನ್ನು ಪಡೆದಿದ್ದಾನೆ ಎಂದು ಆರೋಪಿಸಲಾಗಿದೆ.

ಪ್ರತಿದಿನ ಕುಡಿದು ಬಂದು ಹಲ್ಲೆ ನಡೆಸುತ್ತಿದ್ದ ಆತ, ಮಹಿಳೆ ಗರ್ಭ ಧರಿಸಿದ್ದಾಗ ಆಕೆಗೆ ಗೊತ್ತಿಲ್ಲದಂತೆ ಓಆರ್‌ಎಸ್‌ನಲ್ಲಿ ಯಾವುದೋ ಮಾತ್ರೆಗಳನ್ನು ಹಾಕಿ ಗರ್ಭಪಾತ ಆಗುವಂತೆ ಮಾಡಿದ್ದಾನೆ. ಆತ ಬೇರೆ ಯುವತಿಯೊಂದಿಗೆ ಸಂಬಂಧ ಹೊಂದಿದ್ದು, ಆಕೆಯ ಮೊಬೈಲ್‌ನಿಂದ ಮಹಿಳೆಗೆ ವಾಟ್ಸಾಪ್ ಸಂದೇಶ ಹಾಗೂ ವಿಡಿಯೋ ಕಾಲ್ ಮಾಡಿ ಕೊಲೆ ಬೆದರಿಕೆ ಹಾಕಿದ್ದಾನೆ. ಜನವರಿ 5ರಂದು ರಾತ್ರಿ 11 ಗಂಟೆ ಸುಮಾರಿನಲ್ಲಿ ರಾಮಕೃಷ್ಣನಗರದ ಮನೆಗೆ ಸುಮಂತ್‌ನ ತಂದೆ ಅನಂತ್ ಮತ್ತು ತಾಯಿ ಲೀಲಾವತಿ ಬಂದು ಮಗನಿಗೆ ಕುಮ್ಮಕ್ಕು ನೀಡಿ ಮಹಿಳೆ ಮೇಲೆ ಗಲಾಟೆ ಮಾಡಿಸಿದ್ದಾರೆ. ಇವರ ಹಿಂಸೆ ತಾಳಲಾರದೆ ಮಹಿಳೆ ಕಳೆದ ಕೆಲ ದಿನಗಳ ಹಿಂದೆ ಜೆ.ಪಿ. ನಗರದಲ್ಲಿ ಬಾಡಿಗೆ ಮನೆ ಮಾಡಿಕೊಂಡು ಮಗನೊಂದಿಗೆ ವಾಸಿಸಲಾರಂಭಿಸಿದ್ದಾಳೆ. ಕಳೆದ ಫೆಬ್ರವರಿ 21ರಂದು ಮಧ್ಯರಾತ್ರಿ ಮಹಿಳೆಯ ಮಗ ಮಾತ್ರ ಮನೆಯಲ್ಲಿದ್ದ ವೇಳೆ ಪಾನಮತ್ತನಾಗಿ ಅಲ್ಲಿಗೆ ಬಂದಿದ್ದ ಸುಮಂತ್, ರಸ್ತೆಯಲ್ಲಿ ನಿಂತು ಅವಾಚ್ಯ ಪದಗಳಿಂದ ಕೂಗಾಡಿದ್ದಾನೆ. ಫೆಬ್ರವರಿ 22ರಂದು ಮಹಿಳೆಯ ಮಗ ಕಾಲೇಜಿನಿಂದ ಸ್ನೇಹಿತನೊಂದಿಗೆ ಜೆ.ಪಿ.ನಗರದ ಅವಲಕ್ಕಿ ಫ್ಯಾಕ್ಟರಿ ರಸ್ತೆಯಲ್ಲಿ ಬರುತ್ತಿದ್ದ ವೇಳೆ ಕಾರಿನಲ್ಲಿ (ಕೆಎ 09–ಎಂಜಿ 6993) ಬಂದ ಸುಮಂತ್ ಮತ್ತು ಆತನ ಗೆಳತಿ, ಮಹಿಳೆಯ ಮಗನ ಮೇಲೆ ಕಾರು ಹರಿಸಲು ಪ್ರಯತ್ನಿಸಿದ್ದು, ಈ ವೇಳೆ ಬಾಲಕ ಪಕ್ಕಕ್ಕೆ ಸರಿದು ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಈ ನಡುವೆ ಸುಮಂತ್ ಹಾಗೂ ಆತನ ಗೆಳತಿ, ಮಹಿಳೆಗೆ ಕರೆ ಮಾಡಿ ಹಣ ನೀಡದಿದ್ದರೆ, ತಾಯಿ ಹಾಗೂ ಮಗನನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ ಎಂದು ಮಹಿಳೆ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡು ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಮೈಸೂರಲ್ಲಿ ಮತ್ತೆ ಮೂರ್‍ನಾಲ್ಕು ಕಡೆ ಸಣ್ಣ ಪುಟ್ಟ ಬೆಂಕಿ ಅವಘಡ



ಸಾಂದರ್ಭಿಕ ಚಿತ್ರ

ಅಗ್ನಿಶಾಮಕ ದಳದ ಅವಿರತ ಪ್ರಯತ್ನದ ಫಲ; ತಪ್ಪಿದ ಅನಾಹುತ

ಮೈಸೂರು, ಮಾ.6(ಎಸ್‌ಬಿಡಿ)– ಮೈಸೂರಿನಲ್ಲಿ ಸೋಮವಾರವೂ ಮೂರ್‍ನಾಲ್ಕು ಕಡೆ ಬೆಂಕಿ ಅವಘಡ ಸಂಭವಿಸಿದ್ದು, ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಹೆಚ್ಚಿನ ಅಪಾಯ ತಪ್ಪಿಸಿದ್ದಾರೆ.

ಹೆಬ್ಬಾಳು ಕೈಗಾರಿಕಾ ಪ್ರದೇಶದ ಖಾಲಿ ಜಾಗದ ಹುಲ್ಲುಗಾವಲಿಗೆ ಆಕಸ್ಮಿಕ ಬೆಂಕಿ ತಗುಲಿ ಒಣಗಿದ ಎಲೆಗಳಿಂದ ವೇಗವಾಗಿ ವ್ಯಾಪಿಸಿತ್ತು. ಕೂಡಲೇ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಬೆಂಕಿ ನಂದಿಸಿದರು. ವಿಜಯನಗರ ವಾಟ್ ಟ್ಯಾಂಕ್ ಬಳಿ ಖಾಸಗಿ ಬ್ಯಾಂಕ್ ಎಟಿಎಂನ ಯುಪಿಎಸ್‌ನಲ್ಲಿ ಬೆಂಕಿ ಉಂಟಾಗಿದ್ದರಿಂದ ಕೆಲಕಾಲ ಆತಂಕ ಸೃಷ್ಟಿಯಾಗಿತ್ತು. ಹಾಗೆಯೇ ಶಾರದಾದೇವಿನಗರದ ಮನೆಯೊಂದರ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸುತ್ತಮುತ್ತಲ ನಿವಾಸಿಗಳು ಗಾಬರಿಗೊಂಡಿದ್ದರು. ಅಗ್ನಿಶಾಮಕ ಸಿಬ್ಬಂದಿ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಅನಾಹುತ ತಡೆದರು.

ಜಯಪುರ ಹೋಬಳಿ ದಡದಹಳ್ಳಿ ಗ್ರಾಮಸ್ಥರೊಬ್ಬರ ಜಮೀನಿನಲ್ಲಿದ್ದ ಕಬ್ಬಿಗೆ ಆಕಸ್ಮಿಕ ಬೆಂಕಿ ತಗುಲಿತ್ತು. ಕೆಲಹೊತ್ತಿನಲ್ಲೇ ಬೆಂಕಿ ಜ್ವಾಲೆ ವ್ಯಾಪಿಸಿದ್ದರಿಂದ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದರು. ಆ ವೇಳೆ ವಿದ್ಯುತ್ ಕಡಿತವಾಗಿದ್ದರಿಂದ ಜನರೇಟರ್ ಮೂಲಕ ಬೋರ್‌ವೆಲ್‌ನಿಂದ ನೀರು ತೆಗೆದು ರೈತರೇ ಬಹುತೇಕ ಬೆಂಕಿ ಆರಿಸಿದ್ದರು. ಅಷ್ಟರಲ್ಲಿ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ಸಿಬ್ಬಂದಿಯೂ ಕಾರ್ಯಾಚರಣೆ ನಡೆಸಿ ಘಟನಾ ಸ್ಥಳದಲ್ಲಿ ಶಾಖದಿಂದ ಮತ್ತೆ ಬೆಂಕಿ ಉಂಟಾಗದಂತೆ ಕ್ರಮ ವಹಿಸಿದರು. ಅವಘಡದಿಂದ ಮೂರ್‍ನಾಲ್ಕು ತೆಂಗಿನಮರ ಹಾಗೂ ಸ್ವಲ್ಪ ಕಬ್ಬು ಬೆಳೆಗೆ ಹಾನಿಯಾಗಿದೆ. ತಕ್ಷಣ ಬೆಂಕಿ ನಂದಿಸದೇ ಹೋಗಿದ್ದರೆ ಪಕ್ಕದ ಜಮೀನಿನಲ್ಲಿರುವ ಕಬ್ಬು ಹಾಗೂ ಪೌಲ್ಟ್ರಿ ಫಾರಂಗೂ ಜ್ವಾಲೆ ವ್ಯಾಪಿಸುವ ಸಾಧ್ಯತೆ ಇತ್ತು ಎಂದು ಸ್ಥಳೀಯ ಜಯರಾಮು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದಿನವಿಡೀ ಕಾರ್ಯಾಚರಣೆ: ನಿನ್ನೆ ನಾಲ್ಕೈದು ಕಡೆ ಬೆಂಕಿ ಅವಘಡವಾಗಿತ್ತು. ಅದರಲ್ಲಿ 2 ಸ್ಥಳದಲ್ಲಿ ಬೆಂಕಿ ನಂದಿಸಲು ದಿನವಿಡೀ ಕಾರ್ಯಾಚರಣೆ ನಡೆಸಬೇಕಾಯ್ತು. ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ರಟ್ಟಿನ ಉತ್ಪನ್ನ ಸಿದ್ಧಪಡಿಸುವ ಕಾರ್ಖಾನೆಯಲ್ಲಿ ಬೆಂಕಿ ಅವಘಡ ಸಂಭವಿಸಿತ್ತು. ದಾಸ್ತಾನು ಮಾಡಿದ್ದ ರಟ್ಟಿನ ಶೀಟ್‌ಗಳಿಗೆ ಬೆಂಕಿ ಆವರಿಸಿದ್ದರಿಂದ 8 ವಾಹನಗಳ ಮೂಲಕ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಲಾಗಿತ್ತಾದರೂ ಸಂಪೂರ್ಣ ಶಮನವಾಗದ ಕಾರಣ ಇಂದು ಮಧ್ಯಾಹ್ನದವರೆಗೂ ಒಂದು ವಾಹನದಲ್ಲಿ ನೀರು ಸಿಂಪಡಿಸಿ ನಂದಿಸಲಾಯಿತು. ಹಾಗೆಯೇ ಸೀವೇಜ್ ಫಾರಂನಲ್ಲಿ ಹೊತ್ತಿದ್ದ ಬೆಂಕಿಯನ್ನು ಮುಂಜಾನೆ 4ರ ವೇಳೆಗೆ ತಹಬದಿಗೆ ತರಲಾಯಿತಾದರೂ ಒಂದು ವಾಹನದಲ್ಲಿ ಸಂಜೆವರೆಗೂ ಕಾರ್ಯಾಚರಣೆ ಮುಂದುವರೆಸಲಾಗಿತ್ತು ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಹೆಚ್.ರಾಜು ಹೇಳಿದರು.

ಬೆಂಕಿ ಹಾಕಬೇಡಿ...

ಒಣಗಿದ ಹುಲ್ಲುಗಾವಲಿಗೆ ಹಾಗೂ ಒಣ ಎಲೆಗಳಿಗೆ ದಯವಿಟ್ಟು ಬೆಂಕಿ ಹಾಕಬೇಡಿ. ಇದರಿಂದ ಹಾವು ಮತ್ತಿತರ ಜೀವಿಗಳ ಪ್ರಾಣ ಹಾನಿಯಾಗುತ್ತದೆ. ಮಳೆಗಾಲದಲ್ಲಿ ಎಲೆಗಳು ಕರಗಿ ಗೊಬ್ಬರವಾಗುತ್ತದೆ. ಯಾವ ಕಾರಣಕ್ಕೂ ಬೆಂಕಿ ನೀಡಬೇಡಿ. ಮನುಷ್ಯರಂತೆ ಎಲ್ಲಾ ಜೀವಿಗಳಿಗೂ ಭೂಮಿಯಲ್ಲಿ ಬದುಕುವ ಹಕ್ಕಿದೆ ಎನ್ನುವುದನ್ನು ಮರೆಯಬೇಡಿ.

-**ಸ್ನೇಕ್ ಶ್ಯಾಂ,** ಉರಗ ರಕ್ಷಕ


ಎಲ್ಲರೂ ಎಚ್ಚರವಹಿಸಬೇಕು...

ಗುಜರಿಗಳಲ್ಲಿ ಬೆಂಕಿ ಅವಘಡವಾಗದಂತೆ ಎಚ್ಚರವಹಿಸಬೇಕು. ಎಣ್ಣೆ ಡಬ್ಬಿಗಳನ್ನು ಶುಚಿಗೊಳಿಸದೆ ಹಾಗೆಯೇ ಬಿಸಾಡುವುದು, ಗ್ಯಾಸ್ ಸಿಲಿಂಡರ್‌ಗಳ ಬಗ್ಗೆ ನಿರ್ಲಕ್ಷಿಸುವುದು ಒಳ್ಳೆಯದಲ್ಲ. ವೈರ್‌ಗಳಲ್ಲಿರುವ ಲೋಹ ಬೇರ್ಪಡಿಸಲು ಬೆಂಕಿ ಹಾಕುತ್ತಾರೆ. ಇದರಿಂದ ಅಕ್ಕಪಕ್ಕದ ವಸ್ತುಗಳಿಗೆ ಬೆಂಕಿ ತಗುಲಿ ದೊಡ್ಡ ಅವಘಡ ಸಂಭವಿಸುವ ಸಾಧ್ಯತೆ ಇರುತ್ತದೆ. ಇನ್ನು ರಸ್ತೆ ಬದಿ ಕಸದ ರಾಶಿಗೆ ಬೆಂಕಿ ಹಾಕುವ ಕೃತ್ಯವೆಸಗಬಾರದು. ಒಣ ಎಲೆಗಳು, ಪ್ಲಾಸ್ಟಿಕ್, ಪೇಪರ್‌ಗಳನ್ನು ಗುಡ್ಡೆ ಹಾಕಿ ಬೆಂಕಿ ಹಾಕಬಾರದು. ಧೂಮಪಾನಿಗಳು ಬೀಡಿ, ಸಿಗರೇಟು ತುಂಡುಗಳನ್ನು ಎಲ್ಲೆಂದರಲ್ಲಿ ಬಿಸಾಡಬಾರದು. ಕನಿಷ್ಠ ಜಾಗೃತಿ, ಸಾಮಾಜಿಕ ಜವಾಬ್ದಾರಿ ಇಲ್ಲವಾದರೆ ಬೆಂಕಿ ಅವಘಡಗಳು ಹೆಚ್ಚಾಗಿ ಆರ್ಥಿಕ ನಷ್ಟದ ಜೊತೆಗೆ ಜೀವಹಾನಿಯಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಆಸ್ಪತ್ರೆಯಿಂದ ಎಚ್.ಡಿ.ದೇವೇಗೌಡರು ಡಿಸ್ಚಾರ್ಜ್

ಪಂಚರತ್ನ ರಥಯಾತ್ರೆ ಸಮಾರೋಪದಲ್ಲಿ ಭಾಗಿ

ಬೆಂಗಳೂರು: ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಮೊಣಕಾಲು ನೋವಿನ ಚಿಕಿತ್ಸೆಗಾಗಿ ಕಳೆದ ಐದು ದಿನಗಳಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು.



ಇದೀಗ ಮೊಣಕಾಲು ನೋವು ಕಡಿಮೆಯಾಗಿದ್ದು, ವೈದ್ಯರ ಸಲಹೆ ಮೇರೆಗೆ ಇಂದು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಮನೆಗೆ ಮರಳಿದ್ದಾರೆ ಮೊಣಕಾಲು ನೋವಿಗೆ ಚಿಕಿತ್ಸೆಗಾಗಿ ಕಳೆದ ಐದು ದಿನಗಳಿಂದ ಮಾಜಿ ಪ್ರಧಾನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇಂದು ಮುಂಜಾನೆಯೇ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಮನೆಗೆ ಮರಳಿದ್ದಾರೆ.

ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಫೆಬ್ರವರಿ 28ರಂದು ದಿಢೀರ್ ಆಸ್ಪತ್ರೆಗೆ ದಾಖಲಾಗಿದ್ದರು. ಇದರಿಂದ ಕಾರ್ಯಕರ್ತರು ಹಾಗೂ ಅಭಿಮಾನಿಗಳಲ್ಲಿ ಆತಂಕ ಮನೆ ಮಾಡಿತ್ತು. ಇದರಿಂದ ಟ್ವೀಟ್ ಮೂಲಕ ಮಾಹಿತಿ ನೀಡಿದ್ದ ದೇವೇಗೌಡರು, ಯಾರೂ ಗಾಬರಿಪಡುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ. ಮಾಮೂಲಿ ತಪಾಸಣೆಗಾಗಿ ಆಸ್ಪತ್ರೆಗೆ ಬಂದಿದ್ದೇನೆ. ಗಾಬರಿಗೊಳ್ಳುವ ಅಗತ್ಯವಿಲ್ಲ. ಮುಂದಿನ ಕೆಲವೇ ದಿನಗಳಲ್ಲಿ ಮನೆಗೆ ಮರಳಲಿದ್ದೇನೆ ಎಂದಿದ್ದರು.

ಜೆಡಿಎಸ್ ಹಮ್ಮಿಕೊಂಡಿರುವ ಪಂಚರತ್ನ ರಥಯಾತ್ರೆಯ ಸಮಾರೋಪ ಮಾರ್ಚ್ 26ರಂದು ನಡೆಯಲಿದ್ದು, ಆ ದಿನ ಕುಂಬಳಗೋಡಿನಿಂದ ಆರಂಭವಾಗುವ ರೋಡ್‌ಶೋದಲ್ಲಿ ಪಕ್ಷದ ವರಿಷ್ಠ ಎಚ್.ಡಿ.ದೇವೇಗೌಡ ಭಾಗವಹಿಸಲಿದ್ದಾರೆ.

ನಾಗಮಂಗಲ ಕ್ಷೇತ್ರದ ಶಾಸಕ ಸುರೇಶ್ ಗೌಡ ಅವರು ನಗರದಲ್ಲಿ ಭಾನುವಾರ ನಗರದಲ್ಲಿ ಆಯೋಜಿಸಿದ್ದ ಕ್ಷೇತ್ರದ ನಿವಾಸಿಗಳ ಸಭೆಯಲ್ಲಿ ಮಾತನಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಈ ವಿಷಯ ತಿಳಿಸಿದರು. ಮಂಡ್ಯ ಮತ್ತು ಮೈಸೂರು ನಡುವಿನ ಸ್ಥಳವೊಂದರಲ್ಲಿ ಯಾತ್ರೆಯ ಸಮಾರೋಪ ನಡೆಯಲಿದೆ. ಸಮಾರೋಪದ ಸ್ಥಳದವರೆಗೂ ರೋಡ್ ಶೋ ನಡೆಸಲಿರುವ ದೇವೇಗೌಡರು, ಪಕ್ಷಕ್ಕೆ ಶಕ್ತಿ ತುಂಬಲಿದ್ದಾರೆ ಎಂದರು.

ರಾಮಕೃಷ್ಣ ವಿದ್ಯಾಶಾಲೆಗೆ ಪ್ರತಿಭಾವಂತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅರ್ಜಿ ಆಹ್ವಾನ

ಮೈಸೂರು, ಮಾ.6– ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2023–24ನೇ ಶೈಕ್ಷಣಿಕ ಸಾಲಿನ ರಾಮಕೃಷ್ಣ ವಿದ್ಯಾಶಾಲೆಗೆ ಪ್ರತಿಭಾವಂತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು 8ನೇ ತರಗತಿಗೆ ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ ಮಾಡಲು ಏ.20 ರಂದು ಪ್ರವೇಶ ಪರೀಕ್ಷೆ ನಿಗದಿಪಡಿಸಿದ್ದು, ಪರೀಕ್ಷೆಗೆ ಹಾಜರಾಗಲು ಆಸಕ್ತಿ ಹೊಂದಿರುವ ಪರಿಶಿಷ್ಟ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಮಾ.31 ರ ಒಳಗೆ ಮೈಸೂರಿನ ಡಾ. ಬಾಬು ಜಗಜೀವನ್ ರಾಮ್ ಭವನದ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಗಳ ಕಚೇರಿಯಲ್ಲಿ ಅರ್ಜಿಗಳನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2427140 ಸಂಪರ್ಕಿಸಬಹುದು ಎಂದು ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಯಿ ಸಾಕಾಣಿಕೆಗೆ ನೋಂದಣಿ ಕಡ್ಡಾಯ

ಮೈಸೂರು, ಮಾ.6– ನಾಯಿಗಳ ತಳಿ ಸಂವರ್ಧನೆ, ಮಾರಾಟ ಹಾಗೂ ಮುದ್ದಿನ ಪ್ರಾಣಿಗಳ ಮಳಿಗೆ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿ ಅಥವಾ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳಿಂದ (Local Bodies) ಪಡೆಯುವ ಮುನ್ನ ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿಯಲ್ಲಿ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯಿದೆ (ನಾಯಿ ತಳಿ ಸಂವರ್ಧನೆ ಮತ್ತು ಮಾರಾಟ ನಿಯಮ–2017 ಮತ್ತು ಮುದ್ದಿನ ಪ್ರಾಣಿ ಮಳಿಗೆ ನಿಯಮ 2018 ರ ಸೆಕ್ಷನ್ 3, 4 ಮತ್ತು 5ರ) ಅಡಿಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ.

ಆದ್ದರಿಂದ ನಾಯಿಗಳ ತಳಿ ಸಂವರ್ಧನೆ, ಮಾರಾಟ ಹಾಗೂ ಮುದ್ದಿನ ಪ್ರಾಣಿಗಳ ಮಳಿಗೆ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿ, ಸಂಸ್ಥೆಗಳು 30 ದಿನದೊಳಗೆ ಭರ್ತಿ ಮಾಡಿದ ನಮೂನೆ (Form-I) ಯಲ್ಲಿ ಅಗತ್ಯ ದಾಖಲಾತಿಗಳು ಹಾಗೂ ನಿಗದಿಪಡಿಸಿದ ಶುಲ್ಕದೊಂದಿಗೆ ನೋಂದಣಿ ಕೋರಿ ಜಿಲ್ಲಾ ಪ್ರಾಣಿದಯಾ ಸಂಘದ ಉಪನಿರ್ದೇಶಕರು ಹಾಗೂ ಕಾರ್ಯದರ್ಶಿಗಳ ಕಚೇರಿ ಅಥವಾ ಧನ್ವಂತರಿ ರಸ್ತೆಯ ಪಶುಪಾಲನಾ ಇಲಾಖೆಗೆ ಸಲ್ಲಿಸಬೇಕು. ತಪ್ಪಿದಲ್ಲಿ ಅಂಥವರ ವಿರುದ್ಧ ಕ್ರಮ ಜರುಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ www.kawb.karnataka.nic.in, ಇ-ಮೇಲ್:kawb2021@gmail.com ಹಾಗೂ ದೂ.ಸಂ: 080–29901411 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪ್ರಾಣಿದಯಾ ಸಂಘದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗೃಹ ಬಳಕೆ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಖಂಡಿಸಿ

ಮೈಸೂರಲ್ಲಿ ಮಹಿಳಾ ಕಾಂಗ್ರೆಸ್ ವತಿಯಿಂದ ಬೃಹತ್ ಪ್ರತಿಭಟನೆ



ಮೈಸೂರು, ಮಾ.2(ಆರ್‌ಕೆ)– ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಖಂಡಿಸಿ ಬಿಜೆಪಿ ಸರ್ಕಾರದ ವಿರುದ್ಧ ಮೈಸೂರಿನ ಗಾಂಧಿ ಚೌಕದಲ್ಲಿ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು ಇಂದು ಬೃಹತ್ ಪ್ರತಿಭಟನೆ ನಡೆಸಿದರು.

ರಾಜ್ಯ ಮಹಿಳಾ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಗ್ಯಾಸ್ ಸಿಲಿಂಡರ್ ಮೇಲೆ ಸೌಟಿನಿಂದ ಕುಟ್ಟಿ ಬಿಜೆಪಿ ಸರ್ಕಾರದ ವಿರುದ್ಧ ಕಿಡಿಕಾರಿದ ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು, ತಕ್ಷಣವೇ ಅಡುಗೆ ಅನಿಲ ಸಿಲಿಂಡರ್ ಬೆಲೆ ಕಡಿಮೆ ಮಾಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭ ಮಾತನಾಡಿದ ಡಾ.ಪುಷ್ಪಾ ಅಮರನಾಥ್, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಪೆಟ್ರೋಲ್, ಡೀಸೆಲ್ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿದೆ. 410 ರೂ. ಇದ್ದ ಸಿಲಿಂಡರ್ ಬೆಲೆ ಇಂದು 1200 ರೂ.ಗೇರಿದೆ. ಬಡವರ ಹಣ ಸುಲಿಗೆ ಮಾಡುವುದೇ ಬಿಜೆಪಿಯವರ ಉದ್ದೇಶವಾಗಿದೆ. ನಿಮ್ಮ ದಮ್ಮು, ತಾಕತ್ತನ್ನು ಗ್ಯಾಸ್ ಸಿಲಿಂಡರ್ ಬೆಲೆ ಇಳಿಕೆ ಮಾಡಿ ತೋರಿಸಿ. ಸಿದ್ದರಾಮಯ್ಯರನ್ನು ಹೊಡೆದು ಹಾಕಿ ಎಂದು ಹೇಳುವ ಬಿಜೆಪಿ ನಾಯಕರು, ಬೆಲೆ ಏರಿಕೆ ಬಗ್ಗೆ ಮಾತನಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ವಿರುದ್ಧವೂ ವಾಗ್ದಾಳಿ ನಡೆಸಿದ ಡಾ. ಪುಷ್ಪಾ ಅಮರನಾಥ್, ನಿಮ್ಮ ಮನೆಗಳಲ್ಲಿ ಅಡುಗೆ ಮಾಡಲ್ವಾ, ದರ ಏರಿಕೆ ಬಗ್ಗೆ ನೀವ್ಯಾಕೆ ಮಾತನಾಡುತ್ತಿಲ್ಲ ಎಂದರಲ್ಲದೆ, ಜನ ಸಾಮಾನ್ಯರ ಬಗ್ಗೆ ಕಾಳಜಿ ಇಲ್ಲದ ಬಿಜೆಪಿಗರು ಕೇವಲ ಕಮಿಷನ್ ದಂಧೆಯಲ್ಲಿ ನಿರತರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ತಕ್ಷಣ ಅಡುಗೆ ಅನಿಲ ಸಿಲಿಂಡರ್ ಬೆಲೆ ಇಳಿಸದಿದ್ದಲ್ಲಿ ರಾಜ್ಯಾದ್ಯಂತ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ನಗರ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾಲತಾ ಚಿಕ್ಕಣ್ಣ, ಜಿಲ್ಲಾಧ್ಯಕ್ಷೆ ಲತಾ ಸಿದ್ದಶೆಟ್ಟಿ, ಕೆಪಿಸಿಸಿ ಮಹಿಳಾ ಘಟಕದ ಉಪಾಧ್ಯಕ್ಷೆ ಪುಷ್ಪಾವಲ್ಲಿ, ಮುಖಂಡರುಗಳಾದ ಚಂದ್ರಕಲಾ, ರಾಧಾಮಣಿ, ಲತಾ ಮೋಹನ್, ಭವ್ಯ ನಾಗರತ್ನ, ಹೇಮಾ ಸಿಂಗ್, ಮಂಜುಳಾ, ಕುಮಾರಿ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


ವಿಶೇಷ ನಗದು ಬಹುಮಾನಕ್ಕೆ ವಿದ್ಯಾರ್ಥಿನಿ ನಕಲಿ ಅಂಕಪಟ್ಟಿ ಸಲ್ಲಿಕೆ!

ಮೈಸೂರು, ಮಾ.6– ನಕಲಿ ಅಂಕಪಟ್ಟಿ ಸೃಷ್ಟಿಸಿ, ವಿಶೇಷ ನಗದು ಬಹುಮಾನಕ್ಕೆ ಅರ್ಜಿ ಸಲ್ಲಿಸಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪದವಿಯಲ್ಲಿ ಉತ್ತಮ ಅಂಕಗಳನ್ನು ಪಡೆದು ತೇರ್ಗಡೆ ಹೊಂದಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದ್ಯಾರ್ಥಿಗಳಿಗೆ ನೀಡುವ 25 ಸಾವಿರ ರೂ.ಗಳ ವಿಶೇಷ ನಗದು ಬಹುಮಾನಕ್ಕೆ ಪ್ರಥಮ ಸೆಮಿಸ್ಟರ್‌ನ ನಕಲಿ ಅಂಕಪಟ್ಟಿಯ ಜೆರಾಕ್ಸ್ ಪ್ರತಿ ಸಲ್ಲಿಸಲಾಗಿದೆ.

ಮೈಸೂರಿನ ಯುವರಾಜ ಕಾಲೇಜು ವಿದ್ಯಾರ್ಥಿನಿಯೊಬ್ಬರು 2021ರಲ್ಲಿ ವಿಶೇಷ ನಗದು ಬಹುಮಾನಕ್ಕೆ ಅರ್ಜಿ ಸಲ್ಲಿಸಿದ್ದು, ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆಸುವ ಅರ್ಜಿ ಪರಿಶೀಲನೆ ವೇಳೆ ನಕಲಿ ಅಂಕ ಪಟ್ಟಿ ಸಲ್ಲಿಸಿರುವುದು ದೃಢಪಟ್ಟಿದೆ. ಅಲ್ಲದೆ ನಕಲಿ ಅಂಕಪಟ್ಟಿಯ ಜೆರಾಕ್ಸ್ ಪ್ರತಿಗೆ ಯುವರಾಜ ಕಾಲೇಜಿನ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರು ದೃಢೀಕರಿಸಿರುವುದು ಹಲವು ಅನುಮಾನಗಳನ್ನು ಹುಟ್ಟುಹಾಕಿದೆ.

ಇಂದು ಯೋಗಿನಾರೇಯಣ ಯತೀಂದ್ರರ ಜಯಂತಿ

ಮೈಸೂರು, ಮಾ.6– ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಮಾ.7 ರಂದು ಬೆಳಗ್ಗೆ 11 ಗಂಟೆಗೆ ಕರ್ನಾಟಕ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಯೋಗಿ ನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸುವರು.



ಅಧ್ಯಕ್ಷತೆಯನ್ನು ಶಾಸಕ ಎಲ್.ನಾಗೇಂದ್ರ ವಹಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು.

ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ತನ್ವೀರ್ ಸೇಠ್, ಸಾರಾ ಮಹೇಶ್, ಜಿ.ಟಿ. ದೇವೇ ಗೌಡ, ಕೆ.ಮಹದೇವ್, ಹರ್ಷ ವರ್ಧನ್, ಅಶ್ವಿನ್ ಕುಮಾರ್, ಹೆಚ್.ಪಿ ಮಂಜುನಾಥ್, ಎಸ್.ಎ.ರಾಮದಾಸ್, ಡಾ. ಯತೀಂದ್ರ ಎಸ್, ಅನಿಲ್‌ಕುಮಾರ್ .ಸಿ ಹಾಗೂ ವಿಧಾನಪರಿಷತ್ತಿನ ಶಾಸಕರಾದ ಡಾ. ಡಿ.ತಿಮ್ಮಯ್ಯ, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಎಚ್.ವಿಶ್ವನಾಥ್ ಹಾಗೂ ಮಧು ಜಿ. ಮಾದೇಗೌಡ ಒಳಗೊಂಡಂತೆ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

8 ವರ್ಷದವಳಿದ್ದಾಗ ತಂದೆಯಿಂದಲೇ ಲೈಂಗಿಕ ದೌರ್ಜನ್ಯ

ಎಷ್ಟು ಹೇಳಿದರೂ ನನ್ನ ತಾಯಿ ನಂಬುತ್ತಿರಲಿಲ್ಲ: ಖುಷ್ಬೂ ಸುಂದರ್

ಚೆನ್ನೈ: ನಟಿ ಖುಷ್ಬೂ ಸುಂದರ್ ಇತ್ತೀಚೆಗೆ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಆಗಿ ಕಾರ್ಯ ಆರಂಭಿಸಿದ್ದಾರೆ. ಈ ವೇಳೆ ಅವರು ತಮಗಾದ ಲೈಂಗಿಕ ದೌರ್ಜನ್ಯದ ಬಗ್ಗೆ ಮಾತನಾಡಿದ್ದಾರೆ. ಇದರ ಜೊತೆ ಅನೇಕರಿಗೆ ಧೈರ್ಯ ತುಂಬುವ ಕೆಲಸ ಮಾಡಿದ್ದಾರೆ.

8ನೇ ವಯಸ್ಸಿಗೆ ತಂದೆ ಮಾಡಿದ ಕೃತ್ಯದ ಬಗ್ಗೆ ಇತ್ತೀಚೆಗೆ ನೀಡಿದ ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ. ಬಾಲ್ಯದಲ್ಲಿ ಏನಾದರೂ ದೌರ್ಜನ್ಯ ನಡೆದರೆ ಮಕ್ಕಳು ಅದನ್ನು ಜೀವನಪರ್ಯಂತ ನೆನಪಿಟ್ಟುಕೊಳ್ಳುತ್ತಾರೆ. ಅದು ಹುಡುಗ ಆಗಿರಬಹುದು, ಹುಡುಗಿ ಆಗಿರಬಹುದು.

ನನ್ನ ತಾಯಿ ಮದುವೆ ಜೀವನ ತುಂಬ ಕೆಟ್ಟದಾಗಿತ್ತು. ಬಹುಶಃ ಪುರುಷ ತನ್ನ ಪತ್ನಿ, ಮಗಳಿಗೆ ಹೊಡೆಯೋದು ಜನ್ಮಸಿದ್ಧ ಹಕ್ಕು ಎಂದುಕೊಂಡಿರಬಹುದು. ನನಗೆ 8ನೇ ವಯಸ್ಸಿದ್ದಾಗ ದೌರ್ಜನ್ಯ ಶುರುವಾಗಿದ್ದು, ನಾನು 15ನೇ ವಯಸ್ಸಿಗೆ ಅದರ ವಿರುದ್ಧ ಮಾತನಾಡಲು ಆರಂಭಿಸಿದೆ ಎಂದು ಖುಷ್ಬೂ ಸುಂದರ್ ಹೇಳಿದ್ದಾರೆ.



ನಾನು ನನ್ನ ಮೇಲೆ, ತಾಯಿ ಮೇಲೆ ಆಗುತ್ತಿರುವ ದೌರ್ಜನ್ಯದ ಬಗ್ಗೆ ಮಾತನಾಡುವ ಸಮಯ ಬಂದಿತ್ತು, ಆದರೆ ಇದರಿಂದ ಇನ್ನೊಂದಿಷ್ಟು ಸಮಸ್ಯೆ ಆಗುತ್ತೆ ಅಂತ ಕುಟುಂಬಸ್ಥರು ನನ್ನ ಬಾಯಿ ಮುಚ್ಚಿಸಿದರು ಎಂದಿರುವ ಖುಷ್ಬೂ ಸುಂದರ್ ಅವರು, ನನ್ನ ಪತಿಯೇ ದೇವರು ಎಂದು ನಂಬಿಕೊಂಡಿದ್ದ ನನ್ನ ತಾಯಿ, ನನ್ನ ಮೇಲಿನ ಲೈಂಗಿಕ ದೌರ್ಜನ್ಯವನ್ನು ನಂಬೋದಿಲ್ಲ ಎನ್ನುವ ಭಯ ಇತ್ತು.

ಆದರೆ 15ನೇ ವಯಸ್ಸಿಗೆ ಸಾಕು ಇದು, ಮಾತನಾಡೋಣ ಅಂತ ನಾನು ಫಿಕ್ಸ್ ಆಗಿದ್ದೆ. ನನಗೆ 16 ತುಂಬಿರಲಿಲ್ಲ, ಆಗಲೇ ನನ್ನ ತಂದೆ ನಮ್ಮ ಬಳಿ ಇರೋದನ್ನೆಲ್ಲ ತೆಗೆದುಕೊಂಡು ಮನೆ ಬಿಟ್ಟು ಹೋದರು. ನಮ್ಮ ಮುಂದಿನ ಊಟ ಎಲ್ಲಿಂದ ಬರುತ್ತದೆ ಅಂತ ಕೂಡ ಗೊತ್ತಿರಲಿಲ್ಲ, ನಂತರದ ದಿನಗಳಲ್ಲಿ ಹೆಚ್ಚು ಧೈರ್ಯ ಬಂತು. ತಪ್ಪಿನ ವಿರುದ್ಧ ಅವರು ಸಿಡಿದೆದ್ದರು. ಖುಷ್ಬೂ ಅವರು ಕನ್ನಡ, ತಮಿಳು ಮೊದಲಾದ ಭಾಷೆಗಳಲ್ಲಿ ನಟಿಸಿದ್ದಾರೆ.

ಮಾಜಿ ಸಿಎಂ ಸಿದ್ದರಾಮಯ್ಯರಿಂದ ಮೌರ್ಯ ಆಸ್ಪತ್ರೆ ಉದ್ಘಾಟನೆ





ಮೈಸೂರು, ಮಾ.6(ಎಸ್‌ಪಿಎನ್)– ಮೈಸೂರು ನಗರದ ಜನತಾನಗರದಲ್ಲಿ 200 ಹಾಸಿಗೆವುಳ್ಳ 'ಮೌರ್ಯ ಆಸ್ಪತ್ರೆ'ಯನ್ನು ಮಾಜಿ ಸಿಎಂ ಸಿದ್ದರಾಮಯ್ಯ ಸೋಮವಾರ ಉದ್ಘಾಟಿಸಿದರು.

ಈ ವೇಳೆ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಮೌರ್ಯ ಆಸ್ಪತ್ರೆ ಛೇರ್ಮನ್ ಜೆ.ಜೆ.ಆನಂದ, ಜಿ.ಸಿ.ವಸಂತ ಕುಮಾರಿ, ನಿರ್ದೇಶಕರಾದ ಪವನರಾಜ್, ಡಾ.ಎ.ವಿ.ರಾಹುಲ್, ಬೆಳ್ಳೂರಿನ ಆದಿಚುಂಚನಗಿರಿ ಮೆಡಿಕಲ್ ಕಾಲೇಜಿನ ಎ.ವಿ. ರೋಹನ್, ಕಮಲಮ್ಮ, ಚಿಕ್ಕಣ್ಣ, ಚಂದ್ರಿಕಾ, ಮಾಜಿ ಮೇಯರ್‌ಗಳಾದ ಮೋದಾಮಣಿ, ಪುಷ್ಪಾಲತಾ ಚಿಕ್ಕಣ್ಣ, ಟಿ.ಬಿ.ಚಿಕ್ಕಣ್ಣ, ಮಾಜಿ ಶಾಸಕ ಎಂ.ಕೆ ಸೋಮಶೇಖರ್, ಜಿಪಂ ಮಾಜಿ ಅಧ್ಯಕ್ಷ ಕೆಮರೀಗೌಡ, ತಾಪಂ ಮಾಜಿ ಅಧ್ಯಕ್ಷೆ ಮಂಜುಳಾ, ಮುಖಂಡರಾದ ದೊಡ್ಡಸ್ವಾಮಿಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕರ್ನಾಟಕ ರಾಜ್ಯ ಬೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಸೀತಾರಾಮು, ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಂ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಆಸ್ಪತ್ರೆ ಉದ್ಘಾಟನೆ ಮಾಡಿ ಸಿದ್ದರಾಮಯ್ಯ ಕಾರ್ಯನಿಮಿತ್ತ ನಿರ್ಗಮಿಸಿದರು. ನಂತರ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಹಿಂದುಳಿದ ವರ್ಗದವರು 200 ಹಾಸಿಗೆಯುಳ್ಳ ಆಸ್ಪತ್ರೆ ಸ್ಥಾಪಿಸುವುದು ಸುಲಭದ ಮಾತಲ್ಲ. ಮೌರ್ಯ ಆಸ್ಪತ್ರೆಯ ಛೇರ್ಮನ್ ಜೆ.ಜೆ.ಆನಂದ್ ಧೈರ್ಯ ಮಾಡಿ, ಉತ್ತಮ ಆಸ್ಪತ್ರೆ ನಿರ್ಮಾಣ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಿಂದುಳಿದ ವರ್ಗದ ಉದ್ಯಮಿಗಳು ಸ್ಪರ್ಧಾತ್ಮಕ ಜಗತ್ತಿನಲ್ಲಿ ಪೈಪೋಟಿಗಿಳಿಯ ಬೇಕಾಗಿದೆ. ಇದರಿಂದ ನೂರಾರು ಯುವಕ–ಯುವತಿಯರಿಗೆ ಉದ್ಯೋಗ ಸೃಷ್ಟಿಯಾದಂತಾಗುತ್ತದೆ ಎಂದರು.

ಹಿಂದುಳಿದ ಸಮುದಾಯ ಆರೋಗ್ಯ, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲೂ ಉದ್ಯಮಗಳನ್ನು ಸ್ಥಾಪಿಸಲು ಮುಂದಾಗಬೇಕು ಎಂದು ಸಲಹೆ ನೀಡಿದ ಅವರು, ಈ ಬಡಾವಣೆಯ ಜನರು ಇದರ ಸೇವೆ ಪಡೆದು ಕೊಳ್ಳಲು ಮುಂದಾಗಬೇಕು ಎಂದು ತಿಳಿಸಿದರು.

ಕಳೆಗಟ್ಟಿದ ಮೆರವಣಿಗೆ: ಮೈಸೂರು ರಾಮಕೃಷ್ಣನಗರದ ತಮ್ಮ ನಿವಾಸದಿಂದ ಆಸ್ಪತ್ರೆಗೆ ಮಾಜಿ ಸಿಎಂ ಸಿದ್ದರಾಮಯ್ಯ ನವರು ಬೆಂಬಲಿಗರೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ, ಅಜುಬಾಜಲ್ಲಿ ನೆರೆದಿದ್ದವರಿಗೆ ಕೈಬೀಸುತ್ತಾ ಮೆರವಣಿಗೆಯಲ್ಲಿ ಬಂದರು. ವಿವಿಧ ಜಾನಪದ ತಂಡಗಳು ಮೆರವಣಿಗೆಗೆ ಮೆರಗು ತಂದವು.

ಈ ಸಂದರ್ಭದಲ್ಲಿ ಜನತಾನಗರ ಬಡಾವಣೆಯಲ್ಲಿ ಜೆಸಿಬಿಯಲ್ಲಿ ಹೂ ಮಳೆಗೈಯ್ದರು. ನಂತರ ಬಿಸಿಲು ಮಾರಮ್ಮ ವೃತ್ತದಲ್ಲಿ ಜೆಸಿಬಿ ಮೂಲಕ ಬೃಹತ್ ಹಾರ ಹಾಕಿ, ಅಭಿಮಾನಿಗಳು ಖುಷಿ ಪಟ್ಟರು. ಈ ವೇಳೆ ಘೋಷಣೆಗಳನ್ನು ಕೂಗಿ, ಜೈಕಾರ ಮೊಳಗಿಸಿದರು. ಕೆಲವರು ಮೌರ್ಯ ಆಸ್ಪತ್ರೆ ಉದ್ಘಾಟನೆ ಮುಗಿಸಿ ಸಿದ್ದರಾಮಯ್ಯರು ಹೊರಡುವ ವೇಳೆ 'ಟಗರು ಬಂತು ಟಗರು' ಹಾಡು ಹಾಕಿ, ವಿವಿಧ ಘೋಷಣೆಗಳ ಕೂಗಿ, ಅವರನ್ನು ಅಭಿಮಾನಿಗಳು ಬೀಳ್ಕೊಟ್ಟಿದ್ದು, ವಿಶೇಷವಾಗಿತ್ತು.

ನಕ್ಕರೆ ಅದೇ ಸ್ವರ್ಗ

ಪತ್ನಿ : ನೀನು ಜತೇಲಿ ಇರುವುದಾದರೆ ನರಕದಲ್ಲೂ ಸ್ವರ್ಗ ಕಾಣ್ತೇನಿ ಅಂತ ಮದುವೆಗೆ ಮೊದಲು ಹೇಳ್ತಿದ್ದೀರಲ್ಲಾ ನೆನಪಿಲ್ಲವೇ?

ಪತಿ : ಹೌದೇ, ಆದರೆ ನಿನ್ನ ಮಾತನ್ನು ಈ ರೀತಿ ನಿಜ ಮಾಡ್ತೋಕೆ ಪ್ರಯತ್ನಿಸುತ್ತೀಯಾ ಅಂತ ನನಗೆ ಗೊತ್ತಿರಲಿಲ್ಲ"

ಮೈಸೂರು ಮಿತ್ರ

ಮಂಗಳವಾರ, 7 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಪರೋಪಕಾರಕ್ಕಾಗಿ ಮರಗಳು ಹಣ್ಣು ಬಿಡುತ್ತವೆ. ನದಿಗಳು ಹರಿಯುತ್ತವೆ. ಹಸುಗಳು ಹಾಲು ಕರೆಯುತ್ತವೆ. ಈ ಶರೀರವು ಪರೋಪಕಾರಕ್ಕಾಗಿಯೇ ಇದೆ. – ವಿಕ್ರಮ ಚರಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲಾಭಕ್ಕೆ ಸಕ್ಕರೆ ಮಾರಿ ಗೋಣಿ ಚೀಲ ನೆಕ್ಕಿದ

ನಿಮ್ಮ ಪತ್ರಗಳು

ತಡೆಯಾಜ್ಞೆ ತಂದ ಸಕ್ಕರೆ ಕಾರ್ಖಾನೆಗಳ ಒಳೇಟು

ಮಾನ್ಯರೆ,

ಕಬ್ಬು ಬೆಳೆಗಾರರಿಗೆ ಸಕ್ಕರೆ ಕಾರ್ಖಾನೆಗಳು ಟನ್ ಕಬ್ಬಿಗೆ ಹೆಚ್ಚುವರಿಯಾಗಿ 150 ರೂ. ನೀಡಬೇಕೆಂಬ ಸರ್ಕಾರದ ಆದೇಶಕ್ಕೆ ಕಿಮ್ಮತ್ತು ನೀಡದೆ ವಿಶೇಷ ನ್ಯಾಯಾಲಯದಲ್ಲಿ ಅಮೈಡ್ಮೆಂಟ್ ಪಿಟಿಷನ್ ಹಾಕಿ ತಡೆಯಾಜ್ಞೆ ತಂದು ಅದರ ಪ್ರತಿಯನ್ನೂ ಕೊಡದೆ, ರೈತರಿಗೆ ಹೆಚ್ಚುವರಿ ಹಣವನ್ನು ನೀಡದೆ ಇರುವುದು ವಿಷಾದಕರ ಸಂಗತಿ. ರೈತರೊಂದಿಗೆ ಹಾಗೂ ಸರ್ಕಾರದೊಂದಿಗೆ ಸಾಮರಸ್ಯದಿಂದ ಇರಬೇಕಾಗಿದ್ದರೆ, ಸಕ್ಕರೆ ಕಾರ್ಖಾನೆಗಳು ತಡೆಯಾಜ್ಞೆ ತರದೆ ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಿತ್ತು. ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ರೈತ ಮುಖಂಡರು ಹಾಗೂ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಪ್ರತಿನಿಧಿಗಳೊಂದಿಗಿನ ಸಭೆಯ ವೇಳೆ ವಿಷಯ ತಿಳಿದು ಕಬ್ಬು ಅಭಿವೃದ್ಧಿ ಆಯುಕ್ತರಿಗೆ ಕರೆ ಮಾಡಿ ಖಚಿತಪಡಿಸಿಕೊಂಡ ನಂತರ, ತಡೆಯಾಜ್ಞೆ ತೆರವಿಗಾಗಿ ಪ್ರಯತ್ನಿಸುವುದಾಗಿ ಸಕ್ಕರೆ ಅಭಿವೃದ್ಧಿ ಆಯುಕ್ತರು ತಿಳಿಸಿದ್ದು, ನಾನು ಮಾರ್ಚ್ 10 ರೊಳಗೆ ಅಡ್ವೊಕೇಟ್ ಜನರಲ್ ಹಾಗೂ ಮುಖ್ಯ ಕಾರ್ಯದರ್ಶಿಗಳನ್ನು ಭೇಟಿ ಮಾಡಿ ರೈತರ ಸಮಸ್ಯೆ ಹಾಗೂ ಆಗ್ರಹವನ್ನು ತಿಳಿಸುತ್ತೇನೆ. ತಡೆಯಾಜ್ಞೆ ಇರುವ ಕಾರಣ ನನ್ನ ಹಂತದಲ್ಲಿ ಏನೆಲ್ಲಾ ಪ್ರಯತ್ನ ಮಾಡಬಹುದೋ ಖಂಡಿತಾ ಮಾಡುತ್ತೇನೆ ಎಂದು ತಿಳಿಸಿರುವುದು ಸ್ವಾಗತಾರ್ಹ. **–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ. ನಗರ, ಮೈಸೂರು.**

ಜನಸಾಮಾನ್ಯರ ಬೇಡಿಕೆ ಕೇಳುವವರು ಯಾರು?

ಮಾನ್ಯರೇ,

ದಿನದಿಂದ ದಿನಕ್ಕೆ ಎಲ್ಲಾ ವಸ್ತುಗಳ ಧಾರಣೆ ಗಗನಕ್ಕೇರುತ್ತಿದೆ. ಈಗ ಮತ್ತೆ ದಿನನಿತ್ಯ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಾಗಿದೆ. ಇತ್ತೀಚಿನ ದಿನಗಳಲ್ಲಿ ಯಾವುದೇ ವಸ್ತುವಿನ ಬೆಲೆ ಇಳಿಕೆಯಾಗುವುದು ಕನಸಿನ ಮಾತಾಗಿದೆ.

ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವವರು, ಸಣ್ಣಪುಟ್ಟ ವ್ಯಾಪಾರಸ್ಥರು, ಕೂಲಿ ಕಾರ್ಮಿಕರು ತಾವು ಗಳಿಸುವ ಅಲ್ಪ ಆದಾಯದಿಂದ ಜೀವನ ಸಾಗಿಸುವುದು ನಿಜಕ್ಕೂ ದುಸ್ತರವಾಗಿದೆ. ಅವರು ತಮ್ಮ ದುಸ್ಥಿತಿಯನ್ನು ಯಾರ ಬಳಿ ಹೇಳಿಕೊಳ್ಳುವುದು? ರಜೆ ಇಲ್ಲದೇ 24 ಗಂಟೆ ದುಡಿದರೂ ಇಂದಿನ ಪರಿಸ್ಥಿತಿಯಲ್ಲಿ ಜೀವನ ಸಾಗಿಸುವುದೇ ಕಷ್ಟಕರವಾಗಿದೆ. ಖಾಸಗಿ ಆಸ್ಪತ್ರೆ, ಶಿಕ್ಷಣ ದುಬಾರಿಯಾಗಿದ್ದು, ಅವುಗಳ ವೆಚ್ಚ ಭರಿಸಲಾಗದ ಸ್ಥಿತಿ. ದಿನನಿತ್ಯ ಬಳಕೆಯ ವಸ್ತುಗಳ ಬೆಲೆ ಏರಿಕೆ, ಹೀಗೇ... ಪಟ್ಟಿ ಬೆಳೆಯುತ್ತಲೇ ಹೋಗುತ್ತಿದೆ. ಸರಕಾರ ತನ್ನ ನೌಕರರಿಗೆ ಶೇ.17 ವೇತನ ಹೆಚ್ಚಿಸಿದೆ. ಸಂತಸದ ವಿಚಾರ, ಅದಕ್ಕೆ ತಕ್ಕಂತೆ ನೀತಿ ನಿಯಮಾವಳಿಗಳನ್ನು ರೂಪಿಸಲಿ. ಸರ್ಕಾರಿ ರಜೆಗಳನ್ನು ಕಡಿತ ಮಾಡಲಿ. ಲಂಚಕೋರರನ್ನು ಕೆಲಸದಿಂದ ವಜಾ ಮಾಡಲಿ. ಸರ್ಕಾರಿ ಕಚೇರಿಗಳು ಜನಸ್ನೇಹಿಯಾಗುವಂತೆ ಮಾಡಲಿ. ಪದೇ ಪದೆ ಜನ ಸಾಮಾನ್ಯರಿಗೆ ಬರೆ ಏಕೆ? **–ಪುಷ್ಪಲತಾ ಫಣಿರಾಜ್, ಅಗ್ರಹಾರ, ಮೈಸೂರು.**

ನ್ಯಾಯಬೆಲೆ ಅಂಗಡಿಗಳಲ್ಲಿ ಸಿರಿಧಾನ್ಯ ವಿತರಿಸಲಿ

ಮಾನ್ಯರೆ,

ಒಂದು ಕಾಲದಲ್ಲಿ ಸಕ್ಕರೆ ಕಾಯಿಲೆ ಎಂದರೆ ಶ್ರೀಮಂತರ ಕಾಯಿಲೆ ಎಂದು ಪರಿಗಣಿಸುತ್ತಿದ್ದರು. ಆದರೆ ಇಂದು ಈ ಕಾಯಿಲೆ ಶ್ರೀಮಂತ, ಬಡವ ಎನ್ನದೆ ಅನೇಕರನ್ನು ಬಲಿ ತೆಗೆದುಕೊಂಡಿರುವುದು ಉಂಟು. ಸಕ್ಕರೆ ಕಾಯಿಲೆ ಹಾಗೂ ರಕ್ತದೊತ್ತಡದಂತಹ ಕಾಯಿಲೆಗಳು ಹೆಚ್ಚಾಗಲು ಕಾರಣ ಇಂದಿನ ಆಹಾರ ಶೈಲಿ ಮತ್ತು ದಿನನಿತ್ಯದ ಜೀವನ ಶೈಲಿ. ಕೆಲವು ರೈತರು ತಾವು ಬೆಳೆದ ಬೆಳೆಯನ್ನು ರಕ್ಷಿಸಲು ಹೆಚ್ಚು ರಾಸಾಯನಿಕ ಕೀಟನಾಶಕ, ಔಷಧಗಳನ್ನು ಸಿಂಪಡಿಸುತ್ತಾರೆ. ಹೀಗೆ ಬೆಳೆದ ಬೆಳೆಗಳ ಸೇವನೆ ಕೂಡ ಒಂದು ಕಾರಣ ಇರಬಹುದು!

ಈ ಕಾಯಿಲೆಗಳನ್ನು ತಡೆಗಟ್ಟಲು ವೈದ್ಯರು ಕೊಡುವ ಸಲಹೆ ಆಹಾರ ಶೈಲಿಯನ್ನು ಬದಲಾಯಿಸಿಕೊಳ್ಳಿರಿ ಎನ್ನುವುದು. ತಪಾಸಣೆ ನಂತರ ವೈದ್ಯರು ಕೊಡುವ ಪ್ರಥಮ ಸಲಹೆ ಆಹಾರದ ಪಥ್ಯ. ಪುರಾತನ ಕಾಲದಿಂದಲೂ ಇಂದಿನವರೆಗೂ ದೇಸಿ ಆಹಾರವಾದ ಸಿರಿಧಾನ್ಯಗಳ ಸೇವನೆ ಪ್ರಮುಖ. ಇಂತಹ ಪ್ರಮುಖ ಆಹಾರವಾದ ಸಿರಿಧಾನ್ಯ ಇಂದು ದೊಡ್ಡ ದೊಡ್ಡ ಮಾಲ್‌ಗಳಲ್ಲಿ ದೇಸಿತನದ ಆಹಾರದ ಮಹತ್ವವನ್ನು ಹೆಚ್ಚಿಸಿಕೊಂಡಿದೆ. ಇಂತಹ ಆಹಾರ ಪ್ರಸ್ತುತ ದಿನಗಳಲ್ಲಿ ಬಡವರ ಕೈಗೆ ಸಿಗದಂತೆ ಆಗಿದೆ. ಸಿರಿಧಾನ್ಯಗಳನ್ನು ಸರ್ಕಾರ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಚೀಟಿ ಹೊಂದಿರುವ ಗ್ರಾಹಕರಿಗೆ ಸಿಗುವಂತೆ ಕಾಯ್ದೆ ರೂಪಿಸಿ, ಗ್ರಾಹಕರಿಗೆ ವಿತರಿಸಲಿ. **–ಪಿ ಸಿ ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು**



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಆರೋಗ್ಯ ಹಾಳು ಮಾಡುತ್ತಿರುವ 'ಸ್ಟ್ರೆಸ್ಸು'

'A sound mind in a sound body' ಎಂಬ ಮಾತೊಂದಿದೆ. ಅಂದರೆ ಸದೃಢ ಶರೀರದಲ್ಲಿ ಸದೃಢವಾದ ಮನಸ್ಸು ಇದ್ದರೆ, ಮನುಷ್ಯನ ದೇಹ ಮತ್ತು ಮನಸ್ಸು ಎರಡೂ ಕೂಡ ಆರೋಗ್ಯಪೂರ್ಣವಾಗಿರುತ್ತದೆ. ಯಾಕೆ ಇವತ್ತು ಈ ಮಾತಿನ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಮ್ಮ ಕಾಲದ ಬಹುದೊಡ್ಡ ಸಮಸ್ಯೆ ಎಂದರೆ, "ಮಾನಸಿಕ ಒತ್ತಡ". ಮೇಲಿನ ಮಾತುಗಳು ನಮ್ಮ ತಲೆಮಾರಿನವರು ಹೇಳಿರುವುದಲ್ಲ. ಸದೃಢ ಭಾರತ ಕಟ್ಟುವ ಸಲುವಾಗಿ ಸ್ವಾಮಿ ವಿವೇಕಾನಂದರು ಹೀಗೆ ಮಾತಾಡುವ ಮೂಲಕ ಯುವ ಮನಸ್ಸುಗಳನ್ನು ಹುರಿದುಂಬಿಸಲು ಆಡಿದ ಮಾತಾಗಿತ್ತು. ಆದರೆ ಅದೇ ಮಾತು ನಮ್ಮ ಈ ತಂತ್ರಜ್ಞಾನದ ಯುಗದಲ್ಲಿ ಯುವಕರಿಗಷ್ಟೇ ಅಲ್ಲ, ಎಲ್ಲಾ ವಯೋಮಾನದ ಎಲ್ಲಾ ಸ್ತರದ, ಎಲ್ಲರ ಮನಸ್ಥಿತಿಗೂ ಅನ್ವಯಿಸಿಕೊಳ್ಳುವಂತಿದೆ. ಅದಕ್ಕೆ ಕಾರಣ ನಮ್ಮ 'ಮಾನಸಿಕ ತುಮುಲ', ಅದನ್ನು ಮನೋಬೇನೆ– ಅಂತ ಕರೀತಾರೆ.

ಬಹುಶಃ ಈ ಮಾನಸಿಕ ಒತ್ತಡದ ಕಿರಿಕಿರಿಗಳು ನನಗೆ ಲವಲೇಶವೂ ಅಲ್ಲ ಎಂದು ಎದೆತಟ್ಟಿ ಹೇಳುವ ಧೈರ್ಯ ನಮಗಿಲ್ಲ. ತಂತ್ರಜ್ಞಾನದ ಈ ಯುಗದಲ್ಲಿ ಜನಜೀವನದ ವೇಗ ಆನ್‌ಲೈನಿನಲ್ಲಿ ಹರಿದಾಡುತ್ತಿದೆ. ಬಾಂಬೆ, ಡೆಲ್ಲಿ, ಕೊಲ್ಕತ್ತಾ, ಬೆಂಗಳೂರು, ಮೈಸೂರುಗಳ ನಗರ ಜೀವನದ ಮನಃಸ್ಥಿತಿ ಇವತ್ತು ಯಂತ್ರ ನಾಗರಿಕತೆಯಂತೆಯೇ ವಾಯು ವೇಗದಲ್ಲಿ ಓಡುತ್ತಿದೆ. ಏನನ್ನಾದರೂ ಸಾಧಿಸಬೇಕೆಂಬ ಹಂಬಲ ಇಂದು ಛಲವಾಗಿ ಮಾರ್ಪಡುತ್ತಿದೆ. ಅದಕ್ಕಾಗಿ ಬಹಳಷ್ಟು ಮಂದಿ ತಮ್ಮ ಸಾಧನೆಯ ಒತ್ತಾಸೆಗಾಗಿ ತಾನೇ ನಿಗದಿಪಡಿಸಿಕೊಂಡ ಗುರಿ ಮತ್ತು ಅದರ ಸಾಧನೆಗಾಗಿ ತನಗೆ ಅರಿವಿಲ್ಲದಂತೆಯೇ ತನ್ನ ಮನಃಸ್ಥಿತಿಯನ್ನು ಬೇಗುದಿಯ ಕೂಪಕ್ಕೆ ತಳ್ಳುತ್ತಿದ್ದಾರೆ. ಮನೋಕ್ಷೋಭೆಗೆ ಬಲಿಯಾಗಿ ಮಾನಸಿಕ ಸಮತೋಲನವನ್ನು ಕಳೆದುಕೊಳ್ಳುತ್ತಿದ್ದಾರೆ. ಸದೃಢ ಮನಸ್ಸಿಲ್ಲದ ಶರೀರಕ್ಕೆ ಈ ಮಾನಸಿಕ ಒತ್ತಡವನ್ನು ತುಂಬಿ ದೇಹವನ್ನು ಯಾವ ರೀತಿ ಹೈರಾಣು ಮಾಡುತ್ತಿದ್ದಾರೆ ಎಂದರೆ, ಗುರಿ ಮುಟ್ಟಿ ಜಯದ ಮಾಲೆಗೆ ಕೊರಳೊಡ್ಡಬೇಕಾದವನು ಸ್ಟೆಥಾಸ್ಕೋಪಿನ ಮುಂದೆ ಕುಳಿತು ಸ್ಟ್ರೆಸ್ ಮ್ಯಾನೇಜ್‌ಮೆಂಟಿನ ಪ್ರಿಸ್ಕ್ರಿಪ್ಷನ್‌ಗೆ ಮೈಯೊಡ್ಡುತ್ತಿದ್ದಾನೆ.


ಇಂಥ ಮಾನಸಿಕ ಒತ್ತಡಗಳಿಗೆ ಬಹಳ ಪ್ರಬಲವಾದ ಕಾರಣಗಳು ಬೇಕಿಲ್ಲ. ನಾವು ಮತ್ತು ನಮ್ಮ ಪ್ರತಿಕ್ರಿಯೆಗಳು ಸಾಕು. ಅವು ಈ ನೆಪದಲ್ಲಿ ನಮ್ಮ ಮನಸ್ಸು ಮತ್ತು ದೇಹವನ್ನು ನಿಯಂತ್ರಿಸುತ್ತಿರುತ್ತವೆ. ಎತ್ತರದ ಸ್ಥಾನಮಾನ ಅಧಿಕಾರದಲ್ಲಿ ಬೀಗಿದಿದ್ದೀರಿ ಎಂದಿಟ್ಟುಕೊಳ್ಳಿ, ನೀವು ಕಚೇರಿಗೆ ಬಂದ ಕೂಡಲೆ ನಿಮ್ಮ ಕೆಳಗಿನವನು ನಮಸ್ಕಾರ ಹೊಡೆಯಬೇಕು. ಅಪ್ಪಿತಪ್ಪಿ ಆತ ಹಾಗೆ ಮಾಡದೆ ತನ್ನಿಷ್ಟಕ್ಕೆ ತಾನಿದ್ದುಬಿಟ್ಟರೆ ಸಾಕು, ನಿಮ್ಮ ಮನೋವ್ಯಾಪಾರದ ಮೀಟರು ಒತ್ತಡದ ಆವೇಗಕ್ಕೆ ಸಿಲುಕಿ, ಎರಡಂಕಿ ದಾಟಿ ಬಿಡುತ್ತದೆ. ಅವನನ್ನು ಕರೆದು ಅವನದೊಂದು ತಪ್ಪು ಹುಡುಕಿ ಅವನ ಮೇಲೆ ಕೋಪದಿಂದ ರೇಗಾಡುವವರೆಗೂ ನಿಮ್ಮ ಮನಸ್ಸಿನ ಮಾನಸಿಕ ಕ್ಷೋಭೆ ಶಮನಗೊಳ್ಳುವುದಿಲ್ಲ. ರಸ್ತೆಯಲ್ಲಿ ಡ್ರೈವಿಂಗ್ ಮಾಡಿಕೊಂಡು ನಿಮ್ಮ ಪಾಡಿಗೆ ನೀವು ಹೋಗುತ್ತಿರಬೇಕಾದರೆ ಹಿಂದಿನಿಂದ ಬಂದ ರಿಕ್ಷಾವಾಲ ವಿಪರೀತವಾಗಿ ಹಾರನ್ ಮಾಡಿದನೆಂದರೆ ಸಾಕು, ಅವನಿಗೆ ಸೈಡು ಕೊಡದೆ ಹಾಗೆ ಮುಂದುವರೆಯುವ ನಿಮ್ಮ ಮನಸ್ಸು, ವಿನಾಕಾರಣ ಆ ಹಾರನ್ನಿನಿಂದ ರೊಚ್ಚಿಗೆದ್ದಿರುತ್ತದೆ. ದಾರಿ ಬಿಟ್ಟು ಕೊಟ್ಟ ಮೇಲೂ ಅವನು ನಿಮ್ಮನ್ನು, ನೀವು ಅವನನ್ನು ಕೆಕ್ಕರಿಸಿಕೊಂಡೇ ನೋಡುತ್ತೀರೇ ಹೊರತು ಹಾಗೆ ಸುಮ್ಮನೆ ಹೋಗುವುದಿಲ್ಲ. ಅವನು ನಿಮಗೆ ಗೊತ್ತಿಲ್ಲ, ನೀವು ಅವನಿಗೆ ಗೊತ್ತಿಲ್ಲ. ಆದರೂ ಚಿಕ್ಕ ಹಾರನ್ನಿನ ವಿಷಯಕ್ಕೆ ನಿಮಗೂ ಅವನಿಗೂ ಗೊತ್ತಿಲ್ಲದಂತೆಯೇ ಮಾನಸಿಕ ಒತ್ತಡ ನಿರ್ಮಾಣವಾಗುತ್ತದೆ. ಅವನಿಗೆ ದಾರಿ ಕೊಟ್ಟ ಮೇಲೂ ನಿಮ್ಮ ಆ ಒತ್ತಡ ಸುಮ್ಮನಾಗುವುದಿಲ್ಲ. ಮುಂದೆ ಹೋಗುತ್ತಿರುವ ಆತನನ್ನು ಹಿಂದಿಕ್ಕಲೇಬೇಕು, ಹಾಗೆ ಹಿಂದಿಕ್ಕಿದ ನಿಮ್ಮನ್ನು ಆತ ಕೈತೋರಿಸಿ ಅವಲಕ್ಷಣದ ಮಾತಾಡಿ ಹಲ್ಲಿ ಲೊಚಗುಟ್ಟಿದಂತೆ ಲೊಚಗುಟ್ಟಬೇಕು. ಆಗಲೇ ಇಬ್ಬರ ಸ್ಟ್ರೆಸ್ಸು ಹತೋಟಿಗೆ ಬರುವುದು.

ಒಮ್ಮೆ ಕೊತ್ತಂಬರಿ ಸೊಪ್ಪಿನ ಬೆಲೆಗೆ ಚೌಕಾಶಿಗಿಳಿದ ವಯಸ್ಸಾದವರೊಬ್ಬರ ಮೇಲೆ ಒಬ್ಬ ಹುಡುಗ ಕೈಮಾಡಿಬಿಟ್ಟ ಪ್ರಸಂಗವನ್ನೊಮ್ಮೆ ನೋಡಿದೆ. ಅಂತಹವನನ್ನು ಕರೆದು ಬುದ್ಧಿ ಹೇಳಲು ಯತ್ನಿಸಿ ನೋಡಿ! ಅವರು ನಿಮ್ಮ ಮಾತು ಕೇಳಿದರೇ ಸರಿ! ಅಪ್ಪಿತಪ್ಪಿ ಆತ ಕೇಳದಿದ್ದರೆ ಆ ಮಾನಸಿಕ ಒತ್ತಡ ಜಗಳದ ಮುಖೇನ ನಿಮಗೇ ಟ್ರಾನ್ಸ್‌ಫರ್ ಆಗುತ್ತದೆ. ದಿನಪತ್ರಿಕೆಗಳ ಸುದ್ದಿಗಳಲ್ಲಿ ಕಾಲಂವೊಂದನ್ನು ನೋಡಿರುತ್ತೀರಿ ಜಗಳ ಬಿಡಿಸಲು ಹೋದವನು ಶವವಾಗಿ ಬಂದ ಅಂತ. ಅಂದರೆ ಚಿಕ್ಕ ಚಿಕ್ಕ ವಿಷಯಗಳೂ ಕೂಡ ಸನ್ನಿವೇಶಕ್ಕೆ ತಕ್ಕಂತೆ, ಘಟನೆಗಳಿಗೆ ತಕ್ಕಂತೆ ಪ್ರತಿಕ್ರಿಯೆಗಳನ್ನು ಬೇಡುತ್ತವೆ. ಹಾಗೆ ಸಂದರ್ಭ, ಸನ್ನಿವೇಶಕ್ಕೆ ನಾವು ತೋರುವ ಪ್ರತಿಕ್ರಿಯೆಗಳು ವ್ಯತ್ಯಾಸವಾದರೆ, ಮನುಷ್ಯ ಸಂಬಂಧಗಳ ಜಾಗದಲ್ಲಿ ಮಾನಸಿಕ ಒತ್ತಡಗಳು ಹುಟ್ಟುತ್ತವೆ. ಹಾಗೆ ಹುಟ್ಟಿದ ಮಾನಸಿಕ ಒತ್ತಡಗಳಿಂದ ಬಳಲುವ ನಾವು ಒಂದೋ ಅದರಿಂದ ಬಿಡುಗಡೆ ಹೊಂದಬೇಕು, ಇಲ್ಲವೇ ಅದನ್ನು ಆರೋಗ್ಯಕರವಾಗಿ ನಿಭಾಯಿಸಬೇಕು. ನಾವು ಯಾವ ಕೆಟಗರಿಯಲ್ಲಿದ್ದೇವೆಂಬ ನಿರ್ಧಾರಕ್ಕೆ ಬರುವುದು ಬಹಳ ಸುಲಭ.

ತಾವು ಕೆಲಸ ಮಾಡುವ ಜಾಗದಲ್ಲಿ ಕೆಲವರು ವಿನಾಕಾರಣ ಮಾತಾಡಿ, ಅಥವಾ ಇನ್ನೇನನ್ನೋ ಮಾಡಿ, ಪರಸ್ಪರ ವರ್ಕಿಂಗ್ ರಿಲೇಷನ್‌ಷಿಪ್ ಕಳೆದುಕೊಳ್ಳುತ್ತಾರೆ. ಆಗ ಶುರುವಾಗುತ್ತದೆ ನೋಡಿ ಮನಸ್ಸಿನ ಬೇಗುದಿ. ಕೆಲಸ ಮಾಡುವ ಜಾಗದಲ್ಲಿ ಹೊಂದಿಕೊಳ್ಳದೆ, ಒತ್ತಡ ಸೃಷ್ಟಿಸಿಕೊಳ್ಳುವ ಮನುಷ್ಯ ಅದರ ಬಿಡುಗಡೆಗಾಗಿ ಆ ಒತ್ತಡವನ್ನು ಮನೆಯವರೆಗೂ ತಂದು ಬಿಡುತ್ತಾನೆ. ಬೇಡದ್ದಕ್ಕೆಲ್ಲಾ ಕ್ಯಾತೆ ತೆಗೆದು ಹೆಂಡತಿ, ಮಕ್ಕಳ ಮೇಲೆ ರೇಗಾಡಿ, ಕೂಗಾಡುತ್ತಾರೆ. ಕಚೇರಿಯಲ್ಲಿ ಶೇಖರಣೆಗೊಂಡಿದ್ದ ಮಾನಸಿಕ ಒತ್ತಡವನ್ನು ಮನೆಯಲ್ಲಿ ಸುರಿದು, ಅಮಾಯಕ ಜೀವಗಳ ಮೇಲೆ ಪ್ರಯೋಗಿಸಿ ತಾನು ಅದರಿಂದ ಬಿಡುಗಡೆ ಹೊಂದುತ್ತಾನೆ. ಮನೆಯವರು ಈತ ಆಫೀಸಿನಿಂದ ಮನೆಗೆ ಯಾಕೆ ಬರುತ್ತಾನಪ್ಪ ಎಂದುಕೊಳ್ಳಬೇಕು! ಅಥವಾ ಅಯ್ಯೋ ಪಾಪ ಕಚೇರಿಯಲ್ಲಿ ಅವರಿಗೆ ಏನು ಒತ್ತಡವೋ ಏನೋ ಎಂದುಕೊಂಡು ಸುಮ್ಮನಾಗಬೇಕು. ಆಗ ಆ ಸ್ಟ್ರೆಸ್ಸು ರಿಲೀಸ್ ಆಗುತ್ತದೆ. ಒಂದು ವೇಳೆ ಮನೆಯಾಕೆ ಬಾಯಾಳಿಯೋ, ಮಕ್ಕಳು ಶತಒರಟರೋ ಆಗಿಬಿಟ್ಟರೆ, ಆತನ ಸ್ಟ್ರೆಸ್ಸು ಮನೆ ಮಂದಿಗೆಲ್ಲ ಹರಡುತ್ತದೆ. ಅಲ್ಲಿ ಮೈಂಡಿನಲ್ಲೂ ಸೌಂಡಿಲ್ಲ. ಬಾಡಿಯಲ್ಲೂ ಸೌಂಡಿಲ್ಲ. ಬಾಯಿ ಮಾತ್ರವೇ ಸೌಂಡು ಮಾಡುತ್ತಿರುತ್ತದೆ. ಅಪ್ಪಿ ತಪ್ಪಿ ಅಕ್ಕಪಕ್ಕದ ಮನೆಗಳ ಕಿಟಕಿಗಳಿಗೆ ಕಿವಿಯಿದ್ದರೆ, ಈ ಮನೆಯಿಂದ ಆ ಮನೆಗೂ ಅದು ಟ್ರಾನ್ಸ್‌ಫರ್ ಆಗುತ್ತದೆ.

ಹಾಗಾಗಿ ಮಾನಸಿಕ ಒತ್ತಡಗಳು ಇಂಥದೇ ದೊಡ್ಡ ದೊಡ್ಡ ಕಾರಣಕ್ಕೆ ಬರುತ್ತವೆ ಅಂತ ನಿಖರವಾಗಿ ಹೇಳಲಾಗುವುದಿಲ್ಲ. ಸಮಯ ಸನ್ನಿವೇಶಗಳಿಗೆ ಹೊಂದಿಕೊಳ್ಳದ ವ್ಯಕ್ತಿತ್ವಗಳು ಧುತ್ತನೆ ಎದುರಾಗುವ ಈ ಸನ್ನಿವೇಶಗಳಿಗೆ ಸರಿಯಾಗಿ ಪ್ರತಿಕ್ರಿಯಿಸಲಾಗದೆ ಹೋದಾಗ ಈ ಸ್ಟ್ರೆಸ್ಸು ಹುಟ್ಟುತ್ತದೆ. ವಿನಾಕಾರಣ ಸೃಷ್ಟಿಸಿಕೊಳ್ಳುವ ಈ ಒತ್ತಡಗಳು ಕೆಲವೊಮ್ಮೆ ನಮ್ಮನ್ನೇ ಆಳುತ್ತವೆ, ಅಳಿಸುತ್ತವೆ, ಕಂಗೆಡಿಸುತ್ತವೆ, ಕೊರಗಿಸುತ್ತವೆ. ಮನಸ್ಸಿನೊಳಗೇ ಹುಟ್ಟುವ ವಿಪರೀತದ ಈ ಒತ್ತಡದ ಪ್ರಕ್ರಿಯೆಗಳು ದೇಹದ ಮೇಲೂ ಕೆಲಸ ಮಾಡಿ ನಮ್ಮ ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಧ್ವಂಸ ಮಾಡುತ್ತವೆ. ಇದಕ್ಕೆ ಯಾರು ಹೊಣೆ? ನಾವೇ ಹೊಣೆ! ಆದರೆ ಈ ಹೊಣೆಗಾರಿಕೆಯನ್ನೂ ಹೊರುವ ವಿಸ್ತೃತ ವ್ಯಕ್ತಿತ್ವ ಬೆಳೆಸಿಕೊಳ್ಳದ ಅನೇಕರು ಅದನ್ನೂ ತಮ್ಮ ಮೇಲೆ ಹಾಕಿಕೊಳ್ಳುವುದಿಲ್ಲ. ಇದಕ್ಕೆಲ್ಲಾ ಸನ್ನಿವೇಶ ಕಾರಣ, ಸಂದರ್ಭವೇ ಕಾರಣ, ವ್ಯಕ್ತಿಗಳೇ ಕಾರಣ, ಇತರರು ಸರಿಯಾಗಿ ನನ್ನನ್ನು ನಡೆಸಿಕೊಳ್ಳದಿದ್ದುದೇ ಕಾರಣ, ನನ್ನ ಸ್ಥಾನಮಾನಗಳನ್ನು ಅರ್ಥಮಾಡಿಕೊಳ್ಳದಿರುವುದೇ ಕಾರಣ– ಎಂಬ ಇತ್ಯಾದಿ ಕಾರಣಗಳ ಮೊರೆ ಹೋಗಿ ತನ್ನನ್ನು ತಾನು ಒಪ್ಪಿಸಿಕೊಳ್ಳಲು ಮತ್ತೊಂದು ಒತ್ತಡವನ್ನು ಕ್ಯಾರಿ ಮಾಡುತ್ತಾರೆ. ಇದರಿಂದಾಗಿ ದೈಹಿಕವಾಗಿ ಆಯಾಸಕ್ಕೆ ಒಳಗಾಗುತ್ತಾರೆ, ಮಾನಸಿಕವಾಗಿ 'ಸೆಳೆತ'ಕ್ಕೆ ಸಿಕ್ಕಿಕೊಳ್ಳುತ್ತಾರೆ ಆಗ ಹುಟ್ಟುತ್ತದೆ ನೋಡಿ 'ಹತಾಶೆ'.

ಇದು ನಮ್ಮ ಗುರಿ ಮತ್ತು ವೇಗ ಎರಡನ್ನೂ ನಿಯಂತ್ರಿಸಿ ಬಿಡುತ್ತದೆ. ಮನಸ್ಸಿನ ತುಂಬ ಅತಿಯಾದ ಭಯ ಮತ್ತು ಉದ್ವೇಗ ಸೃಷ್ಟಿಸುತ್ತದೆ. ಬಡವನಾಗಿದ್ದಾಗ ಬೀದಿಯಲ್ಲಿ ಮಲಗಿದರೂ ನಿದ್ರೆ ಮಾಡುತ್ತಿದ್ದ ಮನುಷ್ಯ, ಬಲ್ಲಿದನಾದ ಮೇಲೆ ಐಷಾರಾಮಿ ಬಂಗಲೆಯಲ್ಲಿ ಮಲಗಿದ್ದರೂ 'ಅಭದ್ರತೆ'ಯ ಒತ್ತಡಕ್ಕೆ ಒಳಗಾಗುತ್ತಾನೆ. ಎಷ್ಟರಮಟ್ಟಿಗೆ ಇದು ಇಂದು ಜನಪ್ರಿಯ ಎಂದರೆ ಇವತ್ತಿನ ಸಾಮಾಜಿಕ ಜಾಲತಾಣಗಳಲ್ಲಿ ಲಕ್ಷ ಕೊಟ್ಟು ಹಾಸಿಗೆ ತೆಗೆದುಕೊಂಡರೂ ನಿದ್ರೆಯನ್ನು ಕೊಂಡುಕೊಳ್ಳಲು ಸಾಧ್ಯವೇ ಎಂಬಂತ ಮಾತುಗಳನ್ನು ಶೇರ್ ಮಾಡುವಷ್ಟರ ಮಟ್ಟಿಗೆ ಈ ಮಾನಸಿಕ ಒತ್ತಡಗಳು ಸುದ್ದಿಯಾಗಿವೆ.



> ನಮ್ಮ ಅಭಿರುಚಿಯನ್ನು ಕೆಡಿಸುವ ಸನ್ನಿವೇಶಗಳು ನಮ್ಮನ್ನು ಘಾಸಿಗೊಳಿಸಿದಾಗ, ಆಯ್ಕೆಯ ಅಡಕತ್ತರಿಯಲ್ಲಿ ಸಿಕ್ಕ ಮನಸ್ಸು ಅನಿವಾರ್ಯವಾಗಿ ಒತ್ತಡಕ್ಕೆ ಒಳಗಾಗುತ್ತದೆ. ಸಾಮಾಜಿಕ ಕಾರಣಗಳಿಗಾಗಿ ಮಾತನಾಡುವ ಕೆಲ ಮೇಧಾವಿಗಳೂ ಕೂಡ ಉದ್ವೇಗಕ್ಕೆ ಒಳಗಾಗಿ ಮಾತಾಡುತ್ತಿರುತ್ತಾರೆ. ಈ ಒತ್ತಡವೆಂಬ ಬ್ರಹ್ಮರಾಕ್ಷಸ ನಮ್ಮೆಲ್ಲಾ ಮೇಧಾಶಕ್ತಿಯನ್ನೂ ಸೂಪರ್‌ಸೀಡ್ ಮಾಡಿ, ನಮ್ಮ ಒಳ ಹೊರಗನ್ನು ಪ್ರವೇಶ ಮಾಡುತ್ತಾನೆ. ಸೊಂಟದಲ್ಲಿನ ಜೀಗದ ಕೈಗೆ ಪ್ರತಿಸ್ಪರ್ಧಿಯಾಗಿ ಬಂದಳಲ್ಲ ಎಂಬ ಕಾರಣಕ್ಕೆ ಮನೆಗೆ ಬಂದ ಸೊಸೆಯನ್ನು ಅತ್ತೆ ಕೆಕ್ಕರಿಸಿ ನೋಡಿದರೆ, ಒತ್ತಡವೆಂಬ ಪೆಡಂಭೂತ ಅವಳ ನಾಲಿಗೆಯ ಮೇಲೆ ಬಿ.ಪಿ-ಶುಗರುಗಳ ಮಾತ್ರೆ ಹಿಡಿದು ನಿಂತಿರುತ್ತದೆ. ನಮ್ಮ ವ್ಯಾಪಾರಕ್ಕೋ, ಉದ್ಯೋಗಕ್ಕೋ, ವೃತ್ತಿಗೋ, ಪ್ರವೃತ್ತಿಗೋ, ಪ್ರತಿಸ್ಪರ್ಧಿಯೊಬ್ಬ ಹುಟ್ಟಿಕೊಂಡರೆ, ಆತಂಕದ ಛಾಯೆಯಲ್ಲಿ ಈ ಒತ್ತಡ ಹುಟ್ಟಿಕೊಳ್ಳುತ್ತದೆ.

ಇದು ಕೇವಲ ವ್ಯಕ್ತಿಯಿಂದ ವ್ಯಕ್ತಿಗೆ, ಸನ್ನಿವೇಶದಿಂದ ಸಂದರ್ಭಕ್ಕಷ್ಟೇ ತಿರುಗಿ ತೀರುವುದಿಲ್ಲ. ಈ ಒತ್ತಡವೆಂಬ ಮಹಾತಂತ್ರ, ಸಾಂಕ್ರಾಮಿಕ ರೋಗದ ಹಾಗೆ ಒಬ್ಬರಿಂದ ಮತ್ತೊಬ್ಬರು ಎರವಲು ಪಡೆದು ಇಡೀ ಸಮಾಜಕ್ಕೆ ಕಿಚ್ಚು ಹತ್ತಿಸುತ್ತಾರೆ. ಊಟ ಮಾಡಿ ಮಲಗುವ ಮುನ್ನ ನ್ಯೂಸ್ ಛಾನಲ್ ಹಾಕಿ ನೋಡಿ! ದೇಶದ, ರಾಜ್ಯದ ನಾನಾ ವಿದ್ಯಮಾನಗಳು ಬರುತ್ತಿರುತ್ತವೆ. ಸಾಕಷ್ಟು ಜನರು, ಸರ್ಕಾರಗಳು, ಮತ್ತವರ ಧೋರಣೆಗಳ ಕುರಿತು ಮಾತಾಡುತ್ತಿರುತ್ತಾರೆ. ಮತ್ತ್ಯಾವುದೋ ಅಮಾನವೀಯ ಘಟನೆಗಳಲ್ಲಿ ಮನುಷ್ಯತ್ವವೇ ಇಲ್ಲದಂತೆ ವರ್ತಿಸಿದವರನ್ನು ತೋರಿಸುತ್ತಿರುತ್ತಾರೆ. ನಿಮ್ಮ ಮನಸ್ಥಿತಿಗೆ ಹೊಂದದೇ ಇರುವ ಮಾತುಗಳು, ಸನ್ನಿವೇಶಗಳು, ಘಟನಾವಳಿಗಳು ನಿಮ್ಮನ್ನು ಉದ್ವೇಗಗೊಳ್ಳುವಂತೆ ಒತ್ತಡ ಸೃಷ್ಟಿಸುತ್ತವೆ. ಈ ಒತ್ತಡದ ಅನುಭವಕ್ಕೆ ಲಿಂಗಭೇದವಿಲ್ಲ. ಮನೆಯಲ್ಲಿ ಎಲ್ಲರೂ ಈ ಸನ್ನಿವೇಶಗಳ ಪ್ರಭಾವಕ್ಕೆ ಒಳಗಾಗಿ ಪ್ರತಿಕ್ರಿಯಿಸುತ್ತಾರೆ. ಕೆಲವೊಮ್ಮೆ ಆ ವಿಷಯಗಳಿಗೂ ನಮಗೂ ತಾಳೆಯಾಗದೆ ಮನಸ್ಸಿನಲ್ಲಿಯೇ ಮಾನಸಿಕ ಘರ್ಷಣೆ ಶುರುವಾಗುತ್ತದೆ. ಕಾರಣ ಸಮಾಜ ಎಂದರೆ ಎಲ್ಲಾ ಸ್ತರದವರು, ಒಟ್ಟಾರೆ ಬದುಕುವ ಸಾಂಸ್ಕೃತಿಕ, ಸಾಮಾಜಿಕ, ಜನಜೀವನಗಳ ಸುಂದರತಾಣ, ಆದರೆ ಧಾರ್ಮಿಕ ಹಾಗೂ ಮತೀಯ ಕಾರಣಗಳಿಗಾಗಿ ಹುಟ್ಟುವ ತಾತ್ವಿಕ ಸಂಘರ್ಷಗಳಲ್ಲಿ ನಮ್ಮ ಮನಸ್ಸು ಯಾವುದೋ ಒಂದರ ಪರವಾಗಿ ಸಂಘರ್ಷಕ್ಕೆ ನಿಂತುಬಿಡುತ್ತದೆ. ಅಲ್ಲಿ ಬರುವ ವ್ಯಕ್ತಿಗಳು ಮತ್ತು ಘಟನೆಗಳ ಬಗ್ಗೆ ಕಮೆಂಟ್ ಮಾಡಿಕೊಂಡು ನಾವೇ ನಮ್ಮ ಶಾರೀರಿಕ ಮತ್ತು ಮಾನಸಿಕ ತುಮುಲಗಳನ್ನು ಜಾಸ್ತಿ ಮಾಡಿಕೊಳ್ಳುತ್ತೇವೆ. ನಮಗದು ಬೇಕೋ–ಬೇಡವೋ ಆಗ ಅದು ಮುಖ್ಯವಾಗುವುದಿಲ್ಲ. ಸಾಮಾಜಿಕ ವಿರೋಧಗಳು ಕಾಣಿಸಿಕೊಂಡಾಗ ನಾವಂದುಕೊಂಡದ್ದರ ಪರ ಮನಸ್ಸು ವಿಹ್ವಲಗೊಳ್ಳುತ್ತದೆ.

ನಮ್ಮ ಅಭಿರುಚಿಯನ್ನು ಕೆಡಿಸುವ ಸನ್ನಿವೇಶಗಳು ನಮ್ಮನ್ನು ಘಾಸಿಗೊಳಿಸಿದಾಗ, ಆಯ್ಕೆಯ ಅಡಕತ್ತರಿಯಲ್ಲಿ ಸಿಕ್ಕ ಮನಸ್ಸು ಅನಿವಾರ್ಯವಾಗಿ ಒತ್ತಡಕ್ಕೆ ಒಳಗಾಗುತ್ತದೆ. ಸಾಮಾಜಿಕ ಕಾರಣಗಳಿಗಾಗಿ ಮಾತನಾಡುವ ಕೆಲ ಮೇಧಾವಿಗಳೂ ಕೂಡ ಉದ್ವೇಗಕ್ಕೆ ಒಳಗಾಗಿ ಮಾತಾಡುತ್ತಿರುತ್ತಾರೆ. ಈ ಒತ್ತಡವೆಂಬ ಬ್ರಹ್ಮರಾಕ್ಷಸ ನಮ್ಮೆಲ್ಲಾ ಮೇಧಾಶಕ್ತಿಯನ್ನೂ ಸೂಪರ್‌ಸೀಡ್ ಮಾಡಿ, ನಮ್ಮ ಒಳ ಹೊರಗನ್ನು ಪ್ರವೇಶ ಮಾಡುತ್ತಾನೆ. ಸೊಂಟದಲ್ಲಿನ ಬೀಗದ ಕೈಗೆ ಪ್ರತಿಸ್ಪರ್ಧಿಯಾಗಿ ಬಂದಳಲ್ಲ ಎಂಬ ಕಾರಣಕ್ಕೆ ಮನೆಗೆ ಬಂದ ಸೊಸೆಯನ್ನು ಅತ್ತೆ ಕೆಕ್ಕರಿಸಿ ನೋಡಿದರೆ, ಒತ್ತಡವೆಂಬ ಪೆಡಂಭೂತ ಅವಳ ನಾಲಿಗೆಯ ಮೇಲೆ ಬಿ.ಪಿ–ಶುಗರುಗಳ ಮಾತ್ರೆ ಹಿಡಿದು ನಿಂತಿರುತ್ತದೆ. ನಮ್ಮ ವ್ಯಾಪಾರಕ್ಕೋ, ಉದ್ಯೋಗಕ್ಕೋ, ವೃತ್ತಿಗೋ, ಪ್ರವೃತ್ತಿಗೋ, ಪ್ರತಿಸ್ಪರ್ಧಿಯೊಬ್ಬ ಹುಟ್ಟಿಕೊಂಡರೆ, ಆತಂಕದ ಛಾಯೆಯಲ್ಲಿ ಈ ಒತ್ತಡ ಹುಟ್ಟಿಕೊಳ್ಳುತ್ತದೆ. ಇದು ಕೇವಲ ವ್ಯಾಪಾರ ಸಾಪಾರಗಳಿಗೆ ಸೀಮಿತವಾಗುವುದಿಲ್ಲ.

ಎಲ್ಲರನ್ನೂ ಮನರಂಜಿಸಲು ತೆರೆಯ ಮೇಲೆ ಬರುವ ಕಲಾವಿದರನ್ನೂ ಬಿಡದೆ ಕಾಡುವ ಒತ್ತಡದ ಕಾಲವಿದು. 'ಸ್ಟಾರ್ ವಾರ್'–ಗಳೆಂಬ ಕಟೌಟ್ ಸಂಸ್ಕೃತಿ, ನಮ್ಮ ನಟನಿಗೆ ಹೆಚ್ಚು ಅಭಿಮಾನಿಗಳು, ನಿಮ್ಮ ನಟನಿಗೆ ಕಡಿಮೆ ಅಭಿಮಾನಿಗಳು ಎಂಬ ಲೆಕ್ಕಾಚಾರದ ಅಭಿಮಾನಿ ಸಂಘಗಳ ವದಂತಿ. ಈ ಒತ್ತಡದಲ್ಲಿ ಮಾನಸಿಕ ತುಮುಲದ ಕಳೆ ಬೆಳೆಸುವ ಈ ಸ್ಟ್ರೆಸ್ ಎಂಬ ಅಪಾಯ ಯಾವ ಸೂಚನೆಯನ್ನೂ ಕೊಡದೆ ಮುನ್ನುಗ್ಗುತ್ತದೆ. ಪರಿಣಾಮ ಸರಿಯಾಗಿ ಮಾತಾಡಬೇಕಾದ ನಾಲಿಗೆ ನಿಯಂತ್ರಣ ಕಳೆದುಕೊಂಡು ಏನೇನೋ ಮಾತಾಡಿ ಎದುರಿಗಿದ್ದವರನ್ನು ಕೆರಳಿಸುತ್ತದೆ. ಅಲ್ಲಿಗೆ ಬ್ರೇಕಿಂಗ್‌ನ್ಯೂಸ್ ಶುರು, ಯಾವುದನ್ನು ಮರೆಯಬೇಕೆಂದು ನಾವು ಪ್ರಯತ್ನಿಸುತ್ತೇವೋ ಅದನ್ನು ಮರೆಯಲಾಗದೇ ಚಡಪಡಿಸುವ, ಅಗತ್ಯಕ್ಕಿಂತ ಹೆಚ್ಚಾಗಿ ತೊಳಲಾಡುವ, ಡೋಲಾಯಮಾನ ಸ್ಥಿತಿಗೆ ಈ ಮನಸ್ಸು ತಲುಪುತ್ತದೆ. ಚಿಕ್ಕ ಚಿಕ್ಕ ಕಾರಣಗಳಿಗೆಲ್ಲಾ ವ್ಯಘ್ರಗೊಳ್ಳುತ್ತದೆ. ಇದರಿಂದಾಗಿ ನಮ್ಮ ವರ್ತನೆ ಬದಲಾಗುತ್ತದೆ. ಸ್ವಭಾವ ಕೆರಳುತ್ತದೆ. ದೇಹದ ಆರೋಗ್ಯ ಕೈ ಕೊಡುತ್ತದೆ. ಮಾನಸಿಕ ಸ್ಥಿತಿ ತನ್ನ ದಕ್ಷತೆ ಕಳೆದುಕೊಳ್ಳುತ್ತದೆ. ಅದಕ್ಕಾಗಿ ಏನು ಮಾಡಬೇಕು? ಮಾನಸಿಕ ಖಿನ್ನತೆಯೇ ಬೇರೆ, ಮಾನಸಿಕ ಒತ್ತಡವೇ ಬೇರೆ, ಇದನ್ನು ಸರಿದೂಗಿಸಿ, ಹೊಂದಿಸಿಕೊಳ್ಳುವ ಧನಾತ್ಮಕ ನಿಲುವುಗಳನ್ನು ಬೆಳೆಸಿಕೊಂಡಾಗ ಮಾತ್ರ A sound mind in a sound body ಅಂದರೆ ಸದೃಢ ಶರೀರ, ಸದೃಢ ಮನಸ್ಸು– ಎರಡನ್ನೂ ಹೊಂದಲು ಸಾಧ್ಯ. ಅದಕ್ಕಾಗಿ ಏನು ಮಾಡಬೇಕು. ವೈಜ್ಞಾನಿಕವಾಗಿ ಏನೆಲ್ಲಾ ಬದಲಾವಣೆಯ ರಹದಾರಿಗಳು ನಮಗೆ ಕಾಣಿಸಬೇಕು ಎಂಬುದರ ಹುಡುಕಾಟದಲ್ಲಿ ಪ್ರತಿಯೊಬ್ಬರೂ ಆತ್ಮಸಂವಾದದಲ್ಲಿ ಉತ್ತರ ಹುಡುಕಿಕೊಳ್ಳಬೇಕು. ನಮ್ರತೆ, ವಿನಯ, ನಗು, ಆತ್ಮಸಂತೋಷ, ಸಾಮಾಜಿಕ ಸ್ವಾಸ್ಥ್ಯಗಳಲ್ಲಿ ಸುಖ ಕಾಣುವ ವಿಶಾಲ ಹೃದಯಿಗಳಿಗೆ ಸದೃಢ ಶರೀರ, ಸದೃಢ ಮನಸ್ಸು– ಎರಡನ್ನೂ ಹೊಂದಲು ಸಾಧ್ಯ. ಬಹುಶಃ ಸ್ವಾಮಿ ವಿವೇಕಾನಂದರು ಬಹಳ ಹಿಂದೆಯೇ ಹೇಳಿದ ಈ ಮಾತು ವರ್ತಮಾನದ ಧಾವಂತದ ಬದುಕಿಗೆ ಅನ್ವರ್ಥ ಎನ್ನಿಸುತ್ತದೆ. ಏನಂತೀರಿ? ■

ತತ್ವಪದ ತ್ರಿಕಾಲಜ್ಞಾನಿ ಶ್ರೀ ಯೋಗಿ ನಾರಾಯಣ ಕೈವಾರ ತಾತಯ್ಯ

ಈ ನಾಡು ಕಂಡ ಅತ್ಯಂತ ದೊಡ್ಡ ಕೀರ್ತನಾಕಾರರಲ್ಲಿ ಸದ್ಗುರು ಯೋಗಿ ನಾರೇಯಣರು ಒಬ್ಬರು. ಬಳೆಗಾರರ ವಂಶದಲ್ಲಿ ಹುಟ್ಟಿದ ತಾತಯ್ಯನವರು 1730 ರಿಂದ 1840ರ ಕಾಲಘಟ್ಟದಲ್ಲಿ ಬದುಕಿದ್ದವರು. ಮುದ್ದಮ್ಮ–ಕೊಂಡಪ್ಪ ಸುಪುತ್ರರಾದ ಇವರ ಜನನವೇ ಒಂದು ಪವಾಡ. ಚಿಕ್ಕ ವಯಸ್ಸಿನಲ್ಲೇ ತಂದೆ–ತಾಯಿ ಕಳೆದುಕೊಂಡ ಶ್ರೀ ಯೋಗಿ ನಾರಾಯಣರು, ಭೂತ–ವರ್ತಮಾನ ಕಾಲದ ಭವಿಷ್ಯವನ್ನು ಹೇಳುವ ಕಾಲಜ್ಞಾನಿಯಾಗಿ, ದಾರ್ಶನಿಕ ಸಂತನಾಗಿ ಗುರುತಿಸಿಕೊಂಡವರು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡಿ, ಕೀರ್ತನೆಗಳು ಹಾಗೂ ತತ್ವಗಳನ್ನು ಜನಸಾಮಾನ್ಯರಿಗೆ ತಿಳಿಸುತ್ತಾರೆ. ಪುರಂದರ ದಾಸರು ಕನಕದಾಸರಂತೆ ಶ್ರೀ ವಿಷ್ಣು ನಾಮವನ್ನು ಸ್ಮರಿಸುತ್ತ 'ಕಾಲಜ್ಞಾನ' ಕೃತಿಯನ್ನು ರಚಿಸುತ್ತಾರೆ.

ಮಠ–ಮಾನ್ಯಗಳಲ್ಲಿ ವಿದ್ಯಾಭ್ಯಾಸ ಮಾಡಿದ ಕೈವಾರ ನಾರಾಯಣಪ್ಪನವರು, ಸಮಾಜದಲ್ಲಿ ಇರುವ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಮೌಢ್ಯ ಆಚರಣೆಗಳ ನಿರ್ಮೂಲನೆಗಾಗಿ ಪ್ರಯತ್ನಿಸಿದ್ದರು. ಕೀರ್ತನೆಗಳ ತತ್ವಜ್ಞಾನಿ, ತತ್ವಪದಗಳ ಪಿತಾಮಹ, ಕಾಲಜ್ಞಾನಿ ಎಂದೇ ಲೋಕ ಪ್ರಸಿದ್ಧರಾಗಿ ಸುಮಾರು ಎರಡು ಶತಮಾನಗಳ ಹಿಂದೆ 110 ವರ್ಷಗಳು ಜೀವಿಸಿ ಅನೇಕ ಮಹಾನ್ ಯೋಗ ತಪಸ್ವಿಗಳಂತೆ ಸ್ವ–ಇಚ್ಛೆಯಿಂದ ಜೀವ ಸಮಾಧಿ ಹೊಂದಿದ ಯತಿವರ್ಯ, ಯೋಗಿಂದ್ರ, ಸಾಧಕ ಯೋಗಿ, ಕಾಲಜ್ಞಾನಿ ಕೈವಾರ ತಾತಯ್ಯನವರ ಬದುಕೇ ಒಂದು ಪವಾಡ ಸದೃಶವಾದದ್ದು. ಅಷ್ಟೇ ಮಹಾ ವಿಸ್ಮಯವಾದದ್ದು.

ಶ್ರೀ ಅಮರನಾರಾಯಣರ ಅಂಕಿತ ನಾಮದಲ್ಲಿ ಅವರು ರಚಿಸಿದ ಕೀರ್ತನೆಗಳು ಆಧ್ಯಾತ್ಮಿಕ ಹಾಗೂ ತಾತ್ವಿಕ ಹಿನ್ನೆಲೆಯಿಂದ ಕೂಡಿದ್ದು, ಸಮಾಜಮುಖಿಯಾಗಿವೆ. ಅಜ್ಞಾನಿಗಳ ಮೋಹ, ಆಸೆ ಪ್ರಾಂತಿಗಳನ್ನು ಬಿಡಿಸಿ ಗಾನ ವೈರಾಗ್ಯವನ್ನು ಬೋಧಿಸುವ ಉಪದೇಶ ಅವರ ಕೃತಿಯಲ್ಲಿ ಅಡಗಿದೆ. ಭಾರತವೇ ಅಲ್ಲದೆ ವಿಶ್ವದ ಭವಿಷ್ಯವನ್ನೇ ನುಡಿದಿರುವ ಇವರು, ಪವಾಡಪುರುಷರಾಗಿ ಕಾಣುತ್ತಾರೆ. ಸಮಸ್ತ ಜನತೆಗೆ ಕಲ್ಯಾಣವನ್ನುಂಟು ಮಾಡಲು ಅನ್ನ–ನೀರು ತ್ಯಾಗ ಮಾಡಿ, ಇಚ್ಛಾಮರಣಿಯಾಗಿದ್ದಾರೆ.


ತಮಿಳಿನ ತಿರುವಳ್ಳುವರ್ ಅವರನ್ನು ತಮಿಳುನಾಡಿನ ನಾಥೋರ್‌ಡಾಮಸ್ ಎನ್ನುವಂತೆ ಕೈವಾರ ತಾತಯ್ಯನವರನ್ನು ಕರ್ನಾಟಕದ ನಾಥೋರ್‌ಡಾಮಸ್ ಎನ್ನಲಾಗುತ್ತದೆ. ಅಂದ ಹಾಗೆ 'ಕಾಲಜ್ಞಾನ' ವೆಂಬುದು ಕೈವಾರ ತಾತಯ್ಯನವರ ಅತ್ಯಮೂಲ್ಯ ಕೃತಿಗಳಲ್ಲೊಂದು. ಈ ಕೃತಿ ಗೊತ್ತಿಲ್ಲದವರೇ ವಿರಳ. ಇಲ್ಲವೆಂದರೂ ಆದೀತು. ಒಂದು ಪಕ್ಷ ಇದನ್ನು ಓದಿಲ್ಲದಿದ್ದರೂ ಖಂಡಿತ ಇದರ ಹೆಸರನ್ನು ಕೇಳದವರಿಲ್ಲ. 'ಕಾಲಜ್ಞಾನ' ಎಂದ ತಕ್ಷಣ



ಥಟ್ಟನೆ ಕೈವಾರ ತಾತಯ್ಯನವರ ಹೆಸರು ಕೇಳಿ ಬರುತ್ತದೆ. ಹಾಗೆಯೇ ಅವರ ಯೋಗ ಕುರಿತ "ಬ್ರಹ್ಮಾನಂದ ಪುರಿಶತಕ" ಕೃತಿಕೂಡ ಶ್ರೇಷ್ಠ ಕೃತಿಯೆಂದು ಸಾರಸ್ವತ ಲೋಕದಲ್ಲಿ ದಾಖಲಾಗಿದೆ. ಆಂಧ್ರದ ತೆಲುಗಿನ ವೇಮನ ಕವಿ ಮತ್ತು ವೀರಬ್ರಹ್ಮಸ್ವಾಮಿ ಹಾಗೂ ಕನ್ನಡದ ಸರ್ವಜ್ಞ ಕವಿಗಳಿಂದ ಪ್ರಭಾವಿತರಾಗಿದ್ದ ಅಮರ ನಾರಾಯಣನ ಆರಾಧಕರಾದ ಕೈವಾರ ತಾತಯ್ಯ, ಕನ್ನಡ ಮತ್ತು ತೆಲುಗು ಭಾಷೆಗಳೆರಡರಲ್ಲೂ ಪಾಂಡಿತ್ಯ ಸಾಧಿಸಿದ್ದರು. ಹಾಗಾಗಿ ಎರಡೂ ಭಾಷೆಯಲ್ಲಿ ಸಾಹಿತ್ಯ ಕೃಷಿ ಮಾಡಿರುವ ಅವರು ದ್ವಿಭಾಷಾ ಕವಿಯಾಗಿ ಎರಡೂ ರಾಜ್ಯಗಳಿಗೂ ತಮ್ಮ ಸಾಹಿತ್ಯ ರಚನೆಗಳನ್ನು ಕೊಡುಗೆಯಾಗಿ ನೀಡಿದ್ದು ವಿಶೇಷವಾಗಿ ಕರ್ನಾಟಕ ಮತ್ತು ಆಂಧ್ರ ರಾಜ್ಯಗಳೆರಡರಲ್ಲೂ ಅಪಾರ ಅಭಿಮಾನಿಗಳನ್ನು, ಆರಾಧಕರನ್ನು ಹೊಂದಿರುವುದು ತಾತಯ್ಯನವರ ವೈಶಿಷ್ಟ್ಯ. ದಾಸ ಶ್ರೇಷ್ಠರಾದ ಕನಕ, ಪುರಂದರರಂತೆಯೇ ಅವರುಗಳ ಸಮಕ್ಕೆ ಕೀರ್ತನೆಗಳನ್ನು ರಚಿಸಿದ ಕೀರ್ತಿ ಅವರದು. ಈ ದಿಶೆಯಲ್ಲಿ ಸಾವಿರಾರು ರಚನೆಗಳು ಬಂದಿದ್ದು ಬಾಲಮುರಳಿ ಕೃಷ್ಣ, ಪಿ.ಕಾಳಿಂಗರಾವ್ ಅವರುಗಳಂತಹ ಸಂಗೀತ ದಿಗ್ಗಜರು ತಾತಯ್ಯನವರ ಕೀರ್ತನೆಗಳನ್ನು ಹಾಡಿದ್ದಾರೆ. ಮನದುಂಬಿ ಆನಂದಪಟ್ಟಿದ್ದಾರೆ. ಬಹಳಷ್ಟು ಕೀರ್ತನೆಗಳನ್ನು ಎಂ.ಎಸ್. ರಾಮಯ್ಯನವರಂತಹ ಅಭಿಮಾನಿಗಳು ಧ್ವನಿ ಸುರಳಿಯ ಮೂಲಕ ಹೊರತಂದಿದ್ದಾರೆ.

ಕೈವಾರದಲ್ಲಿ ಶ್ರೀ ಧರ್ಮಾಧಿಕಾರಿ ಎಂ.ಎಸ್.ರಾಮಯ್ಯರವರು ದಿನನಿತ್ಯ ಪೂಜೆ ಪುರಸ್ಕಾರದೊಂದಿಗೆ ಫಾಲ್ಗುಣದ ಹುಣ್ಣಿಮೆಯಂದು ತಾತಯ್ಯನವರ ಜಯಂತಿಯನ್ನು ಆಚರಿಸುತ್ತಾ ಬಂದಿದ್ದಾರೆ. ಇದರ ಕೈಂಕರ್ಯ ಮುಂದುವರೆಸಿಕೊಂಡು ಸಹಸ್ರಾರು ಭಕ್ತರಿಗೆ ದಾನ–ಧರ್ಮಗಳನ್ನು ಮಾಡುತ್ತಾ ಕೈವಾರ ತಾತಯ್ಯನವರ ದರ್ಶನ ಅವರ ತತ್ವ ಬೋಧನೆಗಳನ್ನು ಬೋಧಿಸುತ್ತಾ ಆಧುನಿಕ ಕಾಲದಲ್ಲಿಯೂ ಇದನ್ನು ಪರಂಪರೆಯನ್ನಾಗಿಸಿಕೊಂಡು ಬಂದಿದ್ದಾರೆ. ಅಮರ ನಾರಾಯಣನ ಪರಮ ಭಕ್ತರಾದ ಇವರು ತಾತಯ್ಯನವರ ಕೃತಿಗಳನ್ನು ಮುದ್ರಿಸಿ, ನೀತಿ–ಮಾರ್ಗಗಳನ್ನು ಪಸರಿಸುತ್ತ ಬಂದಿದ್ದಾರೆ.

ಇಂದು ಶುದ್ಧ ಹುಣ್ಣಿಮೆಯ ಫಾಲ್ಗುಣ 7ನೇ ತಾರೀಖು ಕೈವಾರ ತಾತಯ್ಯ ಅವರ ಜನ್ಮದಿನ. ಕರ್ನಾಟಕ ಸರ್ಕಾರ ಇವರ ಜನ್ಮದಿನವನ್ನು ಆಚರಿಸಲು ಪ್ರಕಟಿಸಿದೆ. ಕೈವಾರ ಸೇರಿದಂತೆ ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಜಯಂತಿ ಆಚರಿಸಲಾಗುತ್ತಿದೆ. 297ನೇ ಜಯಂತಿಯನ್ನು ಆಚರಿಸುವ ಈ ಶುಭ ಸಂದರ್ಭದಲ್ಲಿ ಕೈವಾರ ತಾತಯ್ಯನವರ ಕೃತಿಗಳು, ಕೀರ್ತನೆಗಳು ಸರ್ವ ಕಾಲಕ್ಕೂ ಶಾಶ್ವತವಾಗಿರುವಂತೆ ಉಳಿಸಿಕೊಳ್ಳಬೇಕಿದೆ.



ಡಾ.ಎಸ್.ಕೃಷ್ಣಪ್ಪ
ಸಹಾಯಕ ಪ್ರಾಧ್ಯಾಪಕ,
ಮಹಾರಾಜ ಕಾಲೇಜು
ಮೈಸೂರು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

70 ವರ್ಷದಿಂದ ಆಗದ ಅಭಿವೃದ್ಧಿ ಮೋದಿ ಸರ್ಕಾರ 8 ವರ್ಷದಲ್ಲಿ ಮಾಡಿದೆ

● ಕೇಂದ್ರ ಸಚಿವ ಕಷ್ಣ ಪಾಲ್ ಗುರ್ಜರ್ ಅಭಿಮತ ● ಮೈಸೂರಲ್ಲಿ ಪ್ರಣಾಳಿಕೆ ಸಲಹಾ ಸಂಗ್ರಹ ಅಭಿಯಾನದಲ್ಲಿ ಭಾಷಣ ● ಬಿಜೆಪಿ ಆಡಳಿತದಲ್ಲಿ ಪರಿವಾರವಲ್ಲ, ದೇಶ ಮೊದಲು

ಮೈಸೂರು, ಮಾ.6(ಎಂಕೆ)– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 70 ವರ್ಷಗಳಿಂದ ಆಗದ ಅಭಿವೃದ್ಧಿಯನ್ನು 8 ವರ್ಷದಲ್ಲೇ ಮಾಡಿದೆ. ಸರ್ವರ ಅಭಿವೃದ್ಧಿ ಮೂಲಕ ವಿಶ್ವದ ಗಮನ ಸೆಳೆದಿರುವ ಕೇಂದ್ರ ಸರ್ಕಾರವನ್ನು ರಾಜ್ಯದ ಜನತೆಯ ನಂಬಿದ್ದಾರೆ ಎಂದು ಕೇಂದ್ರ ವಿದ್ಯುತ್ ಮತ್ತು ಭಾರೀ ಕೈಗಾರಿಕೆ ರಾಜ್ಯ ಸಚಿವ ಕಷ್ಣಪಾಲ್ ಗುರ್ಜರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ನಡೆದ ಪ್ರಣಾಳಿಕೆ ಸಲಹಾ ಸಂಗ್ರಹ ಅಭಿಯಾನ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಬಿಜೆಪಿ ಸರ್ಕಾರ ದೇಶದ ಹಿರಿಮೆಯನ್ನು ಪ್ರಪಂಚಕ್ಕೆ ಸಾರಿದೆ. ಪ್ರಧಾನಿ ಮೋದಿಯವರನ್ನು ಯುಗಪುರುಷ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಭಾರತಕ್ಕೆ ಭೇಟಿ ನೀಡಿದ್ದ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಮ್ಮ ಪ್ರಧಾನಿಯನ್ನು ಪ್ರಪಂಚದಲ್ಲೇ ಅತ್ಯಂತ ಜನಪ್ರಿಯ ಮತ್ತು ಪ್ರೀತಿಪಾತ್ರ ನಾಯಕ ಎಂದು ಹೇಳಿರುವುದು ಇದಕ್ಕೆ ಪುಷ್ಟಿ ನೀಡಿದೆ. ಅಭಿವೃದ್ಧಿಯಲ್ಲಿ 10ನೇ ಸ್ಥಾನದಲ್ಲಿದ್ದ ಭಾರತವಿಂದು ವಿಶ್ವದ 3ನೇ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮಿದೆ ಎಂದು ಹೇಳಿದರು.


ಪ್ರಧಾನಿ ಮೋದಿಯವರಿಗೆ ಕಾಂಗ್ರೆಸ್‌ನವರಂತೆ ಪರಿವಾರದ ಚಿಂತೆಯಿಲ್ಲ. ಮೊದಲು ದೇಶ ಎಂಬುದರಲ್ಲಿ ನಂಬಿಕೆಯಿಟ್ಟಿದ್ದಾರೆ. 70 ವರ್ಷದ ಅವಧಿಯಲ್ಲಾಗಿರುವ ದೇಶದ ಅಭಿವೃದ್ಧಿ, ಕಳೆದ 8 ವರ್ಷಗಳಲ್ಲಾಗಿದೆ. ಮೊದಲು ದೇಶದಲ್ಲಿ 74 ವಿಮಾನ ನಿಲ್ದಾಣಗಳಿದ್ದರೆ, ಮೋದಿ ಆಡಳಿತದ 8.5 ವರ್ಷದಲ್ಲಿಯೂ ಅಷ್ಟೇ ವಿಮಾನ ನಿಲ್ದಾಣಗಳನ್ನು ಮಾಡಲಾಗಿದೆ. ರಾಜ್ಯದಲ್ಲಿ ಹೊಸದಾಗಿ ಮೈಸೂರು, ಹುಬ್ಬಳ್ಳಿ, ಶಿವಮೊಗ್ಗ, ಹಾಸನದಲ್ಲೂ ವಿಮಾನ ನಿಲ್ದಾಣಗಳಾಗಿವೆ. ಹೆದ್ದಾರಿಗಳ ಜೋಡಣೆ ಹಾಗೂ ಅಭಿವೃದ್ಧಿಯಾಗಿದೆ. ವೈದ್ಯಕೀಯ ಕಾಲೇಜುಗಳ ಸಂಖ್ಯೆ ಡಬಲ್ ಆಗಿದೆ. ಸ್ವಚ್ಛ ಭಾರತ್ ಮಿಷನ್ ಮೂಲಕ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಕೊರೊನಾ ಸಂಕಷ್ಟ ಪರಿಸ್ಥಿತಿ ನಿರ್ವಹಣೆ ಹಾಗೂ ಡಿಜಿಟಲೀಕರಣ ಜಾರಿಯಲ್ಲಿ ಕೇಂದ್ರ ಸರ್ಕಾರ ಮಾಡಿರುವ ಸಾಧನೆಗಳಿಗೆ ಅನೇಕ ಉದಾಹರಣೆಗಳಿವೆ ಎಂದು ಕೇಂದ್ರ ಸರ್ಕಾರದ ಕಾರ್ಯ ಚಟುವಟಿಕೆಗಳನ್ನು ವಿವರಿಸಿದರು.

ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ಉತ್ಪನ್ನಗಳು ಮೇಕ್ ಇನ್ ಇಂಡಿಯಾ ಪರಿಕಲ್ಪನೆಯಡಿ ದೇಶದಲ್ಲಿಯೇ ತಯಾರಾಗುತ್ತಿವೆ. ಅಯೋಧ್ಯೆ ರಾಮ ಮಂದಿರ ನಿರ್ಮಾಣ, 370ನೇ ವಿಧಿ ರದ್ದು ಮಾಡುವ ಮೂಲಕ ಐತಿಹಾಸಿಕ ನಿರ್ಣಯದ ಮೂಲಕ ದೇಶದಲ್ಲಿ ಆಂತರಿಕ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದ ಅವರು, ಭದ್ರತೆ ಇದ್ದರಷ್ಟೇ ಉದ್ಯಮಿಗಳು ಬಂಡವಾಳ ಹೂಡಿಕೆ ಮಾಡುತ್ತಾರೆ. ಇಲ್ಲದಿದ್ದರೆ ಯಾರು ಹೂಡಿಕೆ ಮಾಡುವುದಿಲ್ಲ ಎಂದು ತಿಳಿಸುವ ಮೂಲಕ ಭದ್ರತೆಗೆ ಕೇಂದ್ರ ಸರ್ಕಾರ ನೀಡಿರುವ ಪ್ರಾಮುಖ್ಯತೆಯನ್ನು ತಿಳಿಸಿದರು.

ದೇಶದ ಮುಂದೆ ಸವಾಲು: ಪ್ರಧಾನಿ ಮೋದಿ ಅಥವಾ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮುಂದೆ ಸವಾಲುಗಳಿಲ್ಲ. ಬದಲಿಗೆ ದೇಶದ ಮುಂದೆ ಸವಾಲುಗಳಿಗೆ ಶಾಸಕರು-ಸಂಸದರು ಬಂದು ಹೋಗುತ್ತಾರೆ. ಆದರೆ ದೇಶದ ಮುಂದಿರುವ ಸವಾಲುಗಳನ್ನು ಎದುರಿಸುವುದು ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರಧಾನಿ ಮೋದಿ ಹಾಗೂ ಬಸವರಾಜ ಬೊಮ್ಮಾಯಿಯವರು ಕಾರ್ಯಪ್ರವೃತ್ತರಾಗಿದ್ದಾರೆ. ಅಲ್ಲದೆ ಭರವಸೆಯನ್ನು ನೀಡಿದ್ದಾರೆ ಎಂದರು.

ಸೆಮಿಫೈನಲ್: ಕೇಂದ್ರದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದು ನಿಶ್ಚಿತ, ರಾಜ್ಯದಲ್ಲಿಯೂ ಬಾರದಿದ್ದರೇ ಅಭಿವೃದ್ಧಿ ಸಾಧ್ಯವಿಲ್ಲ. ಕರ್ನಾಟಕದ ಚುನಾವಣೆಯ ಮೇಲೆ ಇಡೀ ದೇಶವೇ ಕಣ್ಣು ನೆಟ್ಟಿದೆ. 2024ರ ಲೋಕಸಭಾ ಚುನಾವಣೆಗೆ ಇಲ್ಲಿ ನಡೆಯುವುದೇ ಸೆಮಿಫೈನಲ್ ಎಂದರು.

ಇದೇ ವೇಳೆ ಸಭೆಯಲ್ಲಿ ಭಾಗವಹಿಸಿದ್ದ ಉದ್ಯಮಿಗಳು, ವ್ಯಾಪಾರಸ್ಥರು, ಸಂಘ-ಸಂಸ್ಥೆ ಹಾಗೂ ಬಿಜೆಪಿ ಮುಖಂಡರು ತಮ್ಮ ತಮ್ಮ ಅಭಿಪ್ರಾಯಗಳನ್ನು ಪ್ರಣಾಳಿಕೆ ಸಲಹಾ ಸಂಗ್ರಹ ಅಭಿಯಾನ ನೀಡಿದರು. ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಉಪಮೇಯರ್ ಡಾ.ಜಿ.ರೂಪ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಜಿಲ್ಲಾ ಸಂಚಾಲಕ ಮಲ್ಲರಾಜ್ ಅರಸ್, ಮುಖಂಡ ಡಾ.ಸಿದ್ದರಾಮಯ್ಯ ಮತ್ತಿತರರಿದ್ದರು.



ನಗರದ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ನಡೆದ ಬಿಜೆಪಿ ಪ್ರಣಾಳಿಕೆ ಸಲಹಾ ಸಂಗ್ರಹ ಅಭಿಯಾನ ಸಭೆಯಲ್ಲಿ ಉದ್ಯಮಿಗಳು, ವ್ಯಾಪಾರಸ್ಥರು, ಸಂಘ-ಸಂಸ್ಥೆಗಳ ಮುಖಂಡರಿಂದ ಪ್ರಣಾಳಿಕೆ ಸಲಹೆ ಸ್ವೀಕರಿಸಲಾಯಿತು.

ವಿದ್ಯುತ್ ಪೂರೈಕೆಯಲ್ಲಿ ಸಮಸ್ಯೆಯಿಲ್ಲ...

ಭಾರತ ಇಂದು ವಿದ್ಯುತ್ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿದೆ. ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆಯಾಗುತ್ತಿದೆ. ಆದರೆ ಹಂಚಿಕೆಯ ವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕಿದೆ. ಬೇಸಿಗೆ ಸಂದರ್ಭದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗದಂತೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುತ್ತಿದ್ದೇವೆ. 430 ಗೀಗಾ ವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ ಎಂದು ಕೇಂದ್ರ ವಿದ್ಯುತ್ ಮತ್ತು ಭಾರೀ ಕೈಗಾರಿಕೆ ರಾಜ್ಯ ಸಚಿವ ಕಷ್ಣ ಪಾಲ್ ಗುರ್ಜರ್ ತಿಳಿಸಿದರು.

ಪ್ರಣಾಳಿಕೆ ಸಲಹಾ ಸಂಗ್ರಹ ಅಭಿಯಾನ ಸಭೆಗೂ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ವಿದ್ಯುತ್ ಉಚಿತವಾಗಿ ನೀಡುವ ರಾಜ್ಯಗಳ ತೀರ್ಮಾನಕ್ಕೆ ಕೇಂದ್ರದ ಯಾವುದೇ ಆಕ್ಷೇಪಣೆಯಿಲ್ಲ. ವಿದ್ಯುತ್ ಕಂಪನಿಗೆ ಹಣ ಒದಗಿಸುವ ಕರ್ತವ್ಯದಲ್ಲಿ ರಾಜ್ಯ ವಿಫಲವಾಗಬಾರದು. ಕೇಂದ್ರ ಸರ್ಕಾರದ ಜನಪರ ಯೋಜನೆಗಳು ಸಾಮಾನ್ಯ ಜನರನ್ನು ತಲುಪುತ್ತಿದ್ದು ಮಹಿಳೆಯರು, ರೈತರು, ಕಾರ್ಮಿಕರನ್ನು, ಹಿಂದುಳಿದವರು ಸೇರಿದಂತೆ ಎಲ್ಲಾ ಸಮುದಾಯದವರನ್ನು ಸ್ವಾವಲಂಬಿಗಳಾಗಿಸಿದೆ. ಕರ್ನಾಟಕ ರಾಜ್ಯದಲ್ಲಿಯೂ ಬಿಜೆಪಿಗೆ ಸಂಪೂರ್ಣ ಬೆಂಬಲವಿದೆ ಎಂದು ಹೇಳಿದರು.

ನಕಲಿ ಸಿಗರೇಟ್ ಮಾರಾಟ: ನಾಲ್ಕು ಅಂಗಡಿ ಮಾಲೀಕರ ವಿರುದ್ಧ ಕೇಸ್ ದಾಖಲು

ಮೈಸೂರು, ಮಾ. 6– ಮೈಸೂರಿನಲ್ಲಿ ಐಟಿಸಿ ಕಂಪನಿಯ ನಕಲಿ ಸಿಗರೇಟ್ ಮಾರಾಟ ಮಾಡುತ್ತಿರುವುದು ಪತ್ತೆಯಾಗಿದ್ದು, 4 ಅಂಗಡಿ ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದೆ.

ಐಟಿಸಿ ಕಂಪನಿಯ ಬೆಂಗಳೂರಿನ ಮ್ಯಾನೇಜರ್ ಎಂ.ಕೆ. ಶಿವಕುಮಾರಸ್ವಾಮಿ ಅವರು ಮಾರ್ಚ್ 3ರಂದು ತಮ್ಮ ಕಂಪನಿಯ ಇತರರೊಡಗೂಡಿ ಗ್ರಾಹಕರ ಸೋಗಿನಲ್ಲಿ ಶಿವರಾಂಪೇಟೆಯಲ್ಲಿರುವ ಆದೀಶ್ವರ ಸ್ಟೋರ್‌ಗೆ ಭೇಟಿ ನೀಡಿದಾಗ ಐಟಿಸಿ ಕಂಪನಿಯ ವಿವಿಧ ಬ್ರಾಂಡ್‌ಗಳ ನಕಲಿ ಸಿಗರೇಟ್ ಮಾರಾಟ ಮಾಡುತ್ತಿರುವುದು ಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಅವರು ಆದೀಶ್ವರ ಸ್ಟೋರ್ ಮಾಲೀಕರ ವಿರುದ್ಧ ದೇವರಾಜ ಠಾಣೆಯಲ್ಲಿ ಮಾರ್ಚ್ 4ರಂದು ಪ್ರಕರಣ ದಾಖಲಿಸಿದ್ದಾರೆ.

ಮತ್ತೊಂದೆಡೆ ಅದೇ ದಿನ ಐಟಿಸಿ ಕಂಪನಿಯ ಮಾರ್ಕೆಟಿಂಗ್ ವಿಭಾಗದ ಮ್ಯಾನೇಜರ್ ನಿತೀಶ್ ಅವರು ಕಂಪನಿಯ ಮೈಸೂರಿನ ಹಂಚಿಕೆದಾರರೊಂದಿಗೆ ಮಂಡಿ ಮೊಹಲ್ಲಾ ವ್ಯಾಪ್ತಿಯಲ್ಲಿ ತಪಾಸಣೆ ನಡೆಸಿದಾಗ ಕೆಟಿ ರಸ್ತೆಯ ಎಕೆ ಟ್ರೇಡರ್ಸ್, ಸುನ್ನಿ ಚೌಕದಲ್ಲಿರುವ ಮೂನ್‌ಸ್ಟಾರ್ ಸ್ವೀಟ್ ಟ್ರೇಡರ್ಸ್ ಮತ್ತು ಮಂಡಿ ಮೊಹಲ್ಲಾದ ಎಂಎಸ್ ಟ್ರೇಡರ್ಸ್‌ನಲ್ಲಿ ಐಟಿಸಿ ಕಂಪನಿಯ ವಿವಿಧ ಬ್ರಾಂಡ್‌ಗಳ ನಕಲಿ ಸಿಗರೇಟ್ ಮಾರಾಟ ಮಾಡುತ್ತಿರುವುದು ಪತ್ತೆಯಾಗಿದ್ದು, ನಿತೀಶ್ ಅವರು 3 ಅಂಗಡಿಗಳ ಮಾಲೀಕರ ವಿರುದ್ಧ ಮಂಡಿ ಠಾಣೆಯಲ್ಲಿ ಫೆಬ್ರವರಿ 4ರಂದು ಪ್ರಕರಣ ದಾಖಲಿಸಿದ್ದಾರೆ.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಸುತ್ತಮುತ್ತ ಖದೀಮರ ಕಾರ್ಯಾಚರಣೆ

ಅಮಾಯಕರಿಗೆ ಡಿಕ್ಕಿ ಹೊಡೆದು ಮೊಬೈಲ್ ಕಳವು

ಮೈಸೂರು, ಮಾ. 6– ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸುತ್ತಮುತ್ತ ಮೊಬೈಲ್ ಕಳ್ಳರ ಹಾವಳಿ ಹೆಚ್ಚಾಗಿದ್ದು, ಒಂದೇ ದಿನ ಖದೀಮರು ಇಬ್ಬರ ಮೊಬೈಲ್‌ಗಳನ್ನು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಉಪ್ಪಿನಂಗಡಿ ಮೂಲದ ಫಾದರ್ ಟಿ.ಎಂ. ವರ್ಗೀಸ್(38) ಅವರು ತಿ.ನರಸೀಪುರ ತಾಲೂಕು ನೀಲಸೋಗೆ ಗ್ರಾಮದಲ್ಲಿರುವ ಚರ್ಚ್‌ನಲ್ಲಿ ಫಾದರ್ ಆಗಿದ್ದು, ಕೆಲಸದ ನಿಮಿತ್ತ ಮಾರ್ಚ್ 4ರಂದು ಮೈಸೂರಿಗೆ ಆಗಮಿಸಿದ್ದರು. ಅದೇ ದಿನ ವಾಪಸ್ ತಿ.ನರಸೀಪುರಕ್ಕೆ ತೆರಳಲು ಸಂಜೆ 4 ಗಂಟೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸಮೀಪವಿರುವ ಭಾರತ್ ಲೋಮಿಯಾ ಚರ್ಚ್ ಮುಂಭಾಗ ನಡೆದುಕೊಂಡು ಬರುತ್ತಿದ್ದಾಗ ಎದುರಿಗೆ ಬಂದ ಇಬ್ಬರು ಖದೀಮರು ಇವರಿಗೆ ಡಿಕ್ಕಿ ಹೊಡೆದು ಜೇಬಿನಲ್ಲಿದ್ದ ಮೊಬೈಲ್ ಕಿತ್ತುಕೊಂಡು ಓಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಮಳವಳ್ಳಿ ಮೂಲದವರಾಗಿದ್ದು, ಮೈಸೂರಿನ ಇನ್‌ಫೋಸಿಸ್‌ನಲ್ಲಿ ಪ್ರೊಸೆಸ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿರುವ ಎಂ.ಸಿ. ಜತಿನ್(31) ಅವರು ಅದೇ ದಿನ ಸಂಜೆ 5.30ರಲ್ಲಿ ಕಪ್ಪಡಿಗೆ ಹೋಗುವ ಸಲುವಾಗಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸಮೀಪ ಇರ್ವಿನ್ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಇಬ್ಬರು ಖದೀಮರು ಇವರನ್ನು ತಳ್ಳಿ ಕೆಳಕ್ಕೆ ಬೀಳಿಸಿ ಮೊಬೈಲ್ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಎರಡೂ ಪ್ರಕರಣಗಳಲ್ಲೂ ಖದೀಮರಲ್ಲಿ ಓರ್ವ ತೆಳ್ಳಗೆ, ಉದ್ದಕ್ಕೆ ಇದ್ದು, ಮತ್ತೋರ್ವ ಕುಳ್ಳಗೆ, ದಪ್ಪಗಿದ್ದಾನೆ ಎಂದು ದೂರುದಾರರು ತಿಳಿಸಿದ್ದು, ಎರಡೂ ಪ್ರಕರಣಗಳನ್ನು ಒಂದೇ ತಂಡ ನಡೆಸಿದೆ ಎಂದು ನಂಬಲಾಗಿದೆ. ಈ ಸಂಬಂಧ ಲಷ್ಕರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್ ಡಿಕ್ಕಿ: ಆಗ್ರಾದ ಲಾರಿ ಚಾಲಕ ಸಾವು

ಮೈಸೂರು, ಮಾ. 6– ಪಾದಚಾರಿಗೆ ಸ್ಕೂಟರ್ ಡಿಕ್ಕಿ ಹೊಡೆದು ಉತ್ತರ ಪ್ರದೇಶ ಮೂಲದ ಟ್ರಕ್ ಚಾಲಕ ಸಾವನ್ನಪ್ಪಿರುವ ಘಟನೆ ಮೈಸೂರಿನ ಹಿನಕಲ್ ಬಳಿಯ ರಿಂಗ್ ರಸ್ತೆಯಲ್ಲಿ ಸಂಭವಿಸಿದೆ. ಉತ್ತರ ಪ್ರದೇಶದ ಆಗ್ರಾ ಮೂಲದ ಧರ್ಮೇಂದ್ರ ಕುಮಾರ್(41) ಅಪಘಾತದಲ್ಲಿ ಸಾವನ್ನಪ್ಪಿದವನಾಗಿದ್ದು, ಈತ ಮತ್ತು ಮತ್ತೋರ್ವ ಚಾಲಕ ಮುಖೇಶ್‌ಕುಮಾರ್ ಮಾರ್ಚ್ 1ರಂದು ಕೆಮಿಕಲ್ ಲೋಡ್ ಇರುವ ಟ್ರಕ್‌ನಲ್ಲಿ ಆಗ್ರಾದಿಂದ ಹೊರಟು ಮಾರ್ಚ್ 4ರಂದು ಮೈಸೂರು ತಲುಪಿ ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕೆಮಿಕಲ್ ಅನ್‌ಲೋಡ್ ಮಾಡಿದ ನಂತರ ಆಗ್ರಾಗೆ ಹೋಗಲು ಲೋಡ್‌ಗಾಗಿ ಹಿನಕಲ್ ಬಳಿ ರಿಂಗ್ ರಸ್ತೆಯಲ್ಲಿರುವ ಸುಧೀರ್ ವೇ ಬ್ರಿಡ್ಜ್ ಬಳಿ ಟ್ರಕ್ ನಿಲ್ಲಿಸಿಕೊಂಡಿದ್ದರು. ಅಂದು ರಾತ್ರಿ 8 ಗಂಟೆ ಸುಮಾರಿನಲ್ಲಿ ಧರ್ಮೇಂದ್ರಕುಮಾರ್ ಊಟ ಮಾಡಲು ಹಿನಕಲ್ ಫ್ಲೈಓವರ್ ಬಳಿ ಇರುವ ಕೇರಳಾಪುರ ಹಿಂದೂ ಮಿಲ್ಟ್ರಿ ಹೋಟೆಲ್‌ಗೆ ತೆರಳಲು ರಸ್ತೆ ದಾಟುತ್ತಿದ್ದ ವೇಳೆ ಚಂದನ್ ಎಂಬಾತ ಚಾಲನೆ ಮಾಡಿಕೊಂಡು ಬಂದ ಸ್ಕೂಟರ್ (ಕೆಎ 09–ಹೆಚ್‌ಡಬ್ಲ್ಯೂ 6802) ಈತನಿಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಧರ್ಮೇಂದ್ರಕುಮಾರ್‌ನನ್ನು ಕೆಆರ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಆತ ಮಾರ್ಚ್ 5ರಂದು ಬೆಳಗ್ಗೆ 9.50 ಸುಮಾರಿನಲ್ಲಿ ಸಾವನ್ನಪ್ಪಿದ್ದಾನೆ. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಡತನದಿಂದ ಸಾಕಲಾಗದೇ ಮೂರು ತಿಂಗಳ ಮಗು 1.20 ಲಕ್ಷಕ್ಕೆ ಮಾರಾಟ

ನಂಜನಗೂಡು, ಮಾ. 6– ತೀವ್ರ ಬಡತನದಿಂದಾಗಿ ಸಾಕಲಾಗದೇ ಮೂರು ತಿಂಗಳ ಹೆಣ್ಣು ಮಗುವನ್ನು 1.20 ಲಕ್ಷ ರೂ.ಗಳಿಗೆ ಮಾರಾಟ ಮಾಡಿರುವ ಬಗ್ಗೆ ತಡವಾಗಿ ವರದಿಯಾಗಿದೆ. ಸುತ್ತೂರು ಗ್ರಾಮದಲ್ಲಿ ವಾಸವಿರುವ ಕೂಲಿ ಕಾರ್ಮಿಕಳಾದ ಮಂಗಳಗೌರಿ ಎಂಬಾಕೆಯೇ ಅದೇ ಗ್ರಾಮದ ಜಯಮ್ಮ ಮತ್ತು ಲಾಯರ್ ಸಂತು ಎಂಬುವರ ಮೂಲಕ ತಮಿಳುನಾಡಿನ ದಂಪತಿಗೆ 2020ರ ಜೂನ್ 17ರಂದು ತಿ.ನರಸೀಪುರದ ಮಾರ್ಕೆಟ್ ಹತ್ತಿರ 1.20 ಲಕ್ಷ ರೂ.ಗಳಿಗೆ ತನ್ನ ಮೂರು ತಿಂಗಳ ಮಗುವನ್ನು ಮಾರಾಟ ಮಾಡಿದ್ದಳು ಎಂದು ನಂಜನಗೂಡಿನ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಟಿ. ಪರಶುರಾಮ ಅವರು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ವಿವರ: ಮಗು ಮಾರಾಟ ಮಾಡಿರುವ ಮಂಗಳಗೌರಿ, ರವಿ ಎಂಬಾತನೊಂದಿಗೆ ವಿವಾಹವಾಗಿದ್ದಳು. ಆದರೆ, ಅತಿಯಾದ ಮದ್ಯವ್ಯಸನಿಯಾಗಿದ್ದ ರವಿ, ಕಳೆದ ಒಂದೂವರೆ ವರ್ಷದ ಹಿಂದೆ ಸಾವನ್ನಪ್ಪಿದ್ದಾನೆ. ಈ ದಂಪತಿಗೆ ಇಬ್ಬರು ಅವಳಿ ಜವಳಿ ಹೆಣ್ಣು ಮಕ್ಕಳಿದ್ದರು. ನಂತರ ಈಕೆ ತನ್ನ ಬಾವ ಸೀನ ಎಂಬಾತನೊಂದಿಗೆ ಸಂಬಂಧವಿಟ್ಟುಕೊಂಡಿದ್ದು, ಆತನ ಮೂಲಕ ಮತ್ತೊಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾಳೆ.

ಮಂಗಳಗೌರಿಯು ರವಿಗೆ ಜನಿಸಿದ್ದ ಮೂರೂವರೆ ವರ್ಷದ ಹೆಣ್ಣು ಮಗು ಮತ್ತು ಆಕೆಯ ಬಾವನಿಗೆ ಜನಿಸಿದ ನಾಲ್ಕು ತಿಂಗಳ ಹೆಣ್ಣು ಮಗುವನ್ನು, ಮಕ್ಕಳ ಅಜ್ಜಿ ವೆಂಕಟಮ್ಮನವರ ಬಳಿ ಬಿಟ್ಟು, ಮೈಸೂರಿಗೆ ಗಾರೆ ಕೆಲಸಕ್ಕೆ ಹೋಗುತ್ತಿದ್ದಳು.

ಖಚಿತ ಮಾಹಿತಿ ಮೇರೆಗೆ ಶಿಶು ಅಭಿವೃದ್ಧಿ ಇಲಾಖೆ ಅಧಿಕಾರಿಗಳು 2023ರ ಜನವರಿ 1ರಂದು ಸುತ್ತೂರಿಗೆ ಭೇಟಿ ನೀಡಿ ವಿಚಾರಣೆ ನಡೆಸಿದಾಗ, ಮಂಗಳಗೌರಿ 2020ರಲ್ಲಿ ಮೂರು ತಿಂಗಳ ಹೆಣ್ಣು ಮಗುವನ್ನು 1.20 ಲಕ್ಷಕ್ಕೆ ಜಯಮ್ಮ ಮತ್ತು ಲಾಯರ್ ಸಂತು ಎಂಬುವರ ಮೂಲಕ ತಮಿಳುನಾಡು ದಂಪತಿಗೆ ಮಾರಾಟ ಮಾಡಿರುವುದು ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು ಅಜ್ಜಿಯ ಆರೈಕೆಯಲ್ಲಿದ್ದ ಮಂಗಳಗೌರಿಯ ಇಬ್ಬರೂ ಹೆಣ್ಣು ಮಕ್ಕಳನ್ನು ವಶಕ್ಕೆ ಪಡೆದು ಸುರಕ್ಷತೆಗಾಗಿ ಮೈಸೂರಿನ ಛಾಯಾದೇವಿ ದತ್ತು ಸಂಸ್ಥೆಗೆ ದಾಖಲಿಸಿದ್ದಾರೆ. ಅದೇ ವೇಳೆ ಮಗು ಮಾರಾಟ ಪ್ರಕರಣದಲ್ಲಿ ತಾಯಿ ಮಂಗಳಗೌರಿ, ಜಯಮ್ಮ ಮತ್ತು ಲಾಯರ್ ಸಂತು ಹಾಗೂ ಮಗು ಖರೀದಿಸಿರುವ ತಮಿಳುನಾಡು ದಂಪತಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಿಳಿಕೆರೆ ಠಾಣೆಗೆ ದೂರು ಸಲ್ಲಿಸಿದ್ದಾರೆ.

ನಾಳೆ ಕನ್ನಡ ಚಿತ್ರರಂಗದ ಹಿರಿಯ ನಾಯಕಿಯರ ಚಿತ್ರಗೀತೆ ಗಾಯನ



ಮೈಸೂರು,ಮಾ.6(ಪಿಎಂ)– ಸೌಂಡ್ ಅಂಡ್ ರಿದಂ ಸಂಸ್ಥೆ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ ಮಾ.8ರಂದು ಕನ್ನಡದ ಹಳೇ ಚಲನಚಿತ್ರಗಳ ನಾಯಕಿಯರ ಚಿತ್ರಗೀತೆ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಎ.ಎಸ್.ರವಿಶಂಕರ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 6ರಿಂದ ರಾತ್ರಿ 8ರವರೆಗೆ 'ಬಾಳೊಂದು ಭಾವಗೀತೆ' ಶೀರ್ಷಿಕೆಯಡಿ ಸಂಗೀತ ಕಾರ್ಯಕ್ರಮ ನಡೆಯಲಿದೆ. ಮಿನುಗುತಾರೆ ಕಲ್ಪನಾ, ಅಭಿನಯ ಶಾರದೆ ಜಯಂತಿ, ಮಂಜುಳಾ ನಟಿಸಿರುವ ಚಿತ್ರಗೀತೆಗಳನ್ನು 10 ಗಾಯಕರು ಸಾದರಪಡಿಸಲಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದರು. ಗಾಯಕರಾದ ಡಾ.ಶಿವಕುಮಾರ್, ಮಲ್ಲಿಕ್ ಗೋಷ್ಠಿಯಲ್ಲಿದ್ದರು.



ಮೈಸೂರು ಕೆ.ಜಿ.ಕೊಪ್ಪಲಿನ ಆದಿಶಕ್ತಿ ಬಂದಂತಮ್ಮ ಕಾಳಮ್ಮ ಚಾರಿಟೆಬಲ್ ಟ್ರಸ್ಟ್‌ನ ನೂತನ ಅಧ್ಯಕ್ಷರಾಗಿ ಸಿ.ಬಸವರಾಜ್, ಉಪಾಧ್ಯಕ್ಷರಾಗಿ ಪಿ.ಮಹದೇವಪ್ಪ, ಕಾರ್ಯದರ್ಶಿಯಾಗಿ ಮಾಜಿ ಮೇಯರ್ ಆರ್.ಲಿಂಗಪ್ಪ, ಸಹಕಾರ್ಯದರ್ಶಿಯಾಗಿ ಎಸ್.ಬಸವರಾಜ್, ಖಜಾಂಚಿಯಾಗಿ ಚಂದ್ರು ಆಯ್ಕೆಯಾಗಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರದ ವಿವಿಧ ಗ್ರಾಮಗಳಿಗೆ

ಬಿಜೆಪಿ ಮುಖಂಡ ಕವೀಶ್‌ಗೌಡ ಭೇಟಿ

ಕ್ಷೇತ್ರದಲ್ಲಿ ಪ್ರತಿ ಹಳ್ಳಿಗೂ ಭೇಟಿ ನೀಡಿ ಪಕ್ಷ ಸಂಘಟನೆ ಸಂಬಂಧ ಕಾರ್ಯಕರ್ತರೊಂದಿಗೆ ಸಮಾಲೋಚನೆ



ಮೈಸೂರು,ಮಾ.6(ಪಿಎಂ)– ಇತ್ತೀಚೆಗೆ ಬಿಜೆಪಿ ಸೇರ್ಪಡೆಯಾದ ಚಾಮರಾಜ ಕ್ಷೇತ್ರದ ಮಾಜಿ ಶಾಸಕ ವಾಸು ಅವರ ಪುತ್ರ, ಪಕ್ಷದ ಮುಖಂಡ ಕವೀಶ್‌ಗೌಡ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಗುಮಚನಹಳ್ಳಿ ಮತ್ತು ಚುಂಚರಾಯನಹುಂಡಿ ಗ್ರಾಮಗಳಲ್ಲಿ ಪಕ್ಷದ ಕಾರ್ಯಕರ್ತರೊಂದಿಗೆ ಗ್ರಾಮಸ್ಥರ ಮನೆ ಮನೆಗೆ ಭೇಟಿ ಜನತೆಯ ಕುಶಲೋಪರಿ ವಿಚಾರಿಸಿದರು.

ಇದಕ್ಕೂ ಮುನ್ನ ಕ್ಷೇತ್ರದ ಜಯಪುರ ಗ್ರಾಮದ ಮಲೆಮಹದೇಶ್ವರ ದೇವಸ್ಥಾನದಲ್ಲಿ ಕವೀಶ್‌ಗೌಡ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಜಯಪುರ ಹೋಬಳಿಯ ದೊಡ್ಡಹುಂಡಿ ಗ್ರಾಮದಲ್ಲಿ ಮುರುಡ ಬಸವೇಶ್ವರ ಸ್ವಾಮಿಯವರ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿದ ಅವರು, ಇಲ್ಲಿ ನಡೆದ ಪರದಲ್ಲಿ (ಅನ್ನಸಂತರ್ಪಣೆ) ಭೋಜನ ಸ್ವೀಕರಿಸಿದರು. ಭಕ್ತರ ಸಮ್ಮುಖದಲ್ಲಿ ಕುಳಿತು ರಾಗಿ ಮುದ್ದೆ–ಅವರೆಕಾಳು, ಹಲಸಿನಕಾಯಿ ಪಲ್ಯ ಮತ್ತು ಪಾಯಸ ಸವಿದರು. ಸ್ಥಳೀಯ ಮುಖಂಡರು ಪಕ್ಷಾತೀತವಾಗಿ ಕವೀಶ್‌ಗೌಡರನ್ನು ಬರಮಾಡಿಕೊಂಡು ಕುಶಲೋಪರಿ ವಿಚಾರಿಸಿದರು.

ನಂತರ ದಾರಿಪುರ, ಉದ್ಬೂರು, ಜಯಪುರ ಗ್ರಾಮಗಳ ಬಿಜೆಪಿ ಪಕ್ಷದ ಕಾರ್ಯಕರ್ತರು ಕವೀಶ್‌ಗೌಡರನ್ನು ಭೇಟಿ ಮಾಡಿದ್ದರು. ಈ ವೇಳೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಪಕ್ಷ ಗೆಲುವು ಸಾಧಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳುವಂತೆ ಕಾರ್ಯಕರ್ತರಲ್ಲಿ ಕವೀಶ್‌ಗೌಡ ಕೋರಿದರು. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರತಿ ಹಳ್ಳಿಗೂ ಭೇಟಿ ನೀಡಿ ಪಕ್ಷ ಸಂಘಟಿಸಲು ಒತ್ತು ನೀಡುತ್ತೇನೆ. ಪಕ್ಷ ಸಂಘಟನೆ ನಿಟ್ಟಿನಲ್ಲಿ ಕಾರ್ಯಕರ್ತರು ತಮಗೆ ಅಗತ್ಯ ಸಹಕಾರ ನೀಡಬೇಕೆಂದು ವಿನಂತಿಸಿದರು.

ಸೀರ್ವಿ ಸಮಾಜದಿಂದ ಕಾಮನ ಪ್ರತಿಕೃತಿ ದಹನ



ಮೈಸೂರು, ಮಾ.6(ಎಸ್‌ಪಿಎನ್)– ಮೈಸೂರು ಕೆಆರ್‌ಎಸ್ ರಸ್ತೆಯ ಸೀರ್ವಿ ಸಮಾಜ ಕಚೇರಿ ಆವರಣದಲ್ಲಿ 'ಕಾಮನ ಪ್ರತಿಕೃತಿ ದಹಿಸುವ' ಮೂಲಕ 'ಹೋಳಿ ಹಬ್ಬ'ವನ್ನು ಸಂಭ್ರಮ–ಸಡಗರದಿಂದ ಸೋಮವಾರ ಆಚರಿಸಲಾಯಿತು.

ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸೀರ್ವಿ ಸಮಾಜದ ಮುಖಂಡರ ನೇತೃತ್ವದಲ್ಲಿ 'ಕಾಮನ ಪ್ರತಿಕೃತಿ ದಹನ ನೆರವೇರಿತು.

ನಂತರ ಮಾತನಾಡಿದ ಶ್ರೀಗಳು, ಶಿಶಿರ ಋತುವಿನ ಫಾಲ್ಗುಣ ಮಾಸದ ಪೌರ್ಣಿಮೆ ದಿನವನ್ನು 'ಕಾಮನ ಹುಣ್ಣಿಮೆ' ಅಥವಾ 'ಹೋಳಿ ಹಬ್ಬ' ಎಂದು ಆಚರಿಸುತ್ತಾರೆ. ನಮ್ಮ ಹಿಂದೂ ಸಂಪ್ರದಾಯದಂತೆ ವರ್ಷದ ಕಟ್ಟಕಡೆಯ ಹಬ್ಬವೂ ಹೌದು. ಇದಾದ ಕೆಲವೇ ದಿನಕ್ಕೆ ಯುಗಾದಿ ಹಬ್ಬ ಬರುತ್ತದೆ. ಇದನ್ನು ಸಂಭ್ರಮ, ಸಡಗರದಿಂದ ನಾವು–ನೀವೆಲ್ಲಾ ಆಚರಿಸುತ್ತೇವೆ ಎಂದು ತಿಳಿಸಿದರು.



ಈ ವೇಳೆ ಸೀರ್ವಿ ಸಮಾಜದ ಅಧ್ಯಕ್ಷ ಸುರರಾಮ್, ಉಪಾಧ್ಯಕ್ಷ ಪ್ರಭುರಾವ್ ಪವಾರ್, ಕಾರ್ಯದರ್ಶಿ ಸುಭಾಷ್ ಕಾಗ್, ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಯೋಜಕ ಜೈನಾರಾಮ್ ಪರಿಹಾರ್, ಉಪಾಧ್ಯಕ್ಷ ಧರ್ನಿಚಂದು ಹಾಮಡ್, ಕಾರ್ಯದರ್ಶಿ ಬಿ.ಪ್ರಕಾಶ್, ರೂಪಾರಾಮ್ ರಾಥೋಡ್, ಮಹಿಳಾ ಸದಸ್ಯರಾದ ಶೋಭಾ ಸೋಲಂಕಿ, ಶೀಲಾ ಸೋಲಂಕಿ, ಮುಖಂಡರಾದ ಮೋಹನ್ ಸೋಲಂಕಿ ಉಪಸ್ಥಿತರಿದ್ದರು. ಕಾಮನ ಪ್ರತಿಕೃತಿ ದಹಿಸಿದ ನಂತರ ಸೀರ್ವಿ ಸಮಾಜದ ಕಚೇರಿ ಆವರಣದಲ್ಲಿ ರಾಜಸ್ತಾನಿ ಶೈಲಿಯ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ: ಶಂಕಿತ ಉಗ್ರ ಶಾರಿಕ್ 10 ದಿನ ಎನ್‌ಐಎ ವಶಕ್ಕೆ

ಸ್ಫೋಟದ ಹೊಣೆ ಹೊತ್ತ ಐಎಸ್‌ಐಎಸ್



ಮಂಗಳೂರು: ಮಂಗಳೂರು ಆಟೋದಲ್ಲಿ ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಮೊಹಮ್ಮದ್ ಶಾರಿಕ್‌ನನ್ನು ಮಾರ್ಚ್ 15ರವರೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕಸ್ಟಡಿಗೆ ನೀಡಲಾಗಿದೆ. ಸ್ಫೋಟದಲ್ಲಿ ಗಂಭೀರ ಸುಟ್ಟು ಗಾಯಗೊಂಡಿದ್ದ ಶಂಕಿತ ಉಗ್ರ ಶಾರಿಕ್ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ಎರಡೂವರೆ ತಿಂಗಳ ಬಳಿಕ ಇಂದು ಆತ ಸಂಪೂರ್ಣವಾಗಿ ಚೇತರಿಸಿಕೊಂಡಿದ್ದು ಡಿಸ್ಚಾರ್ಜ್ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ ಶಾರಿಕ್ ನನ್ನು ಎನ್‌ಐಎ ಬೆಂಗಳೂರಿನ ವಿಶೇಷ ಎನ್‌ಐಎ ಕೋರ್ಟ್ ಮುಂದೆ ಹಾಜರುಪಡಿಸಿದ್ದು ಆತನನ್ನು 10 ದಿನಗಳ ಎನ್‌ಐಎ ಕಸ್ಟಡಿಗೆ ನೀಡಿದೆ.

2022ರ ನವೆಂಬರ್ 19ರಂದು ಮಂಗಳೂರಿನಲ್ಲಿ ಆಟೋರಿಕ್ಷಾದಲ್ಲಿ ಪ್ರಯಾಣಿಸುತ್ತಿದ್ದಾಗ ಕೈಯಲ್ಲಿದ್ದ ಕುಕ್ಕರ್ ಬಾಂಬ್ ಸ್ಫೋಟಗೊಂಡು ಶಾರಿಕ್ ಗಾಯಗೊಂಡಿದ್ದನು. ಆತನೊಂದಿಗೆ ಆಟೋ ರಿಕ್ಷಾ ಚಾಲಕನೂ ಗಾಯಗೊಂಡಿದ್ದು, ಆರೋಪಿಗೆ ಶೇ 40ರಷ್ಟು ಸುಟ್ಟ ಗಾಯಗಳಾಗಿತ್ತು. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಮೂಲದ ಶಾರಿಕ್, ಭಯೋತ್ಪಾದಕ ಸಂಘಟನೆಯಾದ ಇಸ್ಲಾಮಿಕ್ ಸ್ಟೇಟ್‌ನಿಂದ ಪ್ರೇರಿತನಾಗಿದ್ದನು ಮತ್ತು ಶಿವಮೊಗ್ಗ ಪಟ್ಟಣದಲ್ಲಿ ಇದೇ ರೀತಿಯ ಐಎಸ್ ನೆಲೆಯನ್ನು ಸ್ಥಾಪಿಸಲು ಯೋಜಿಸುತ್ತಿದ್ದನು ಎನ್ನಲಾಗಿದೆ.

ಈ ಮಧ್ಯೆ, ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ISIS ಉಗ್ರ ಸಂಘಟನೆ ಕೊನೆಗೂ ಸ್ಫೋಟದ ಹೊಣೆ ಹೊತ್ತಿದೆ. ಐಸಿಸ್ ಸಂಘಟನೆಯ ವಕ್ತಾರ ಐಎಸ್‌ಕೆಪಿ (ಇಸ್ಲಾಮಿಕ್ ಸ್ಟೇಟ್ಸ್ ಕೊರಸನ್ ಪ್ರಾವಿನ್ಸ್) ನಡೆಸುವ ವಾಯ್ಸ್ ಆಫ್ ಕೊರಸ ನಿಯತಕಾಲಿಕೆಯಲ್ಲಿ ಕರ್ನಾಟಕದ ಮಂಗಳೂರು ಮತ್ತು ತಮಿಳುನಾಡಿನ ಕೊಯಮತ್ತೂರು ಸ್ಫೋಟದ ಹೊಣೆ ಹೊತ್ತಿರುವ ಕುರಿತಾಗಿ ಪ್ರಕಟಿಸಲಾಗಿದೆ.

ಯಡಿಯೂರಪ್ಪ ಹೆಲಿಕಾಪ್ಟರ್ ಲ್ಯಾಂಡಿಂಗ್ ವೇಳೆ ಹಾರಿಬಂದ ಪ್ಲಾಸ್ಟಿಕ್ ಚೀಲಗಳು

ಕಲಬುರಗಿ: ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೆಲಿಕಾಪ್ಟರ್ ಲ್ಯಾಂಡಿಂಗ್ ವೇಳೆ ಭದ್ರತಾ ಲೋಪವಾಗಿರುವ ಘಟನೆಯೊಂದು ಕಲಬುರಗಿ ಜಿಲ್ಲೆಯ ಜೇವರ್ಗಿ ಪಟ್ಟಣ ಹೊರವಲಯದಲ್ಲಿ ನಿರ್ಮಿಸಲಾಗಿರುವ ಹೆಲಿಪ್ಯಾಡ್‌ನಲ್ಲಿ ಸೋಮವಾರ ನಡೆದಿದೆ. ವಿಜಯ ಸಂಕಲ್ಪ ರಥಯಾತ್ರೆ ಸಂಬಂಧ ಯಡಿಯೂರಪ್ಪ ಜೇವರ್ಗಿಗೆ ಆಗಮಿಸಿದ್ದರು. ಹೆಲಿಕಾಪ್ಟರ್ ಮೂಲಕ ಬಂದ ಬಿ.ಎಸ್. ಯಡಿಯೂರಪ್ಪ ತಾತ್ಕಾಲಿಕವಾಗಿ ನಿರ್ಮಿಸಲಾಗಿರುವ ಹೆಲಿಪ್ಯಾಡ್‌ನಲ್ಲಿ ಕಾಪ್ಟರ್ ಲ್ಯಾಂಡ್ ಆಗುತ್ತಿತ್ತು. ಈ ವೇಳೆ ಇದ್ದಕ್ಕಿದ್ದಂತೆ ಪ್ಲಾಸ್ಟಿಕ್ ಚೀಲಗಳು ಹಾರಿಬಂದಿದ್ದು, ಕೂಡಲೇ ಎಚ್ಚೆತ್ತ ಪೈಲೆಟ್ ಹೆಲಿಕಾಪ್ಟರ್ ಅನ್ನು ಲ್ಯಾಂಡ್ ಮಾಡಲಿಲ್ಲ. ಇದರಿಂದಾಗಿ ಕೆಲಕಾಲ ಆತಂಕ ಸೃಷ್ಟಿಯಾಗಿತ್ತು. ನಂತರ ಪೈಲೆಟ್ ಒಂದೆರಡು ಸುತ್ತು ಹೆಲಿಕಾಪ್ಟರ್ ಅನ್ನು ಆಗಸದಲ್ಲಿಯೇ ಹಾರಾಟ ನಡೆಸಿದರು. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಪ್ಲಾಸ್ಟಿಕ್ ಚೀಲಗಳನ್ನು ತೆರವುಗೊಳಿಸಿದರು. ನಂತರ ಪೈಲೆಟ್ ಹೆಲಿಕಾಪ್ಟರ್ ಅನ್ನು ಅಲ್ಲೇ ಲ್ಯಾಂಡ್ ಮಾಡಿದರು.

ಭಾರತ ಸಂಜಾತೆ ತೇಜಲ್ ಅಮೆರಿಕದ ಆಯರ್ ಜಿಲ್ಲಾ ನ್ಯಾಯಾಲಯದ ಮೊದಲ ನ್ಯಾಯಾಧೀಶೆ

ವಾಷಿಂಗ್ಟನ್: ಭಾರತ ಸಂಜಾತೆ ತೇಜಲ್‌ಮೆಹ್ತಾ ಅವರು ಮೆಸಾಚುಸೆಟ್ಸ್‌ನ ಆಯರ್‌ಜಿಲ್ಲಾ ನ್ಯಾಯಾಲಯದ ಮೊದಲ ನ್ಯಾಯಾಧೀಶರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಜಿಲ್ಲಾ ನ್ಯಾಯಾಲಯದ ಮುಖ್ಯ ನ್ಯಾಯಾಧೀಶೆ ಸ್ಟೇಸಿ ಫೋರ್ಟ್ಸ್‌ಅವರು ಮಾರ್ಚ್2ರಂದು ತೇಜಲ್‌ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

'ತೇಜಲ್ ಅವರ ನಾಯಕತ್ವದಲ್ಲಿ ವಿಶ್ವಾಸವಿದೆ' ಎಂದು ಸ್ಟೇಸಿ ಫೋರ್ಟ್ಸ್ ತಿಳಿಸಿದ್ದಾರೆ. ಜನರನ್ನು ಸಹಾನುಭೂತಿಯಿಂದ ನಡೆಸಿಕೊಳ್ಳುವ ಭರವಸೆಯನ್ನು ತೇಜಲ್ ಅವರು ಇದೇ ಸಂದರ್ಭದಲ್ಲಿ ನೀಡಿದರು. ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ತೇಜಲ್ ಅವರ ಕುಟುಂಬ ಸದಸ್ಯರು ಪಾಲ್ಗೊಂಡಿದ್ದರು.

ಜ್ಞಾನಬುತ್ತಿಯಲ್ಲಿ 'ಯುಜಿಸಿ–ನೆಟ್, ಕೆ–ಸೆಟ್ ತರಬೇತಿ ಶಿಬಿರ ಉದ್ಘಾಟನೆ



ಮೈಸೂರು, ಮಾ.6(ಎಂಕೆ)– ಸಮಾಜದಿಂದ ಪಡೆದ ಜ್ಞಾನ ಸಂಪತ್ತನ್ನು ಸಮಾಜದ ಅಭಿವೃದ್ಧಿಗೆ ವಿನಿಯೋಗಿಸಬೇಕು ಎಂದು ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಪ್ರೊ.ಎಂ.ಎಸ್.ಸಪ್ನ ಹೇಳಿದರು.

ಮೈಸೂರಿನ ಲಕ್ಷ್ಮೀಪುರಂನ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು ಆವರಣದಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ಸೋಮವಾರ ಆಯೋಜಿಸಿದ್ದ 'ಯುಜಿಸಿ– ನೆಟ್ ಹಾಗೂ ಕೆ–ಸೆಟ್' ಪರೀಕ್ಷೆಗಳ 45 ದಿನದ ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಸಂಸ್ಥೆಗಳು ಹಣ ಗಳಿಸುವ ಉದ್ದೇಶ ಹೊಂದಿರುವ ಈ ದಿನಮಾನದಲ್ಲಿ ಜ್ಞಾನಬುತ್ತಿ ಸಂಸ್ಥೆಯು ಗ್ರಾಮೀಣ, ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಜ್ಞಾನ ಪಸರಿಸುವ ಕಾರ್ಯದಲ್ಲಿ ತೊಡಗಿದೆ. ನೆಟ್, ಕೆ–ಸೆಟ್, ಬ್ಯಾಂಕಿಂಗ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿದ್ದು, ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಮುಂದಿನ ದಿನಗಳಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿದ ಬಳಿಕ ಈ ಸಂಸ್ಥೆಯ ಬೆಳವಣಿಗೆಗೆ ಸಹಕಾರ ನೀಡಬೇಕು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಕೆ.ಯಶೋಧರಾ ಮಾತನಾಡಿ, ಈಗಿನ ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ಸು ಸಾಧಿಸಬೇಕಾದರೆ ಆಳವಾದ ಅಧ್ಯಯನ ಅಗತ್ಯ. ಪ್ರಶ್ನೆ ಪತ್ರಿಕೆಗಳು ಕಠಿಣವಾಗಿದ್ದು, ನಿಗದಿತ ಕಾಲಮಿತಿಯಲ್ಲಿ ಉತ್ತರಿಸಬೇಕಿದೆ. ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಬೇಕಾದರೆ ವಿಷಯದ ಆಳವಾದ ಜ್ಞಾನ ಇರಬೇಕು. ಪ್ರಶ್ನೆಯನ್ನು ಚೆನ್ನಾಗಿ ಓದಿ, ಅರ್ಥೈಸಿ ಉತ್ತರಿಸಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ನಿಗಮದ ನಿರ್ದೇಶಕ ವೈ.ಎನ್.ಶಂಕರೇಗೌಡ, ಜ್ಞಾನಬುತ್ತಿ ಸಂಸ್ಥೆಯ ಸಂಯೋಜನಾಧಿಕಾರಿ ಡಾ.ಎಸ್.ಬಿ.ಎಂ. ಪ್ರಸನ್ನ, ಜ್ಞಾನಬುತ್ತಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣಗೌಡ, ಕಾರ್ಯದರ್ಶಿ ಎಚ್. ಬಾಲಕೃಷ್ಣ, ಸ್ಪರ್ಧಾತ್ಮಕ ತರಬೇತುದಾರ ಪ್ರೊ.ವಿ. ಜಯಪ್ರಕಾಶ್, ರೋಹನ್ ರವಿಕುಮಾರ್, ಸಂಯೋಜನಾಧಿಕಾರಿಗಳಾದ ಪ್ರೊ.ಸಿ.ಕೆ. ಕಿರಣ್ ಕೌಶಿಕ್, ಕೆ.ವೈ. ನಾಗೇಂದ್ರ ಮತ್ತಿತರರಿದ್ದರು.


ಎರಡನೇ ಬಾರಿ ತ್ರಿಪುರಾ ಮುಖ್ಯಮಂತ್ರಿಯಾಗಿ ನಾಳೆ ಮಾಣಿಕ್ ಸಹಾ ಪ್ರಮಾಣ



ಅಗರ್ತಲ: ಬಿಜೆಪಿ ನಾಯಕ ಮಾಣಿಕ್ ಸಹಾ ಅವರು ಎರಡನೇ ಬಾರಿ ತ್ರಿಪುರಾ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದಾರೆ. ಸೋಮವಾರ ಅಗರ್ತಲಾದಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾಣಿಕ್ ಸಹಾ ಅವರನ್ನು ತ್ರಿಪುರಾದ ಮುಂದಿನ ಮುಖ್ಯಮಂತ್ರಿ ಎಂದು ಹೆಸರಿಸಲಾಯಿತು. ಈ ಆಯ್ಕೆಯನ್ನು ಪಕ್ಷದ ಎಲ್ಲಾ ಶಾಸಕರು ಸರ್ವಾನುಮತದಿಂದ ಅನುಮೋದಿಸಿದ್ದಾರೆ ಎಂದು ಶಾಸಕಾಂಗ ಸಭೆಯ ನಂತರ ಬಿಜೆಪಿಯ ವಕ್ತಾರರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಬಿಜೆಪಿ ಹೈಕಮಾಂಡ್ ಕೇಂದ್ರ ಸಚಿವೆ ಪ್ರತಿಮಾ ಭೌಮಿಕ್ ಅವರನ್ನು ತ್ರಿಪುರ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಬಹುದು ಎಂಬ ಊಹಾಪೋಹ ಇತ್ತು. ಆದರೆ ಎರಡನೇ ಅವಧಿಗೆ ಆಯ್ಕೆ ಮಾಡುವ ಮೂಲಕ ಎಲ್ಲಾ ಊಹಾಪೋಹಗಳಿಗೆ ತೆರೆ ಬಿದ್ದಿದೆ.

ಶ್ರೀರಂಗಪಟ್ಟಣದಲ್ಲಿ 19ನೇ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ

ಮಂಡ್ಯ ಹಸಿರಾಗಲು ಒಡೆಯರ್ ಕೊಡುಗೆ ಅಪಾರ



ಶ್ರೀರಂಗಪಟ್ಟಣ, ಮಾ.6– ಸಕ್ಕರೆ ನಾಡು ಮಂಡ್ಯ ಜಿಲ್ಲೆ ಕೃಷಿ, ನೀರಾವರಿಯಲ್ಲಿ ಸರ್ವತೋಮುಖ ಅಭಿವೃದ್ಧಿ ಕಂಡು ಜಿಲ್ಲೆ ಸಂಪೂರ್ಣ ಹಸಿರುಮಯವಾಗಲು ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರ ಎಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಷಿ ಬಣ್ಣಿಸಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯ ಜನ ಕೃಷಿಯನ್ನು ಹೆಚ್ಚು ಅವಲಂಬಿಸಿದ್ದಾರೆ. ರೈತರ ಜೀವನಾಡಿ ಕೆಆರ್‌ಎಸ್ ಅಣೆಕಟ್ಟೆಯಿಂದಾಗಿ ಜಿಲ್ಲೆ ಹಚ್ಚ ಹಸಿರಿನಿಂದ ಕೂಡಿದೆ. ಈ ಅಣೆಕಟ್ಟೆ ನಿರ್ಮಿಸಲು ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಅವರ ಪತ್ನಿಯ ಶ್ರಮ ಸಾಕ್ಷಿಯಾಗಿದೆ. ರಾಜಮಾತೆಯವರ ಸಂಪೂರ್ಣ ಒಡವೆ ಅಡಮಾನವಿಟ್ಟು ಅಣೆಕಟ್ಟೆ ನಿರ್ಮಾಣ ಮಾಡಿದ್ದು ಅವಿಸ್ಮರಣೀಯ ಎಂದರು.

ಅಣೆಕಟ್ಟೆ ನಿರ್ಮಾಣದ ಹಿಂದೆ ಕಾರ್ಮಿಕರ ಕೊಡುಗೆಯೂ ಸಾಕಷ್ಟಿದ್ದು, ಕಾರ್ಮಿಕರ ಕೊರತೆ ಎದುರಾದಾಗ ಶ್ರೀರಂಗಪಟ್ಟಣ ತಾಲೂಕಿನ ಜನತೆಯೂ ಸಹ ಕಾರ್ಮಿಕರಂತೆ ಕಟ್ಟೆ ನಿರ್ಮಾಣ ಸಂದರ್ಭದಲ್ಲಿ ಶ್ರಮಿಸಿದ್ದಾರೆ ಎಂದರು. ವೇದಬ್ರಹ್ಮ ಡಾ.ಭಾನುಪ್ರಕಾಶ್ ಶರ್ಮಾ ಮಾತನಾಡಿ, ನಿಘಂಟು ತಜ್ಞ ವೆಂಕಟಸುಬ್ಬಯ್ಯ ಹಾಗೂ ಕನ್ನಡದ ಪ್ರಪ್ರಥಮ ಕವಿಯತ್ರಿ ಸಂಚಿಹೊನ್ನಮ್ಮ ಅವರು ಶ್ರೀರಂಗಪಟ್ಟಣದವರೇ ಆಗಿರುವುದರಿಂದ ಶ್ರೀರಂಗಪಟ್ಟಣದಲ್ಲಿ ಜಿಲ್ಲಾ ಸಮ್ಮೇಳನ ನಡೆಯುತ್ತಿರುವುದು ಅರ್ಥಪೂರ್ಣವಾಗಿದೆ ಎಂದರು.

ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಈ ಹಿಂದೆ 40 ರಿಂದ 50 ಟನ್ ಕಬ್ಬು ಬೆಳೆಯುತ್ತಿದ್ದ ರೈತರು ಇದೀಗ 90 ರಿಂದ 130 ಟನ್ ಕಬ್ಬು ಬೆಳೆಯುವ ಹೊಸತಳಿ ಆವಿಷ್ಕಾರ ಮಾಡಿರುವ ನಮ್ಮ ಜಿಲ್ಲೆಯವರಾದ ರೈತ ವಿಜ್ಞಾನಿ ಡಾ.ಎಸ್.ಎನ್.ಸ್ವಾಮಿಗೌಡರನ್ನು ಗೌರವಿಸುವುದು ನಮ್ಮ ಆದ್ಯ ಕರ್ತವ್ಯ. ಕನ್ನಡ ಸಾಹಿತ್ಯ ಇಡೀ ವಿಶ್ವವೇ ಮೆಚ್ಚುವಂತಹ ಸಾಹಿತ್ಯ ಹಾಗೂ ಬದ್ಧತೆ ಹೊಂದಿದೆ. "ಸರ್ವಜನಾಂಗದ ಶಾಂತಿಯ ತೋಟ" ಈ ಸಾಹಿತ್ಯದಲ್ಲಿ ಒಂದೊಂದು ಸಾಲು ಸಹ ಎಲ್ಲಾ ವರ್ಗದ ಜನರು ಹೇಗೆ ಒಗ್ಗೂಡಿ ಬಾಳಬೇಕು, ಬದುಕಬೇಕು ಎಂಬುದನ್ನು ಅಂದೇ ಕವಿಗಳು ಉಲ್ಲೇಖಿಸಿದ್ದಾರೆ. ಅದೇ ರೀತಿ ಈ ವಿಷಯಗಳ ಸಾಲನ್ನು ಪ್ರತಿಯೊಬ್ಬರೂ ತಮ್ಮ ಜೀವನಗಳಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಅದ್ಧೂರಿ ಚಾಲನೆ: ಇದಕ್ಕೂ ಮುನ್ನಾ ಬೆಳಗ್ಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ ಬಳಿ ತಹಸೀಲ್ದಾರ್ ಅಶ್ವಿನಿ ರಾಷ್ಟ್ರಧ್ವಜ, ಶಾಸಕ ರವೀಂದ್ರ ಶ್ರೀಕಂಠಯ್ಯ ನಾಡಧ್ವಜ ಹಾಗೂ ಕಸಾಪ ಜಿಲ್ಲಾಧ್ಯಕ್ಷ ರವಿಕುಮಾರ್ ಪರಿಷತ್ ಧ್ವಜಾರೋಹಣ ನೆರವೇರಿಸುವ ಮೂಲಕ 19ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅದ್ಧೂರಿ ಚಾಲನೆ ನೀಡಿದರು. ಧ್ವಜಾರೋಹಣ ವೇಳೆ ಶಾಲಾ ವಿದ್ಯಾರ್ಥಿಗಳು, ಕನ್ನಡಾಭಿಮಾನಿಗಳು ಹಾಗೂ ಸಾಹಿತ್ಯಾಸಕ್ತರು ರಾಷ್ಟ್ರಗೀತೆ ಹಾಗೂ ನಾಡಗೀತೆಗೆ ಗೌರವ ಸಲ್ಲಿಸಿದರು. ಬಳಿಕ ಪಟ್ಟಣದ ಶ್ರೀರಂಗನಾಥಸ್ವಾಮಿ ಮೈದಾನದಲ್ಲಿ 19ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ಎಸ್.ಎನ್.ಸ್ವಾಮಿಗೌಡರನ್ನು ಎತ್ತಿನಗಾಡಿ ಮೂಲಕ ಕಬ್ಬಿನ ಜಲ್ಲೆ ಹಿಡಿದು ಅದ್ಧೂರಿಯಾಗಿ ಮುಖ್ಯರಸ್ತೆ ಮೂಲಕ ಪೂರ್ಣಕುಂಭ ಹಾಗೂ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಸಿ ವೇದಿಕೆಗೆ ಕರೆತರಲಾಯಿತು.

ಈ ವೇಳೆ ಕಸಾಪ ತಾಲೂಕು ಅಧ್ಯಕ್ಷ ಮಂಜುನಾಥ್, ನಗರ ಘಟಕ ಅಧ್ಯಕ್ಷೆ ಎನ್.ಸರಸ್ವತಿ, ಪುರಸಭಾಧ್ಯಕ್ಷೆ ನಿರ್ಮಲ, ಸದಸ್ಯರು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮಂಡ್ಯ ಸಕ್ಕರೆ ಸೀಮೆಯಾದರೂ, ಅಸಡ್ಡೆಯಿಂದ ಕಹಿಯಾಗುತ್ತಿದೆ

ಸಮ್ಮೇಳನಾಧ್ಯಕ್ಷ ಡಾ.ಎಸ್.ಎನ್.ಸ್ವಾಮಿಗೌಡ ಆತಂಕ

ಶ್ರೀರಂಗಪಟ್ಟಣ: ಮಂಡ್ಯ ಜಿಲ್ಲೆ ಸಕ್ಕರೆ ಸೀಮೆಯಾಗಿದ್ದರೂ ಆರ್ಥಿಕ, ಸಾಮಾಜಿಕ, ರಾಜಕೀಯ, ಅಸಡ್ಡೆಯಿಂದಾಗಿ ಸಕ್ಕರೆ ಕಹಿಯಾಗುತ್ತಿದೆ. ಇದಕ್ಕೆ ಭೌಗೋಳಿಕ, ಹಣದಾಸೆಯೇ ಕಾರಣ. ಮಂಡ್ಯ ಮಧುರತೆಯಿಂದ ದೂರವಾಗುತ್ತಿದೆಯೇನೋ ಎಂಬ ಆತಂಕ ನನ್ನನ್ನು ಕಾಡುತ್ತಿದೆ ಎಂದು ಸಮ್ಮೇಳನಾಧ್ಯಕ್ಷ, ಕಬ್ಬು ತಳಿ ವಿಜ್ಞಾನಿ ಡಾ.ಎಸ್.ಎನ್.ಸ್ವಾಮಿಗೌಡ ತಿಳಿಸಿದರು.

ಎಲ್ಲಾ ಕೃಷಿ ಉತ್ಪನ್ನಗಳ ಲಾಭದ ಪ್ರಮಾಣ ಕಡಿಮೆಯಾಗುವ ಜೊತೆಗೆ ಉತ್ಪಾದಕತೆ ಕಡಿಮೆಯಾಗುತ್ತಿರುವುದು. ಉತ್ಪಾದನಾ ಖರ್ಚು ಹೆಚ್ಚಾಗುವುದು, ಅಸಮರ್ಪಕ ಮಾರುಕಟ್ಟೆ ವ್ಯವಸ್ಥೆ, ಮಣ್ಣಿನ ಫಲವತ್ತತೆ ಕ್ಷೀಣಿಸುವಿಕೆ, ಹೊರಗಿನ ಪರಿಕರಗಳ ಮೇಲೆ ಹೆಚ್ಚು ಅವಲಂಬನೆಯಿಂದಾಗಿ ಯುವ ರೈತಾಪಿ ವರ್ಗ ಕೃಷಿಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿರುವುದು ಜಿಲ್ಲೆಯ ಕೃಷಿಕರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು.

ಸಚಿವ ನಾರಾಯಣಗೌಡ ಕಾಂಗ್ರೆಸ್ ಸೇರ್ಪಡೆಗೆ ತೀವ್ರ ವಿರೋಧ

ಕಾಂಗ್ರೆಸ್ ಜಿಲ್ಲಾಧ್ಯಕ್ಷರಿಗೆ ಬಳೆ ಕೊಟ್ಟು, ಕಾರಿಗೆ ಮೊಟ್ಟೆ ಎಸೆದು, ಫ್ಲೆಕ್ಸ್ ಸುಟ್ಟು ಕಾರ್ಯಕರ್ತರ ಆಕ್ರೋಶ



ಕೆ.ಆರ್.ಪೇಟೆ, ಮಾ.6– ಸಚಿವ ನಾರಾಯಣಗೌಡರನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳಬಾರದೆಂದು ಆಗ್ರಹಿಸಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಕಾರಿಗೆ ಮೊಟ್ಟೆ ಎಸೆದು, ಫ್ಲೆಕ್ಸ್ ಸುಟ್ಟು ಕಾಂಗ್ರೆಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ನೇತೃತ್ವದಲ್ಲಿ ನಡೆದ ಪ್ರಜಾಧ್ವನಿ ಯಾತ್ರೆ ಪೂರ್ವಭಾವಿ ಸಭೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಗದ್ದಲ ಸೃಷ್ಟಿಸಿ, ಮುಖಂಡರ ವಿರುದ್ಧ ಹರಿಹಾಯ್ದರು.

ಸಚಿವ ನಾರಾಯಣಗೌಡರು ಕಾಂಗ್ರೆಸ್ ಟಿಕೆಟ್ ತರುವುದಾಗಿ ಹೇಳುತ್ತಿದ್ದಾರೆ. ನೀವು ಇಲ್ಲಿ ಯಾವ ಪುರುಷಾರ್ಥಕ್ಕೆ ಸಭೆ ನಡೆಸುತ್ತಿದ್ದೀರಿ. ಅವರು ಕಾಂಗ್ರೆಸ್‌ಗೆ ಬಂದರೆ ಸಭೆ, ಸಮಾರಂಭಗಳಲ್ಲಿ ಕಲ್ಲು ಹೊಡೆಯುತ್ತೇವೆ ಎಂದು ಎಚ್ಚರಿಕೆ ನೀಡಿದ ಕಾರ್ಯಕರ್ತರು, ಯಾವುದೇ ಕಾರಣಕ್ಕೂ ನಾರಾಯಣಗೌಡ ಕಾಂಗ್ರೆಸ್‌ಗೆ ಬರಬಾರದು ಎಂದು ತರಾಟೆ ತೆಗೆದುಕೊಂಡರು.

2 ಬಾರಿ ಶಾಸಕರನ್ನಾಗಿ ಮಾಡಿದ ಜೆಡಿಎಸ್, ಮಂತ್ರಿ ಮಾಡಿದ ಬಿಜೆಪಿ ಬಿಟ್ಟು ಕಾಂಗ್ರೆಸ್‌ಗೆ ಬರುತ್ತಿರುವ ನಾರಾಯಣಗೌಡರಿಂದ ಕಾಂಗ್ರೆಸ್ ಪಕ್ಷ ಕಟ್ಟಲು ಸಾಧ್ಯವಿಲ್ಲ. ಅಧಿಕಾರಕ್ಕಾಗಿ ಪಕ್ಷಕ್ಕೆ ಬರುತ್ತಿರುವ ನಾರಾಯಣಗೌಡ ನಾಳೆ ಕಾಂಗ್ರೆಸ್‌ಗೂ ಸಡ್ಡು ಹೊಡೆಯುತ್ತಾರೆ ಎಂದು ಆರೋಪಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಗಂಗಾಧರ್‌ಗೆ ಬಳೆ ಕೊಟ್ಟ ಕಾರ್ಯಕರ್ತರು ನಿಮಗೆ ತಾಲೂಕಿನ 6 ಮುಖಂಡರ ಪೈಕಿ ಒಬ್ಬರಿಗೆ ಟಿಕೆಟ್ ಕೊಡಿಸಲು ಆಗಲಿಲ್ಲ ಎಂದರೆ ಬಳೆ ತೊಟ್ಟು ಮನೆಯಲ್ಲಿರಿ. ನಿಮಗೇಕೆ ಬೇಕು ರಾಜಕೀಯ? ಎಂದು ಆಕ್ರೋಶ ವ್ಯಕ್ತಪಡಿಸಿದ ಕಾರ್ಯಕರ್ತರು, ಮೊದಲು ಅಭ್ಯರ್ಥಿ ಯಾರು ಎಂಬುದನ್ನು ಘೋಷಣೆ ಮಾಡಿ, ಇಲ್ಲದಿದ್ದರೆ ಸಭೆಯಿಂದ ಹೊರಡಿ, ಮತ್ತೆ ಬರಬೇಡಿ ಎಂದು ಮುಖಂಡರಿಗೆ ತಾಕೀತು ಮಾಡಿದರು.

ಕಾಂಗ್ರೆಸ್ ಫ್ಲೆಕ್ಸ್, ಬ್ಯಾನರ್‌ಗೆ ಬೆಂಕಿ: ನಾರಾಯಣಗೌಡರ ವಿರುದ್ಧ ಇಷ್ಟು ವರ್ಷ ಹೋರಾಟ ಮಾಡಿದ್ದೇವೆ. ನಮ್ಮ ಕಾರ್ಯಕರ್ತರು ಅವನಿಂದಾಗಿ ಜೈಲಿಗೆ ಹೋಗಿದ್ದಾರೆ. ದ್ವೇಷದ ರಾಜಕಾರಣ ಮಾಡಿ ಸಾವಿರಾರು ಕಾರ್ಯಕರ್ತರಿಗೆ ನೋವುಂಟು ಮಾಡಿರುವ ನಾರಾಯಣಗೌಡ ಈಗ ಪಕ್ಷಕ್ಕೆ ಬಂದರೆ ಹೇಗೆ ಸೇರಿಸಿಕೊಳ್ಳುತ್ತೀರಾ. ಕಾಂಗ್ರೆಸ್ ಪ್ರಜಾಧ್ವನಿ ಕಾರ್ಯಕ್ರಮ ಹೇಗೆ ಮಾಡ್ತೀರಾ ಮಾಡಿ ನೋಡೋಣ. ನಾರಾಯಣಗೌಡ ದುಡ್ಡು ಕೊಡ್ತಾನೆ ಅಂತಾ ಪಕ್ಷಕ್ಕೆ ಸೇರಿಸಿಕೊಳ್ಳುತ್ತೀರಾ? ನೀವೆಲ್ಲಾ ಗಂಡಸರಾ, ಬಳೆ ತೊಟ್ಟುಕೊಳ್ಳಿ, ಅವನನ್ನು ಸೇರಿಸಿಕೊಂಡರೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಸೇರಿದಂತೆ ಯಾರೆ ಬಂದರೂ ಕಲ್ಲಲ್ಲಿ ಹೊಡೆಯುತ್ತೇವೆ. ಎಂದು ರಸ್ತೆಯಲ್ಲಿ ಕಾಂಗ್ರೆಸ್ ಪಕ್ಷದ ಫ್ಲೆಕ್ಸ್, ಬ್ಯಾನರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಸಭೆ ಮುಗಿಸಿ ಹೊರಟಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಗಂಗಾಧರ್ ಕಾರಿಗೆ ಕಾರ್ಯಕರ್ತರು ಮೊಟ್ಟೆ ಎಸೆದು ಆಕ್ರೋಶ ವ್ಯಕ್ತಪಡಿಸಿದರು.

ನಾರಾಯಣಗೌಡ ಕಾಂಗ್ರೆಸ್ ಸೇರ್ಪಡೆ ಬಗ್ಗೆ ಚರ್ಚೆ ಸಿಲ್ಲ



ಬೆಂಗಳೂರು: ಸಚಿವ ಕೆ.ಸಿ.ನಾರಾಯಣಗೌಡರ ಸೇರ್ಪಡೆಗೆ ಕೆ.ಆರ್.ಪೇಟೆ ಕಾಂಗ್ರೆಸ್ ಕಾರ್ಯಕರ್ತರಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಗುತ್ತಿದ್ದಂತೆಯೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬೆಂಗಳೂರಲ್ಲಿ ಪ್ರತಿಕ್ರಿಯಿಸಿ ನಾರಾಯಣಗೌಡ ಕಾಂಗ್ರೆಸ್ ಸೇರುವ ಬಗ್ಗೆ ತನ್ನೊಂದಿಗೆ ಯಾವತ್ತೂ ಚರ್ಚೆ ಸಿಲ್ಲ ಕಾರ್ಯಕರ್ತರಿಗೆ ಏನು ಮಾಹಿತಿ ಸಿಕ್ಕಿದೆಯೋ ತನಗೆ ಗೊತ್ತಿಲ್ಲ ಎಂದರು.

ಸಾಲಬಾಧೆ: ರೈತ ಆತ್ಮಹತ್ಯೆ

ಕಿಕ್ಕೇರಿ, ಮಾ.6– ಸಾಲಬಾಧೆ ತಾಳಲಾರದೇ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸೋಮವಾರ ನಡೆದಿದೆ.



ಇಲ್ಲಿಗೆ ಸಮೀಪದ ಅಂಕನಹಳ್ಳಿ ಗ್ರಾಮದ ನಿವಾಸಿ ಚಂದ್ರಶೇಖರ್(48) ಆತ್ಮಹತ್ಯೆ ಮಾಡಿಕೊಂಡವರು.

ಇವರು ತಮ್ಮ 2 ಎಕರೆ ಜಮೀನಿನಲ್ಲಿ ಕಬ್ಬು ಹುರಳಿ ಬೆಳೆದಿದ್ದರು. ಅಲ್ಲದೇ ಪಿತ್ರಾರ್ಜಿತವಾಗಿ ಬಂದಿದ್ದ ತಮ್ಮ ತಾಯಿ ಹೆಸರಲ್ಲಿದ್ದ ಜಮೀನಿನಲ್ಲೂ ಕಬ್ಬು ಬೆಳೆದಿದ್ದರು. ವ್ಯವಸಾಯಕ್ಕಾಗಿ ಕೆಆರ್.ಪೇಟೆ ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ 2 ಲಕ್ಷ ರೂ., ಖಾಸಗಿಯಾಗಿ 6 ಲಕ್ಷ ರೂ. ಸಾಲ ಮಾಡಿದ್ದರು. ಕಳೆದ ವರ್ಷ ಬಿದ್ದ ಮಳೆಗೆ ಜಮೀನಿನಲ್ಲಿ ಬೆಳೆದಿದ್ದ ಫಸಲು ನಾಶವಾಗಿತ್ತು. ಅಲ್ಲದೇ ನಿರೀಕ್ಷಿತ ಪ್ರಮಾಣದಲ್ಲಿ ಬೆಳೆ ಬಾರದೇ ಸಾಲ ತೀರಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಮನನೊಂದು ತಮ್ಮ ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲೆಯ 7 ಕ್ಷೇತ್ರದಲ್ಲೂ ಪ್ರಬಲ ಅಭ್ಯರ್ಥಿಗಳು ಕಣಕ್ಕೆ: ಸಿ.ಟಿ.ರವಿ

ಶ್ರೀರಂಗಪಟ್ಟಣ, ಮಾ.6– ಈ ಬಾರಿಯ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ 7 ಕ್ಷೇತ್ರದಲ್ಲೂ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ, ಕನಿಷ್ಠ ನಾಲ್ಕರಿಂದ ಐದು ಸ್ಥಾನ ಗೆಲ್ಲಲಿದ್ದೇವೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸ್ಪಷ್ಟಪಡಿಸಿದರು.



ಪಟ್ಟಣದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡ್ಯ ಹೆಸರೇಳಿಕೊಂಡು ರಾಜಕಾರಣ ಮಾಡಿದವರು ಅಭಿವೃದ್ಧಿ ಮಾಡಲಿಲ್ಲ. ವಿಶ್ವೇಶ್ವರಯ್ಯ, ನಾಲ್ವಡಿ ಅವರ ಕಾಲದಲ್ಲಿ ಆದ ಅಭಿವೃದ್ಧಿ ಬಿಟ್ಟರೆ ಮಂಡ್ಯ ಅಭಿವೃದ್ಧಿ ಆಗಿಲ್ಲ. ಬಿಜೆಪಿ ಮಂಡ್ಯ ಅಭಿವೃದ್ಧಿಗೆ ಬದ್ಧವಾಗಿದೆ. ಆದರೆ ಕಾಂಗ್ರೆಸ್ ಶ್ರೀರಂಗಪಟ್ಟಣದ ಐತಿಹಾಸಿಕ ವ್ಯವಸ್ಥೆ ಹಾಳು ಮಾಡಿದವರ ಪರವಾಗಿದೆ. ಹೀಗಾಗಿ ಶ್ರೀರಂಗಪಟ್ಟಣ, ಮಂಡ್ಯ ಸಾಂಸ್ಕೃತಿಕ ಪುನರುತ್ಥಾನಕ್ಕಾಗಿ ಜನರು ಆಶೀರ್ವದಿಸಬೇಕು ಎಂದರು.

ಕಾಂಗ್ರೆಸ್ ರಾಜ್ಯದ ಜನರಿಗೆ ಸುಳ್ಳಿನ ಕಾರ್ಡ್ ವಿತರಿಸುತ್ತಿದ್ದು, ರಾಜ್ಯದ ಜನ ಕಾಂಗ್ರೆಸ್ ಪಕ್ಷ ತಿರಸ್ಕರಿಸಲಿದ್ದಾರೆ. ಗ್ಯಾರಂಟಿ ಕಾರ್ಡ್ ನೀಡುವುದಾಗಿ ಜನರಿಗೆ ಸುಳ್ಳಿನ ಕಾರ್ಡ್ ನೀಡುತ್ತಿದೆ. ಆದರೆ ಬಿಜೆಪಿ ಯಾವುದೇ ಆಶ್ವಾಸನೆ ನೀಡದೇ ಕಿಸಾನ್ ಸಮ್ಮಾನ್, ಹಾಲಿಗೆ ಪ್ರೋತ್ಸಾಹ ಧನ, ವಿದ್ಯಾಸಿರಿ ಸೇರಿದಂತೆ ಜನರಿಗೆ ಅನೇಕ ಒಳ್ಳೆಯ ಯೋಜನೆಗಳನ್ನು ನೀಡಿದೆ. ಬಿಜೆಪಿ ಗ್ಯಾರಂಟಿ, ಆದರೆ ಕಾಂಗ್ರೆಸ್ ಸುಳ್ಳಿನ ಕಾರ್ಡ್ ಅಷ್ಟೇ ಎಂದು ತಿಳಿಸಿದರು.

ಲೋಕಾಯುಕ್ತ ಬಂದ್ ಮಾಡಿಸಿದ್ದು ಸಿದ್ದರಾಮಯ್ಯ ಸರ್ಕಾರ. ಲೋಕಾಯುಕ್ತವನ್ನು ಹಲ್ಲು ಕಿತ್ತ ಹಾವು ಮಾಡಿ, ಕೋರ್ಟ್‌ಗೆ ಹೋಗುವ ಹಾಗೇ ಮಾಡಿದರು. ಅವರ ಮೇಲಿದ್ದ ದೂರನ್ನು ಮುಚ್ಚಿ ಹಾಕಲು ಲೋಕಾಯುಕ್ತ ರದ್ದು ಮಾಡಿದರು. ಕೆಲವರು ಅತಂತ್ರ ವಿಧಾನ ಸಭೆ ಬರಲಿ ಎಂದು ಪೂಜೆ ಮಾಡಿಸುತ್ತಿದ್ದಾರೆ ಎಂದು ಹೆಚ್‌ಡಿಕೆ ಪೂಜೆ ಬಗ್ಗೆ ವ್ಯಂಗ್ಯವಾಡಿದರು.

ಅಮಿತ್ ಶಾಗೆ ಕಪ್ಪ ಕಾಣಿಕೆ ಸಲ್ಲಿಸಲು ಮಾಡಾಳು ವಿರೂಪಾಕ್ಷ ಹಣ ಸಂಗ್ರಹಿಸಲು ಹೋಗಿ ಸಿಕ್ಕಿ ಹಾಕಿಕೊಂಡರು ಎಂಬ ಬಿ.ಕೆ.ಹರಿಪ್ರಸಾದ್ ಆರೋಪ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಿ.ಟಿ.ರವಿ, ಹರಿಪ್ರಸಾದ್ ಕಪ್ಪ ಕಾಣಿಕೆ ಕಲೆಕ್ಟ್ ಮಾಡುವ ಕೆಲಸದಲ್ಲಿದ್ದರು. ಹಲವು ರಾಜ್ಯಗಳಲ್ಲಿ ಕಪ್ಪಕಾಣಿಕೆ ಕಲೆಕ್ಟ್ ಮಾಡಿ ದೆಹಲಿ ನಾಯಕರಿಗೆ ತಲುಪಿಸುತ್ತಿದ್ದರು. ಅದೇ ಮನಸ್ಥಿತಿಯಲ್ಲಿ ಈಗ ಮಾತನಾಡುತ್ತಿದ್ದಾರೆ. ಅವರು ಹೇಳಿಕೆ ಕೊಟ್ಟಿದ್ದು. ಕಲೆಕ್ಟ್ ಮಾಡುವ ಕೆಲಸದಲ್ಲಿದ್ದು ತಪ್ಪಿಲ್ಲ, ಹರಿಪ್ರಸಾದ್ ತಮ್ಮ ಚಾಕರಿಯ ಅನುಭವದ ಮೇಲೆ ಮಾತಾಡ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ನಂತರ ಪಟ್ಟಣದ ಶ್ರೀರಂಗನಾಥ ಸ್ವಾಮಿ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದ ಸಚಿವರು ಹಾಗೂ ಮುಖಂಡರು ಬಳಿಕ ವಿಜಯ ಸಂಕಲ್ಪ ಯಾತ್ರೆ ಮೂಲಕ ಪ್ರಚಾರ ನಡೆಸಿದರು. ಈ ವೇಳೆ ಕೇಂದ್ರ ಸಚಿವ ಕಿಸನ್ ಪಾಲ್ ಗುಜ್ಜರ್, ಅಬಕಾರಿ ಸಚಿವ ಕೆಗೋಪಾಲಯ್ಯ, ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಖಂಡರಾದ ಸಚ್ಚಿದಾನಂದ, ಡಾ.ಸಿದ್ದರಾಮಯ್ಯ, ಕೆ.ಎಸ್.ನಂಜುಂಡೇಗೌಡ, ಟಿ.ಶ್ರೀಧರ್, ಬಿಜೆಪಿ ತಾಲೂಕು ಅಧ್ಯಕ್ಷ ರಮೇಶ್, ಪ್ರಧಾನ ಕಾರ್ಯದರ್ಶಿ ಸಂತೋಷ್ ಇತರರಿದ್ದರು.

ಒಂದನೇ ಪುಟದಿಂದ

ಖಾಯಂ ತಾತ್ಕಾಲಿಕ ಪಟ್ಟಿ ರದ್ದು

ಹಿರಿಯರನ್ನೂ ಕಡೆಗಣಿಸಿ ಕೇವಲ 170 ಮಂದಿಯನ್ನು ಖಾಯಂ ಮಾಡಲು ಹೊರಡಿಸಿರುವ ತಾತ್ಕಾಲಿಕ ಪಟ್ಟಿ ಅವೈಜ್ಞಾನಿಕವಾಗಿದ್ದು, ಅದರಿಂದ ಉಳಿದೆಲ್ಲಾ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ ಎಂದು ನಾರಾಯಣ್ ವಾದಿಸಿದರು.

ಸಾಮಾಜಿಕ ನ್ಯಾಯದಡಿ ಮಾನವೀಯತೆ ಆಧಾರದಲ್ಲಿ ಎಲ್ಲರನ್ನೂ ಖಾಯಂಗೊಳಿಸಿ ನ್ಯಾಯ ಒದಗಿಸಬೇಕು. ಆವರೆಗೆ ಸದ್ಯ ಪ್ರಕಟಿಸಿರುವ 170 ಮಂದಿಯ ಪಟ್ಟಿಯನ್ನು ರದ್ದುಪಡಿಸಬೇಕು. ತಾರತಮ್ಯ ಮಾಡದೆ ಎಲ್ಲಾ ಕಾರ್ಮಿಕರನ್ನೂ ಖಾಯಂ ಮಾಡಿ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಆಗ್ರಹಿಸಿದರು. ಈ ವೇಳೆ ಏಕಕಾಲದಲ್ಲಿ ಹಲವು ಕಾರ್ಮಿಕರು ಮಾತನಾಡಿದ್ದರಿಂದ ಕೆಲಕಾಲ ಗದ್ದಲ ಉಂಟಾಗಿತ್ತು.

ಈ ವೇಳೆ ಮೇಯರ್ ಶಿವಕುಮಾರ್ ಮಾತನಾಡಿ, ನಗರದ ಎಲ್ಲಾ 65 ವಾರ್ಡ್‌ಗಳಲ್ಲೂ ಸ್ವಚ್ಛತಾ ಕಾರ್ಯ ನಿರ್ವಹಿಸುವ ಪೌರಕಾರ್ಮಿಕರನ್ನು ನಾವು ಅತ್ಯಂತ ಪ್ರೀತಿ, ಗೌರವದಿಂದ ಕಾಣುತ್ತೇವೆ. ನಿಮ್ಮ ಸೇವೆ ಅತ್ಯಂತ ಮಹತ್ವದ್ದಾಗಿದೆ. ಪ್ರತಿಯೊಬ್ಬ ನಾಗರಿಕನೂ ನಿಮ್ಮ ಸೇವೆಯನ್ನು ಸ್ಮರಿಸಿಕೊಳ್ಳಲೇಬೇಕು. ಆ ಕಾರಣದಿಂದಲೇ ಪೌರಕಾರ್ಮಿಕರಿಗೆ ಉಪಹಾರ, ಸಮವಸ್ತ್ರ, ಸುರಕ್ಷತಾ ಸಾಮಗ್ರಿ ಕಲ್ಪಿಸಿಕೊಡಲಾಗಿದೆ. ಅವರ ಆರೋಗ್ಯ, ವಸತಿ, ಕುಟುಂಬದವರ ಯೋಗಕ್ಷೇಮ, ಮಕ್ಕಳ ಶಿಕ್ಷಣಕ್ಕೂ ಪಾಲಿಕೆ ನೆರವಾಗಿದೆ ಎಂದು ಹೇಳಿದರು.

ಪೌರಕಾರ್ಮಿಕರ ಖಾಯಂಗೊಳಿಸಬೇಕು ಎನ್ನುವುದು ಹಲವು ವರ್ಷಗಳ ಬೇಡಿಕೆ. ಇದನ್ನು ಮನಗಂಡ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಮೈಸೂರು ಮಹಾನಗರ ಪಾಲಿಕೆಯ ಒಟ್ಟು 205 ಪೌರಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಲು ಒಪ್ಪಿ, ಕೆಲ ಮಾರ್ಗಸೂಚಿಯನ್ವಯ ಸೇವೆ ಖಾಯಂಗೋಳಿಸುವಂತೆ ಸೂಚಿಸಿತ್ತು. ಅದರನ್ವಯ ಸೇವಾ ದಾಖಲಾತಿಗಳು ಸಮಂಜಸವಾಗಿದ್ದ 170 ಮಂದಿಯ ಖಾಯಂಮಾತಿಗೆ ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿದೆ ಇದರಲ್ಲಿ ಏನೇ ಬದಲಾವಣೆಯಾಗಬೇಕಿದ್ದರೂ ಸರ್ಕಾರದಿಂದಲೇ ಆಗಬೇಕು. ಪಾಲಿಕೆ ಹಂತದಲ್ಲಿ ನಿರ್ಧಾರ ಕೈಗೊಳ್ಳಲಾಗದು ಎಂದು ಶಿವಕುಮಾರ್ ಪ್ರತಿಭಟನಾಕಾರರಿಗೆ ಸ್ಪಷ್ಟನೆ ನೀಡಿದರು.

ಆದರೆ ಇದನ್ನು ಒಪ್ಪದ ಕಾರ್ಮಿಕರು, ನಾವೆಲ್ಲಾ ಒಂದೇ. 170 ಜನರ ಸೇವೆಯನ್ನು ಮಾತ್ರ ಖಾಯಂ ಮಾಡಿದರೆ ಉಳಿದವರಿಗೆಲ್ಲಾ ಅನ್ಯಾಯವಾಗುತ್ತದೆ. ನಿವೃತ್ತಿ ಅಂಚಿನಲ್ಲಿರುವ ಕಾರ್ಮಿಕರ ಇಷ್ಟು ವರ್ಷದ ಸೇವೆ ವ್ಯರ್ಥವಾಗುತ್ತದೆ. ಯಾವ ಕಾರಣಕೂ ಅವೈಜ್ಞಾನಿಕ ಕ್ರಮ ಕೈಗೊಳ್ಳಬೇಡಿ. ಉಳಿದ 1680 ಕಾರ್ಮಿಕರ ಸೇವೆಯನ್ನೂ ಖಾಯಂಗೊಳಿಸಿ. ಇಲ್ಲವೇ ಈಗ ಪ್ರಕಟಿಸಿರುವ 170 ಜನರ ತಾತ್ಕಾಲಿಕ ಪಟ್ಟಿಯನ್ನೂ ರದ್ದು ಮಾಡಿ ಒಟ್ಟಿಗೆ ಕ್ರಮ ವಹಿಸಿ ಎಂದು ಬಿಗಿಪಟ್ಟು ಹಿಡಿದರು.

ಎರಡು ಗಂಟೆಗಳ ಕಾಲ ಸುದೀರ್ಘ ಚರ್ಚೆಯಲ್ಲಿ ಮೇಯರ್ ಶಿವಕುಮಾರ್ ಹಾಗೂ ಪಾಲಿಕೆ ಆಯುಕ್ತ ಜಿ.ಲಕ್ಷ್ಮಿಕಾಂತ ರೆಡ್ಡಿ ಸರ್ಕಾರದ ನಿಯಮಾವಳಿ ಬಗ್ಗೆ ತಿಳಿಹೇಳಿ ಮನವೊಲಿಸಲು ಯತ್ನಿಸಿದರಾದರೂ ಪೌರಕಾರ್ಮಿಕರು ತಮ್ಮ ಪಟ್ಟು ಸಡಿಲಿಸಲಿಲ್ಲ. ನಮ್ಮ ಬೇಡಿಕೆಯಂತೆ ಸೂಕ್ತ ನಿರ್ಧಾರ ಪ್ರಕಟಿಸುವವರೆಗೂ ಇಲ್ಲಿಂದ ಹೊರಹೋಗುವುದಿಲ್ಲ ಎಂದರು. ಆಗ ಮೇಯರ್ ಶಿವಕುಮಾರ್ ಅನಿವಾರ್ಯವಾಗಿ 170 ಪೌರಕಾರ್ಮಿಕರ ಸೇವೆ ಖಾಯಂಗೊಳಿಸಿದ ತಾತ್ಕಾಲಿಕ ಪಟ್ಟಿಯನ್ನು ರದ್ದುಗೊಳಿಸಲು ಆಯುಕ್ತರಿಗೆ ಸೂಚನೆ ನೀಡಿದರು. ಈ ಬಗ್ಗೆ ಶೀಘ್ರ ನಿರ್ಧಾರ ಕೈಗೊಳ್ಳದಿದ್ದರೆ ಸ್ವಚ್ಛತಾ ಕಾರ್ಯ ಬಹಿಷ್ಕರಿಸಿ, ಉಗ್ರ ಸ್ವರೂಪದ ಪ್ರತಿಭಟನೆ ಮಾಡುವುದಾಗಿ ಪೌರಕಾರ್ಮಿಕರು ಎಚ್ಚರಿಸಿದ್ದರಿಂದ, ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಬೇಕು. ನಾಳೆ (ಮಾ.7) ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್‌ರವರು ಮೈಸೂರಿಗೆ ಬರುತ್ತಿದ್ದು, ನಿಮ್ಮ ಬೇಡಿಕೆಯನ್ನು ಅವರ ಮುಂದಿಟ್ಟು, ಪರಿಹಾರೋಪಾಯಕ್ಕೆ ಮನವಿ ಮಾಡುತ್ತೇವೆ. ಸರ್ಕಾರ ಕ್ರಮ ಕೈಗೊಳ್ಳುವವರೆಗೆ ತಾವು ಎಂದಿನಂತೆ ಸೇವೆ ಮುಂದುವರೆಸುವಂತೆ ಮೇಯರ್ ಮನವಿ ಮಾಡಿದ್ದರಿಂದ ಪೌರಕಾರ್ಮಿಕರು ಅಲ್ಲಿಂದ ತೆರಳಿದರು.

"ಪಾಲಿಕೆಯ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಎಲ್ಲಾ ಪೌರಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸಿದ್ದೇವೆ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮವಹಿಸಬೇಕು. ಮಂಗಳವಾರ ಮೈಸೂರಿಗೆ ಆಗಮಿಸುತ್ತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಳಿಗೆ ಮುಖಂಡರನ್ನು ಕರೆದೊಯ್ದು ಮಾತನಾಡಿ ಸುತ್ತೇವೆ ಎಂದು ಭರವಸೆ ನೀಡಿದ್ದಾರೆ. ಜೊತೆಗೆ 170 ಮಂದಿ ಖಾಯಂಮಾತಿ ಪಟ್ಟಿಗೆ ತಡೆ ನೀಡಿರುವುದರಿಂದ ನಾಳೆ(ಮಾ.7) ಏನಾಗುತ್ತದೆ ಎಂದು ನೋಡಿಕೊಂಡು ನಾವು ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ.

– ನಾರಾಯಣ, ಮಾಜಿ ಮೇಯರ್.

ಜನಪ್ರತಿನಿಧಿ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಅಭಿವೃದ್ಧಿ

ಶಾಸಕ ಸಿ.ಎಸ್.ಪುಟ್ಟರಾಜು



ಮಂಡ್ಯ, ಮಾ.6– ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಜನಪ್ರತಿನಿಧಿಗಳು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕಿನ ದುದ್ದ ಹೋಬಳಿ ಪುಟ್ಟಿಕೊಪ್ಪಲು ಗ್ರಾಮದಲ್ಲಿ ಜಿಪಂ, ತಾಪಂ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮಾರನಚಾಕನಹಳ್ಳಿ ಗ್ರಾಪಂ ವತಿಯಿಂದ ಏರ್ಪಡಿಸಿದ್ದ MGNREGA ಅಮೃತ ಸರೋವರ ಯೋಜನೆಯಡಿ ನಿರ್ಮಿಸಿರುವ ಹೊಸಕಟ್ಟೆ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ 29 ಲಕ್ಷ ರೂ.ಗಳನ್ನು ಅಮೃತ ಸರೋವರ ಯೋಜನೆಗೆ ಬಿಡುಗಡೆ ಮಾಡಿದ್ದು, ಉಳಿದ 15 ಲಕ್ಷ ರೂ.ಗಳನ್ನು ಗ್ರಾಮದ ಚಿಕ್ಕಯ್ಯ ಅವರು ಬರಿಸಿ ಈ ಕಾರ್ಯ ಪೂರ್ಣಗೊಳಿಸಿರುವುದಕ್ಕೆ ಅವರಿಗೆ ಅಭಿನಂದನೆ ಸಲ್ಲಿಸಿದರು.

ದುದ್ದ ಹೋಬಳಿ ಕೆರೆಗಳಿಗೆ 185 ಕೋಟಿ ರೂ. ವೆಚ್ಚದಲ್ಲಿ ನೀರು ತುಂಬಿಸುವ ಯೋಜನೆ ಉದ್ಘಾಟನೆಯಾಗಿದ್ದು, ಪುಟ್ಟಿಕೊಪ್ಪಲಿನ ಸರೋವರ ಹಾಗೂ ಕೆರೆಗೆ ಪೈಪ್‌ಲೈನ್ ಅಳವಡಿಸಿ ನೀರು ತುಂಬಿಸುವ ಕಾರ್ಯ ಮಾಡಲಾಗುವುದು. ಅಮೃತ ಸರೋವರ ಯೋಜನೆ ಉದ್ಘಾಟನೆಯಾಗಿದ್ದು, ಮುಂದಿನ ದಿನಗಳಲ್ಲಿ ನಿರ್ವಹಣೆ ಮಾಡುವ ಕೆಲಸ ಮಾಡಬೇಕು. ಪುಟ್ಟಿಕೊಪ್ಪಲಿನ ದೇವಸ್ಥಾನದ ರಾಜಗೋಪುರ ಸೇರಿದಂತೆ ಗ್ರಾಮದ ಅಭಿವೃದ್ಧಿ ಕೆಲಸ ಮಾಡುತ್ತೇವೆ ಎಂದರು.

ಜಿಪಂ ಉಪ ಕಾರ್ಯದರ್ಶಿ ಸಂಜೀವಪ್ಪ ಮಾತನಾಡಿ, ನರೇಗಾ ಯೋಜನೆಯಲ್ಲಿ ಮಂಡ್ಯ ಜಿಲ್ಲೆ ಕೊನೆ ಸ್ಥಾನದಲ್ಲಿತ್ತು. ಇದೀಗ ಮೊದಲನೇ ಸ್ಥಾನದಲ್ಲಿದೆ. ನಾವು ಜಿಲ್ಲೆಯಲ್ಲಿ ಸಮಗ್ರ ಶಾಲೆ ಅಭಿವೃದ್ಧಿ, ಕೆರೆಗಳ ಅಭಿವೃದ್ಧಿ, ಸ್ಮಶಾನ ಅಭಿವೃದ್ಧಿ, ರಸ್ತೆಗಳ ಅಭಿವೃದ್ಧಿ, ದನದ ಕೊಟ್ಟಿಗೆ, ರೇಷ್ಮೆ ಮನೆ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಯಡಿ ಕೆಲಸ ಮಾಡುತ್ತಿದ್ದೇವೆ ಅಮೃತ್ ಯೋಜನೆಯಡಿ ಈಗಾಗಲೇ 17 ಕೆರೆಗಳನ್ನು ಅಭಿವೃದ್ಧಿ ಪಡಿಸಿದ್ದೇವೆ ಎಂದರು.

ಗ್ರಾಪಂ ಸದಸ್ಯ ಡಿ.ಚಿಕ್ಕಯ್ಯ ಮಾತನಾಡಿ, ಶಾಸಕರ ನೇತೃತ್ವದಲ್ಲಿ ದುದ್ದ ಹೋಬಳಿ ವ್ಯಾಪ್ತಿಯ 54 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಉದ್ಘಾಟನೆಯಾಗಿದೆ. ಈ ಯೋಜನೆಯಿಂದ ನಮ್ಮ ಭಾಗಕ್ಕೂ ನೀರಿನ ವ್ಯವಸ್ಥೆ ಕಲ್ಪಿಸಿದ್ದಾರೆ. ಅಮೃತ್ ಯೋಜನೆಯಡಿ ನಮ್ಮ ಗ್ರಾಮಕ್ಕೆ ಕಟ್ಟೆ ನಿರ್ಮಾಣಕ್ಕೆ ಸರ್ಕಾರದಿಂದ 29 ಲಕ್ಷ ಕೊಟ್ಟಿದ್ದರು. ಹೆಚ್ಚುವರಿ ಹಣವನ್ನು ಕ್ರೋಢೀಕರಿಸಿ ಈ ಕಟ್ಟೆ ನಿರ್ಮಾಣ ಮಾಡಿದ್ದೇವೆ. ಗ್ರಾಮೀಣ ಭಾಗದ ಜನರು ಇದರ ಸದುಪಯೋಗಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಈ ವೇಳೆ ಮಾರನಚಾಕನಹಳ್ಳಿ ಗ್ರಾಪಂ ಅಧ್ಯಕ್ಷೆ ಅನಿತಾ, ಉಪಾಧ್ಯಕ್ಷೆ ರೇಖಾ, ಸದಸ್ಯರಾದ ರತ್ನಮ್ಮ, ಲಕ್ಷ್ಮಿ, ಲೋಕೇಶ್, ನಾಗೇಶ್, ಸುನೀತಾ, ಜಗದೀಶ್, ತಾಪಂ ಇಓ ಎ.ಬಿ.ವೇಣು, ಸಹಾಯಕ ನಿರ್ದೇಶಕ ಮಲ್ಲೇಶ್, ಪಿಡಿಓ ಸಿ.ಬಿ.ಪ್ರಸನ್ನ ಸೇರಿದಂತೆ ಮತ್ತಿತರರಿದ್ದರು.

ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ಮಂಡ್ಯ, ಮಾ.6– ಗೃಹಬಳಕೆ ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಮಹಿಳಾ ಕಾರ್ಯಕರ್ತರು ನಗರದ ಡಿಸಿ ಕಚೇರಿ ವಿವಿ ಪ್ರತಿಮೆ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸಿ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.



ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಡಾ.ಹೆಚ್.ಕೃಷ್ಣ ಮಾತನಾಡಿ, ಗೃಹ ಬಳಕೆ ಗ್ಯಾಸ್ ಸಿಲಿಂಡರ್, ಪೆಟ್ರೋಲ್, ಡಿಸೇಲ್ ಸೇರಿದಂತೆ ದಿನ ಬಳಕೆಯ ಪದಾರ್ಥಗಳ ಬೆಲೆ ಏರಿಕೆ ಮಾಡಿದ್ದೆ ಬಿಜೆಪಿ ಸರ್ಕಾರದ ಸಾಧನೆ. 40% ಕಮಿಷನ್ ಸರ್ಕಾರ ಎಂದೇ ಜನರು ಛೀಮಾರಿ ಹಾಕುತ್ತಿದ್ದಾರೆ ಎಂದರು. ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಬರದಂತೆ ತಡೆದು, ಕಾಂಗ್ರೆಸ್ ಸರ್ಕಾರ ರಚನೆಗೆ ಅನುವು ಮಾಡಿಕೊಟ್ಟರೆ 500 ರೂ.ಗೆ ಗ್ಯಾಸ್ ಸಿಲಿಂಡರ್ ಲಭಿಸುವುದು, ಗೃಹಿಣಿಯರಿಗೆ 2000 ರೂ. ಮಾಸಾಶನ ಸಿಗಲಿದೆ ಎಂದರು.

ಲೋಕಾಯುಕ್ತ ದಾಳಿಯಲ್ಲಿ ಪ್ರಶಾಂತ್ ಮಾಡಾಳ್ ಲಂಚ ಸ್ವೀಕರಿಸುತ್ತಿರುವುದು ಸಾಕ್ಷಿಸಮೇತ ಸಾಬೀತಾಗಿದೆ. ಅಲ್ಲದೇ ಅವರ ಮನೆ ಮೇಲೆ ದಾಳಿ ನಡೆಸಿದಾಗಲೂ 8 ಕೋಟಿ 12 ಲಕ್ಷ ರೂ. ಮತ್ತು 4 ಕೆಜಿ ಚಿನ್ನ ಪತ್ತೆಯಾಗಿದೆ. ಇಷ್ಟಾದರೂ ಬೊಮ್ಮಾಯಿ ಸರ್ಕಾರ ಮಾಡಾಳ್ ವಿರೂಪಾಕ್ಷಪ್ಪರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಂಜನಾ, ಶಕುಂತಲಾ ಮತ್ತಿತರರಿದ್ದರು.



ಬೆಂಗಳೂರಿನಲ್ಲಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಿವಾಸದಲ್ಲಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ನಾಯಕರ ಸಭೆ ನಡೆಯಿತು. ಸಭೆಯಲ್ಲಿ ಮಾಜಿ ಸಚಿವರಾದ ಚೆಲುವರಾಯಸ್ವಾಮಿ, ನರೇಂದ್ರಸ್ವಾಮಿ, ಸಂಸದ ಡಿ.ಕೆ.ಸುರೇಶ್, ಚಂದ್ರಶೇಖರ್, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ವಿಧಾನ ಪರಿಷತ್ ಮಾಜಿ ಸದಸ್ಯರಾದ ರಾಮಕೃಷ್ಣ, ಮದ್ದೂರಿನ ಕಾಂಗ್ರೆಸ್ ಮುಖಂಡ ಎಸ್.ಗುರುಚರಣ್ ಮತ್ತು ಉದಯ್ ಇದ್ದರು.

ಬಿಜೆಪಿ ದಲಿತ ಸಮುದಾಯಕ್ಕೆ ಸಮಾನ ಅವಕಾಶ ಕಲ್ಪಿಸಿದೆ

ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ.ಮಹದೇವಯ್ಯ



ತಿ.ನರಸೀಪುರ, ಮಾ.6– ನಿಗಮ ಮಂಡಳಿ, ಪುರಸಭೆ ನಾಮನಿರ್ದೇಶಿತ ಸದಸ್ಯ ಮತ್ತು ಆರಾಧನಾ ಸಮಿತಿ ಸದಸ್ಯ ಸೇರಿದಂತೆ ವಿವಿಧ ಸ್ಥಾನಮಾನ ನೀಡುವ ಮೂಲಕ ವರುಣಾ ಕ್ಷೇತ್ರದ ದಲಿತ ಸಮುದಾಯದವರಿಗೆ ಪಕ್ಷ ಸಮಾನ ಅವಕಾಶ ಕಲ್ಪಿಸಿಕೊಟ್ಟಿದೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಸಿ.ಎಂ.ಮಹದೇವಯ್ಯ ತಿಳಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಬಿಜೆಪಿಯಲ್ಲಿ ದಲಿತರನ್ನು ಕಡೆಗಣಿಸಲಾಗುತ್ತಿದೆ ಎಂದು ಆರೋಪಿಸಿ ವರುಣಾ ಕ್ಷೇತ್ರದ ಎಸ್‌ಸಿ ಮೋರ್ಚಾ ಕೆಲ ಸದಸ್ಯರು ಸಾಮೂಹಿಕ ರಾಜೀನಾಮೆ ನೀಡುವುದಾಗಿ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯೆ ನೀಡಿ, ಅಂದು ನಡೆದ ಸುದ್ದಿಗೋಷ್ಠಿಯಲ್ಲಿ ವರುಣಾ ಎಸ್‌ಸಿ ಮೋರ್ಚಾದ ಕೇವಲ 6 ಮಂದಿ ಮಾತ್ರ ಭಾಗವಹಿಸಿದ್ದು, ಇನ್ನಿತರೆ ಸಂಘಟನೆಗಳ ಮುಖಂಡರನ್ನು ಬಳಸಿಕೊಂಡು ವರುಣಾ ಎಸ್‌ಸಿ ಮೋರ್ಚಾದವು ಸಾಮೂಹಿಕ ರಾಜೀನಾಮೆ ನೀಡುವ ಪ್ರಹಸನ ನಡೆದಿದೆ ಎಂದರು. ಇಂದಿನ ಸುದ್ದಿಗೋಷ್ಠಿಯಲ್ಲಿ ವರುಣಾ ಎಸ್‌ಸಿ ಮೋರ್ಚಾ ಹಲವು ಸದಸ್ಯರು ಭಾಗವಹಿಸಿದ್ದು, ಇಲ್ಲಿ ಯಾವುದೇ ಗೊಂದಲವಿಲ್ಲ. ಮೈಸೂರು ಜಿಲ್ಲಾ ಬಿಜೆಪಿ ಕೋರ್ ಕಮಿಟಿಯಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್, ಮಾಜಿ ಸಚಿವ ಎಂ.ಶಿವಣ್ಣ, ಶಾಸಕ ಹರ್ಷವರ್ಧನ್, ಕಾಂಪೋಸ್ಟ್ ನಿಗಮ ಮಂಡಳಿ ಅಧ್ಯಕ್ಷ ಎಸ್.ಮಹದೇವಯ್ಯ ಸದಸ್ಯರಾಗಿರುವುದಲ್ಲದೇ ದಲಿತ ಸಮುದಾಯದವರೇ ಆದ ಮಡವಾಡಿ ಮಹೇಶ್ ಅವರನ್ನು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ, ಪ್ರಫುಲ್ಲ ಮಲ್ಲಾಡಿ ಅವರನ್ನು ವರುಣಾ ಕ್ಷೇತ್ರದ ಉಸ್ತುವಾರಿಯಾಗಿ ಬಿಜೆಪಿ ಪಕ್ಷ ನೇಮಕ ಮಾಡಿದೆ. ಅಲ್ಲದೇ ಬಹಳ ಹಿಂದೆಯೇ ಬಿಜೆಪಿ ಜಿಲ್ಲಾಧ್ಯಕ್ಷರಾಗಿ ಎಲ್.ಎನ್.ಭಾರತೀ ಶಂಕರ್ ಮತ್ತು ರಾಮಕೃಷ್ಣಪ್ಪರನ್ನು ನೇಮಕ ಮಾಡಿತ್ತು. ಹಾಗಾಗಿ ಬೆರಳೆಣಿಕೆ ಮಂದಿ ಕಾರ್ಯಕರ್ತರು ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ಬಿಜೆಪಿ ಪಕ್ಷ ದೂರುವುದು ಸಮಂಜಸವಲ್ಲ ಎಂದರು.

ಬಿಜೆಪಿ ಪ್ರತಿ ಸಮಾಜವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆಯಾಯ ವರ್ಗದ ನಾಯಕರಿಗೆ ಸ್ಥಾನಮಾನ ನೀಡುತ್ತಿದೆ. ದಲಿತರನ್ನು ಬಿಜೆಪಿ ಪಕ್ಷ ಕೆಟ್ಟದಾಗಿ ನಡೆಸಿಕೊಳ್ಳುತ್ತಿದೆ ಎಂಬುದು ಸತ್ಯಕ್ಕೆ ದೂರವಾದ ಮಾತು. ಬಿಜೆಪಿ ದಲಿತ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡಿರುವುದು ಐತಿಹಾಸಿಕ ನಿರ್ಣಯ. ಹಾಗಾಗಿ ದಲಿತರು ಬಿಜೆಪಿ ಪಕ್ಷದ ಜೊತೆ ಸದಾ ಇರುತ್ತಾರೆ ಎಂದರು.

ನಿಕಟಪೂರ್ವ ಜಿಲ್ಲಾಧ್ಯಕ್ಷ ಶಿವಯ್ಯ ಮಾತನಾಡಿದರು. ಗೋಷ್ಠಿಯಲ್ಲಿ ಎಸ್‌ಸಿ ಮೋರ್ಚಾ ಎಂ.ನಾಗೇಂದ್ರ, ಕೆಡಿಪಿ ಸದಸ್ಯ ನರಸಿಂಹಮೂರ್ತಿ, ಭೂ ನ್ಯಾಯ ಮಂಡಳಿ ಅಧ್ಯಕ್ಷ ಶ್ರೀಧರ್ ದಂಡಿಕೆರೆ, ರಾಜ್ಯ ಎಸ್‌ಸಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಕಾರ್ಯ ಮಹದೇವಯ್ಯ, ಗರ್ಗೇಶ್ವರಿ ಶಕ್ತಿ ಕೇಂದ್ರದ ಅಧ್ಯಕ್ಷ ಆನಂದ, ಎಸ್‌ಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ, ಆಲಗೂಡು ಮಂಜು, ಮಹದೇವಸ್ವಾಮಿ, ವಿಷ್ಣುಮೂರ್ತಿ, ಬಾಲರಾಜ್, ದಿಲೀಪ್ ಕುಮಾರ್, ಕೂಸಪ್ಪ, ಬಸವರಾಜು, ಮಹದೇವಯ್ಯ, ಸಿದ್ದರಾಜು, ಬಾಲು, ವಿಷಕಂಠಮೂರ್ತಿ, ಮಹದೇವಸ್ವಾಮಿ ಇತರರಿದ್ದರು.

ಶ್ರೀಲಕ್ಷ್ಮೀ ವೆಂಕಟರಮಣಸ್ವಾಮಿ ಬ್ರಹ್ಮೋತ್ಸವ ನಾಳೆ

ಶ್ರೀರಂಗಪಟ್ಟಣ, ಮಾ.6– ತಾಲೂಕಿನ ಕರೀಘಟ್ಟದ ಶ್ರೀಲಕ್ಷ್ಮೀ ವೆಂಕಟರಮಣ ಸ್ವಾಮಿ ಬ್ರಹ್ಮೋತ್ಸವ ಮಾ.8ರಂದು ಮಧ್ಯಾಹ್ನ 1.30ರಿಂದ 2.15ರೊಳಗೆ ಸಲ್ಲುವ ಶುಭ ಮಿಥುನ ಲಗ್ನದಲ್ಲಿ ನೆರವೇರಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ತಹಸೀಲ್ದಾರ್ ಹಾಗೂ ಮುಜರಾಯಿ ಅಧಿಕಾರಿ ಶ್ವೇತಾ ಎನ್.ರವೀಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಕ್ಸ್ ಎ ಸೈಡ್ ಕೊಡವ ಕೌಟುಂಬಿಕ ಕ್ರೀಡಾಕೂಟ

ಬಲ್ಲಚಂಡ ಫುಟ್ಬಾಲ್, ಅದೇಂಗಡ ಥ್ರೋ ಬಾಲ್ ಚಾಂಪಿಯನ್


ಕೊಡವ ಕೌಟುಂಬಿಕ ಥ್ರೋಬಾಲ್ ಚಾಂಪಿಯನ್ ಆದೇಂಗಡ ತಂಡ


ಅಮ್ಮತ್ತಿ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಡೆದ ಕೊಡವ ಕೌಟುಂಬಿಕ ಫುಟ್ಬಾಲ್ ಟೂರ್ನಿಯ ಚಾಂಪಿಯನ್ ಬಲ್ಲಚಂಡ ತಂಡ

ಗೋಣಿಕೊಪ್ಪ, ಮಾ.6– ಆಕ್ಸ್ ಸ್ಪೋರ್ಟ್ಸ್ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಅಸೋಸಿಯೇಷನ್ ಹಾಗೂ ಅಜ್ಜಿಕುಟ್ಟೀರ ಸುಬ್ಬಯ್ಯ, ಪೊನ್ನಮ್ಮ ಚಾರಿಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಅಮ್ಮತ್ತಿ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಆಯೋಜಿಸಿದ್ದ ಸಿಕ್ಸ್ ಎ ಸೈಡ್ ಕೊಡವ ಕೌಟುಂಬಿಕ ಫುಟ್ಬಾಲ್‌ನಲ್ಲಿ ಬಲ್ಲಚಂಡ, ಥ್ರೋ ಬಾಲ್‌ನಲ್ಲಿ ಆದೇಂಗಡ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು.

ಭಾನುವಾರ ತಡರಾತ್ರಿ ಹೊನಲು ಬೆಳಕಿನಲ್ಲಿ ನಡೆದ ಫುಟ್ಬಾಲ್ ಫೈನಲ್ ಹಣಾಹಣಿಯಲ್ಲಿ ಬಲ್ಲಚಂಡ ತಂಡದ ವಿರುದ್ಧ ಸೋಲನುಭವಿಸಿದ ಕಳ್ಳಿಚಂಡ ರನ್ನರ್ ಅಪ್ ಸ್ಥಾನ ಪಡೆದುಕೊಂಡಿತು. ಬಲ್ಲಚಂಡ 4–0 ಗೋಲುಗಳಿಂದ ಗೆಲುವು ಸಾಧಿಸಿದ್ದು, ಬಲ್ಲಚಂಡ ಗಾನಾ 3 ಗೋಲು ಸಿಡಿಸಿ ಗೆಲುವಿನ ರೂವಾರಿಯಾದರು. ಬಲ್ಲಚಂಡ ಪೊನ್ನಪ್ಪ 1 ಗೋಲು ಹೊಡೆದು ಗೆಲುವಿನ ಅಂತರ ಹಿಗ್ಗಿಸಿದರು.

ಇದಕ್ಕೂ ಮುನ್ನ ನಡೆದ ಸೆಮಿ ಫೈನಲ್‌ನಲ್ಲಿ ಬಲ್ಲಚಂಡ ತಂಡವು ಪೆನಾಲ್ಟಿ ಶೂಟೌಟ್ ಮೂಲಕ 3–2 ಗೋಲುಗಳ ಅಂತರದಲ್ಲಿ ಪಾಂಡಂಡವನ್ನು ಮಣಿಸಿತು. ಉಭಯ ತಂಡಗಳು ನಿಗದಿತ ಸಮಯದಲ್ಲಿ ಗೋಲು ದಾಖಲಿಸದೆ ಪರದಾಡಿತು. ಮತ್ತೊಂದು ಸೆಮಿಫೈನಲ್‌ನಲ್ಲಿ ಕಳ್ಳಿಚಂಡ ತಂಡವು ಚೌರೀರವನ್ನು 3–1 ಗೋಲುಗಳಿಂದ ಸೋಲಿಸಿತು. ಕಳ್ಳಿಚಂಡ ಸಾವನ್, ಬೋಪಣ್ಣ, ಕಂಡ್ಯತಂಡ ತಮನ್ ಕಾರ್ಯಪ್ಪ, ಚೌರೀರ ಪೊನ್ನಣ್ಣ ತಲಾ ಒಂದೊಂದು ಗೋಲು ದಾಖಲಿಸಿದರು.

ಆದೇಂಗಡ ಥ್ರೋಬಾಲ್ ಚಾಂಪಿಯನ್: ಆದೇಂಗಡ ತಂಡವು ಮೂಕಳೇರವನ್ನು 2–1 ಸೆಟ್‌ಗಳಿಂದ ಮಣಿಸಿ ಚಾಂಪಿಯನ್ ಪಟ್ಟ ಅಲಂಕರಿಸಿತು. 11–15, 15–10, 15–7 ಅಂಕಗಳ ಮೂಲಕ ಗೆಲುವು ಪಡೆಯಿತು. ಸೋಲನುಭವಿಸಿದ ಮೂಕಳೇರ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಸೆಮಿಫೈನಲ್‌ನಲ್ಲಿ ಆದೇಂಗಡ ತಂಡವು (ಬೆಳ್ಳೂರು–ಹರಿಹರ) ಮುಕ್ಕಾಟೀರ ತಂಡವನ್ನು 9–15, 16–14,15–9 ಅಂಕಗಳಿಂದ ಮಣಿಸಿತು. ರೋಚಕ ಪಂದ್ಯಕ್ಕೆ ಸಾಕ್ಷಿಯಾಯಿತು. ಮತ್ತೊಂದು ಸೆಮಿಫೈನಲ್‌ನಲ್ಲಿ ಮೂಕಳೇರ ತಂಡವು (ಬೆಳ್ಳೂರು–ಹರಿಹರ) ಬಾಚೀರವನ್ನು 15–12,15–9 ನೇರ ಸೆಟ್‌ಗಳಿಂದ ಮಣಿಸಿತು.

3 ದಿನ ನಡೆದ ಟೂರ್ನಿಯಲ್ಲಿ 42 ಫುಟ್ಬಾಲ್ ತಂಡ, 15 ಥ್ರೋಬಾಲ್ ತಂಡಗಳು ಭಾಗವಹಿಸಿದವು.

ಸಮಾರೋಪ ; ಭಾನುವಾರ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಪದ್ಮಶ್ರೀ ಪುರಸ್ಕೃತ ಐಮುಡಿಯಂಡ ರಾಣಿ ಮಾಚಯ್ಯ, ನಿವೃತ್ತ ಸೇನಾಧಿಕಾರಿ ಮೇ. ಜ. ಬಾಚಮಂಡ ಕಾರ್ಯಪ್ಪ ಅವರುಗಳನ್ನು ಸನ್ಮಾನಿಸಲಾಯಿತು. ಅಜ್ಜಿಕುಟ್ಟೀರ ಸುಬ್ಬಯ್ಯ, ಪೊನ್ನಮ್ಮ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥ ಅಜ್ಜಿಕುಟ್ಟೀರ ಎಸ್ ಪೊನ್ನಣ್ಣ ಬಹುಮಾನ ವಿತರಿಸಿದರು.

ಈ ಸಂದರ್ಭ ಮಾಜಿ ಅಂತಾರಾಷ್ಟ್ರೀಯ ಬಾಸ್ಕೆಟ್‌ಬಾಲ್ ಆಟಗಾರ್ತಿ ಮಂಡೇಪಂಡ ಪುಷ್ಪ ಕುಟ್ಟಣ್ಣ, ವಿದ್ಯುತ್ ಪರಿವೀಕ್ಷಾಧಿಕಾರಿ ತೀತೀರ ರೋಷನ್ ಅಪ್ಪಚ್ಚು, ಮಾಜಿ ಸೈನಿಕ ಕಟ್ಟೇರ ವಿಶ್ವನಾಥ್, ಮಾಜಿ ಎಂಎಲ್‌ಸಿ ಚೆಪ್ಪುಡೀರ ಅರುಣ್ ಮಾಚಯ್ಯ, ಅಂತಾರಾಷ್ಟ್ರೀಯ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ, ಅಖಿಲ ಕೊಡವ ಸಮಾಜ ಅಧ್ಯಕ್ಷ ಪರದಂಡ ಸುಬ್ರಮಣಿ ಉಪಸ್ಥಿತರಿದ್ದರು.

ನಟ ದಿಗಂತ್ ಕ್ರೀಡಾಭಿಮಾನಿಗಳನ್ನು ರಂಜಿಸಿದರು. ಹಾಡುಗಾರ ಮಚ್ಚಂಡ ಶರಣ್ ಅಯ್ಯಪ್ಪ, ಡಾ. ವೈಷ್ಣವಿ ಕಿಣಿ ಹಾಡುಗಾರಿಕೆ, ಸಣ್ಣುವಂಡ ಸೋಮಣ್ಣ ತಂಡದ ಡಿಜೆ ಕಾರ್ಯಕ್ರಮ ಬೆಳದಿಂಗಳಿನಲ್ಲಿ ಮನ ತಣಿಸಿತು. ಭಾನುವಾರ ತಡರಾತ್ರಿ 12 ಗಂಟೆಗೆ ಸಮಾರೋಪ ಕಾರ್ಯಕ್ರಮ ನಡೆಯಿತು.

ಆಕ್ಸ್ ಸ್ಪೋರ್ಟ್ಸ್ ಆ್ಯಂಡ್ ಎಂಟರ್‌ಟೈನ್‌ಮೆಂಟ್ ಅಸೋಸಿಯೇಷನ್ ಸದಸ್ಯರಾದ ಕೊಟ್ಟಂಗಡ ಸೋಮಣ್ಣ, ಅಜ್ಜೇಟೀರ ವಿಕ್ರಂ ಉತ್ತಪ್ಪ, ಕನ್ನಂಡ ಅರುಣ್ ನಾಚಪ್ಪ, ಮೂಕಳಮಡ ಗಣಪತಿ, ನಡಿಕೇರಿಯಂಡ ಬಿಪಿನ್ ಅಪ್ಪಚ್ಚು ಟೂರ್ನಿ ನಡೆಸಿಕೊಡುವಲ್ಲಿ ಯಶಸ್ವಿಯಾದರು.

ಇಂದು ಜಿಲ್ಲೆಯಾದ್ಯಂತ ಕೈವಾರ ತಾತಯ್ಯ ಜಯಂತಿ

ಗೋಣಿಕೊಪ್ಪಲು, ಮಾ.6– ರಾಜ್ಯ ಸರ್ಕಾರದ ರಾಷ್ಟ್ರೀಯ ಹಬ್ಬವಾಗಿ ಆಚರಿಸಲ್ಪಡುವ ಕೈವಾರ ತಾತಯ್ಯ ಜಯಂತಿಯನ್ನು ಮಾ.7ರಂದು ಕೊಡಗು ಬಲಿಜ ಸಮಾಜ ಆಶ್ರಯದಲ್ಲಿ ಜಿಲ್ಲೆಯ ವಿವಿಧೆಡೆ ಆಚರಿಸಲಾಗುವುದು ಎಂದು ಅಧ್ಯಕ್ಷ ಟಿ.ಎಲ್.ಶ್ರೀನಿವಾಸ್ ತಿಳಿಸಿದ್ದಾರೆ.

ಮಡಿಕೇರಿ ತಾಲೂಕು ಬಲಿಜ ಸಂಘ ಹಾಗೂ ಕೊಡಗು ಬಲಿಜ ಸಮಾಜ,ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಅಲ್ಲಿನ ಬಾಲಭವನ ಸಭಾಂಗಣದಲ್ಲಿ ತಾಲ್ಲೂಕು ಅಧ್ಯಕ್ಷೆ ಮೀನಾಕ್ಷಿ ಕೇಶವ್,ಕೊಡಗು ಬಲಿಜ ಸಮಾಜ ಉಪಾಧ್ಯಕ್ಷ ಟಿ.ವಿ.ಲೋಕೇಶ್, ಹಿರಿಯರಾದ ಟಿ.ಪಿ.ರಮೇಶ್, ನಾಪೋಕ್ಲುವಿನ ಟಿ.ವಿ.ಭವಾನಿ ಮುಂತಾದವರ ನೇತೃತ್ವದಲ್ಲಿ ಬೆಳಗ್ಗೆ 11 ಗಂಟೆಗೆ ಆರಂಭಗೊಳ್ಳಲಿದೆ.

ವಿರಾಜಪೇಟೆ ತಹಸೀಲ್ದಾರ್ ಕಚೇರಿಯಲ್ಲಿ ಸಮಾಜದ ಉಪಾಧ್ಯಕ್ಷ ಯತಿರಾಜ್, ನೂತನ ತಹಶೀಲ್ದಾರ್ ಕೃಷ್ಣಕುಮಾರ್, ಹಬ್ಬಗಳ ಆಚರಣೆ ಸಮಿತಿ ಮಂಜುನಾಥ್ ಸಮ್ಮುಖದಲ್ಲಿ ಜರುಗಲಿದೆ. ಸೋಮವಾರಪೇಟೆಯ ಸಮಾಜದ ನಿರ್ದೇಶಕ ಪ್ರಕಾಶ್, ಶನಿವಾರಸಂತೆಯ ಸಮಾಜದ ಉಪಾಧ್ಯಕ್ಷೆ ಗೀತಾ ಹರೀಶ್, ಶಿರಂಗಾಲದ ಕುಮಾರ್ ನೇತೃತ್ವದಲ್ಲಿ ಕೈವಾರ ತಾತಯ್ಯ ಜಯಂತಿ ನೆರವೇರಲಿದೆ ಎಂದು ತಿಳಿಸಿದ್ದಾರೆ.

ಇಂದು ದುರ್ಗಾ ಪರಮೇಶ್ವರಿ ದೇವಸ್ಥಾನದ ವಾರ್ಷಿಕ ಹಬ್ಬ

ಗೋಣಿಕೊಪ್ಪ, ಮಾ.6– ಬಲ್ಯಮುಂಡೂರು ದುರ್ಗಾ ಪರಮೇಶ್ವರಿ ದೇವಸ್ಥಾನದ ವಾರ್ಷಿಕ ಹಬ್ಬ ಆರಂಭಗೊಂಡಿದ್ದು, ಮಾರ್ಚ್ 7 ರಂದು ದೊಡ್ಡ ಹಬ್ಬ ಜರುಗಲಿದೆ.

ಮಂಗಳವಾರ ಬೆಳಗ್ಗೆ 9 ಗಂಟೆಗೆ ಪೂಜೆ, ಸಾಯಂಕಾಲ 5 ಗಂಟೆಗೆ ಉತ್ಸವ ಮೂರ್ತಿ ದರ್ಶನ, ಅವಭೃತ ಸ್ನಾನ, ರಾತ್ರಿ ದೇವರ ದರ್ಶನ, ವಸಂತಪೂಜೆ ನಡೆಯಲಿದೆ. ಶುಕ್ರವಾರ ಕೊಡಿಮರ ನಿಲ್ಲಿಸುವ ಕಾರ್ಯ ನಡೆಯಿತು. ದೇವರಕಟ್ಟು ಬೀಳುವುದು, ಬಳಕ್, ತುಲಾಭಾರ, ತಲೆಮುಡಿ, ಮಹಾಪೂಜೆ, ನೆರ್ಪು ಆಚರಣೆ ನಡೆಯಿತು.

ಇಂದು ಸಾಮೂಹಿಕ ಸತ್ಯನಾರಾಯಣ ಪೂಜೆ

ಮಡಿಕೇರಿ, ಮಾ.6– ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಮಾ.7 ರಂದು ಸಂಜೆ 4 ಗಂಟೆಯಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಲಿದೆ. ಭಕ್ತರು ಪೂಜೆಯಲ್ಲಿ ಭಾಗವಹಿಸಿ, ಸಾಮೂಹಿಕ ಸತ್ಯನಾರಾಯಣ ಪೂಜೆ ಯಶಸ್ವಿಗೊಳಿಸುವಂತೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಸ್.ದೊರೆ ಕೋರಿದ್ದಾರೆ.

ಕೊಡಗು ಅರಣ್ಯ ಪ್ರವೇಶಿಸಿದ್ದ ಬೇಟೆಗಾರ ಬಂಧನ

2 ನಾಡ ಬಂದೂಕು ವಶ, ಮೂವರು ಪರಾರಿ



ಮಡಿಕೇರಿ, ಮಾ.6– ಕೇರಳ ಗಡಿಯಿಂದ ನಾಡ ಬಂದೂಕಿನೊಂದಿಗೆ ಅಕ್ರಮವಾಗಿ ತಲಕಾವೇರಿ ವನ್ಯಜೀವಿ ವಲಯ ಪ್ರವೇಶಿಸಿದ್ದ ನಾಲ್ವರು ಬೇಟೆಗಾರರ ಪೈಕಿ ಓರ್ವನನ್ನು ಬಂಧಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದೆ.

ತಲಕಾವೇರಿ ವನ್ಯಜೀವಿ ವಲಯದ ಪದಿನಾಲ್ಕನಾಡು ಮೀಸಲು ಅರಣ್ಯದಲ್ಲಿ ಬೇಟೆಗಾರರು ಇರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆ ಚಾಂದೆಟ್ಟುಕೊಲ್ಲಿ ಗಸ್ತು ಹಾಗೂ ಉಪವಲಯದ ಸಿಬ್ಬಂದಿಗಳು ದಾಳಿ ನಡೆಸಿದ್ದಾರೆ. ಈ ಸಂದರ್ಭ ಒಂಟಿ ನಳಿಕೆಯ ಎರಡು ನಾಡ ಬಂದೂಕು ಸಹಿತ ಓರ್ವ ಆರೋಪಿಯನ್ನು ಬಂಧಿಸಲಾಗಿದೆ. ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವರಾಮ್ ಬಾಬು ಹಾಗೂ ಸಹಾಯಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀನಿವಾಸ ನಾಯಕ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಅರಣ್ಯ ಅಧಿಕಾರಿಗಳಾದ ಕೆ.ಕೊಟ್ರೇಶ, ಆನಂದ ಕೆ.ಕೆ, ಗಸ್ತು ವನಪಾಲಕ ಯತೀಶ್ ಬಿ.ಎಂ, ಸುಬ್ರಮಣಿ ಕೆ.ಎಂ ಹಾಗೂ ಕಳ್ಳ ಬೇಟೆ ತಡೆ ಶಿಬಿರದ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಅಕ್ರಮ ಮರ ಸಾಗಾಣಿಕೆ: ಓರ್ವನ ಬಂಧನ

ಮಡಿಕೇರಿ, ಮಾ.6– ಮಡಿಕೇರಿಯಿಂದ ಮಂಗಳೂರು ಕಡೆಗೆ ಲಾರಿಯಲ್ಲಿ ಅಕ್ರಮವಾಗಿ ಹೆಬ್ಬಲಸು ಮರದ ತುಂಡುಗಳನ್ನು ಸಾಗಾಟ ಮಾಡುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಆರೋಪಿಯನ್ನು ಅರಣ್ಯ ಇಲಾಖೆ ಬಂಧಿಸಿದೆ.



ಭಾನುವಾರ ರಾತ್ರಿ ಸಂಪಾಜೆ ಅರಣ್ಯ ತನಿಖಾ ಠಾಣೆ ಮೂಲಕ ಸಾಗಾಟವಾಗುತ್ತಿದ್ದ ಲಾರಿಯನ್ನು ತಡೆದ ತಪಾಸಣೆ ನಡೆಸಿದಾಗ ಅಕ್ರಮ ಮರ ಸಾಗಾಟ ಪ್ರಕರಣ ಬಯಲಾಗಿದೆ. ಅಧಿಕಾರಿಗಳ ತಂಡ ಆರೋಪಿ ಮಂಗಳೂರು ತಾಲೂಕಿನ ಮಂಜನಾಡಿ ಗ್ರಾಮದ ನಿವಾಸಿ ಮಹಮ್ಮದ್ ಸಫ್ವಾನ್ (26) ನನ್ನು ಬಂಧಿಸಿದೆ. ಲಾರಿ ಮತ್ತು ಹೆಬ್ಬಲಸು ಮರದ 12 ನಾಟಗಳನ್ನು ವಶಕ್ಕೆ ಪಡೆಯಲಾಗಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ತನಿಖೆ ಕೈಗೊಳ್ಳಲಾಗಿದೆ.

ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪೂವಯ್ಯ.ಎ.ಟಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಮೊಯಿಷಿನ್ ಬಾಷಾ ಹಾಗೂ ವಲಯ ಅರಣ್ಯಾಧಿಕಾರಿ ಅನನ್ಯಕುಮಾರ್ ಮಾರ್ಗದರ್ಶನದಲ್ಲಿ ತನಿಖಾ ಠಾಣೆಯಲ್ಲಿ ಕಾರ್ಯನಿರತರಾಗಿದ್ದ ಉಪ ವಲಯ ಅರಣ್ಯಾಧಿಕಾರಿ ಬಸವರಾಜಪ್ಪ ಅವರು ಪ್ರಕರಣ ಪತ್ತೆ ಹಚ್ಚಿದರು. ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯಾಧಿಕಾರಿ ವಿನಯಕೃಷ್ಣ ಎಂ.ಸಿ, ಗಸ್ತು ಅರಣ್ಯಪಾಲಕರಾದ ನಾಗರಾಜ್ ಎಸ್, ಕಾರ್ತಿಕ್ ಡಿ., ವಾಹನ ಚಾಲಕರಾದ ಶಿವಪ್ರಸಾದ್, ಮನೋಜ್ ಮತ್ತಿತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಕೂಡುಮಂಗಳೂರು ಗ್ರಾಮ ಪಂಚಾಯತಿ ಆಯವ್ಯಯ ಮಂಡನೆ



ಕುಶಾಲನಗರ, ಮಾ.6– ಸಮೀಪದ ಕೂಡುಮಂಗಳೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ಇಂದಿರಾ ರಮೇಶ್ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಮಾಸಿಕ ಸಭೆ ನಡೆಯಿತು.

ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಂತೋಷ್ 2023–24ನೇ ಸಾಲಿನ ಆಯವ್ಯಯವನ್ನು ಮಂಡಿಸಿ ಅನುಮೋದನೆ ಪಡೆದರು. ಬೇಸಿಗೆ ಕಾಲ ಆರಂಭವಾಗಿದ್ದು, ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಸದಸ್ಯರು ಸಲಹೆ ನೀಡಿದರು.

ಜಲ್‌ಜೀವನ್ ಮಿಷನ್ ಯೋಜನೆ ವರ್ಷ ಕಳೆದರೂ ಪೂರ್ಣಗೊಂಡಿಲ್ಲ. ಆದಷ್ಟೂ ಬೇಗ ಕಾಮಗಾರಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸದಸ್ಯ ಕೆ.ಬಿ.ಶಂಶುದ್ಧೀನ್ ಒತ್ತಾಯಿಸಿದರು.

ಸಂತೆ ಸುಂಕ ಎತ್ತುವಳಿ ಹಕ್ಕಿಗಾಗಿ ಟೆಂಡರ್ ಕರೆಯಲು ದಿನಾಂಕ ನಿಗದಿ ಮಾಡುವ ಬಗ್ಗೆ ಚರ್ಚೆ ನಡೆಯಿತು. ವಿಧಾನಸಭಾ ಚುನಾವಣಾ ಹಿನ್ನಲೆ ನೀತಿ ಸಂಹಿತೆ ಜಾರಿಯಾಗುವ ಕಾರಣದಿಂದ ಇದೇ ಮಾರ್ಚ್ 16ರಂದು ಗುರುವಾರ ಟೆಂಡರ್ ಕರೆಯಲು ತೀರ್ಮಾನ ಕೈಗೊಳ್ಳಲಾಯಿತು. ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆ ಕೋಳಿ, ಆಡು, ಮೀನು ಮಾಂಸದ ಮಳಿಗೆಗೆ ನೇರವಾಗಿ ಪರವಾನಗಿ ನೀಡಲಾಗುವುದು. ಪರವಾನಗಿ ಪಡೆಯಲು ಮಿತಿಯಿರುವುದಿಲ್ಲ ಎಂದು ಪಿಡಿಓ ಸಂತೋಷ್ ಸಭೆಗೆ ಮಾಹಿತಿ ನೀಡಿದರು.

ಪಂಚಾಯಿತಿ ವ್ಯಾಪ್ತಿಯಲ್ಲಿ ವಾರ್ಡ್ ಸ್ವಚ್ಛತೆ ಕಾರ್ಯ ಸಮರ್ಪಕವಾಗಿ ಆಗುತ್ತಿಲ್ಲ. ಇದನ್ನು ಹಲವು ಸಭೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಈ ಬಗ್ಗೆ ಸಬೂಬು ಹೇಳದೇ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಸದಸ್ಯರು ಒತ್ತಾಯಿಸಿದರು.

ಶೇ.25ರ ಅನುದಾನದಲ್ಲಿ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ನೀಡಲಾಗುವುದು. ಹಾಗೆಯೇ ಶೇ.25 ಅನುದಾನದಲ್ಲಿ ಸೋಲಾರ್ ವಿದ್ಯುತ್ ದೀಪವನ್ನು ಅಳವಡಿಸಲಾಗುವುದು. ಆದ್ದರಿಂದ ಸದಸ್ಯರು ಫಲಾನುಭವಿಗಳ ಮಾಹಿತಿ ನೀಡುವಂತೆ ಪಿಡಿಓ ತಿಳಿಸಿದರು.

ಈ ಸಂದರ್ಭ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಭಾಸ್ಕರ್ ನಾಯಕ್, ಸದಸ್ಯರು, ಸಿಬ್ಬಂದಿಗಳು ಇದ್ದರು.

ಇಂದು ಕೊಳ್ಳೇಗಾಲ ತಾಲೂಕು ಕಚೇರಿಗೆ ಡಿಸಿ ಭೇಟಿ

ಚಾಮರಾಜನಗರ, ಮಾ.6– ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಮಾ.7 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಕೊಳ್ಳೇಗಾಲ ತಾಲೂಕು ಕಚೇರಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸುವರು ಹಾಗೂ ತಾಲೂಕು ಕಚೇರಿಯ ಪರಿಶೀಲನೆ ನಡೆಸುವರು ಎಂದು ಜಿಲ್ಲಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.

ತಾಯಿ, ಮಗು ನಾಪತ್ತೆ




ಚಾಮರಾಜನಗರ, ಮಾ.6– ಜಾಲಹಳ್ಳಿ ಹುಂಡಿ ಗ್ರಾಮದ ನಿವಾಸಿಯಾದ ಮಹದೇವಮ್ಮ (35) ಮತ್ತು ಅವರ ಮಗ ಕಾರ್ತಿಕ್ (5) ನಾಪತ್ತೆಯಾಗಿರುವ ಬಗ್ಗೆ ವರದಿಯಾಗಿದೆ. ಇವರ ಸುಳಿವು ದೊರೆತಲ್ಲಿ ಚಾ.ನಗರ ಜಿಲ್ಲಾ ಎಸ್ಪಿ ದೂ.: 08226–222243, ಪೊಲೀಸ್ ಕಂಟ್ರೋಲ್ ರೂಂ.: 08226–222383, ಮಹಿಳಾ ಠಾಣೆ: 08226–222048 ಸಂಪರ್ಕಿಸುವಂತೆ ಮಹಿಳಾ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ತಿಳಿಸಿದ್ದಾರೆ.

ಗ್ಯಾಸ್ ದರ ಹೆಚ್ಚಳ ಖಂಡಿಸಿ ಮಹಿಳಾ ಕಾಂಗ್ರೆಸ್ ಪ್ರತಿಭಟನೆ



ಚಾಮರಾಜನಗರ, ಮಾ.6– ಗ್ಯಾಸ್ ದರ ಹೆಚ್ಚಳ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಜಿಲ್ಲಾ ಮಹಿಳಾ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿ ಕಾಂಗ್ರೆಸ್ ಮಹಿಳಾ ಘಟಕ ರಾಜ್ಯಾಧ್ಯಕ್ಷೆ ಪುಷ್ಪ ಅಮರನಾಥ್, ಜಿಲ್ಲಾಧ್ಯಕ್ಷೆ ಲತಾ ರಾಜಶೇಖರ ಜತ್ತಿ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ತಲೆ ಮೇಲೆ ಖಾಲಿ ಸಿಲಿಂಡರ್ ಹೊತ್ತು, ಕೇಂದ್ರ ಸರ್ಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂತರ ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ಪುಷ್ಪ ಅಮರನಾಥ್ ಮಾತನಾಡಿ, ಗ್ಯಾಸ್ ದರ, ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಬಿಜೆಪಿ ಸರ್ಕಾರ ಭ್ರಷ್ಟ, ದುಷ್ಟ, ರಾಕ್ಷಸ ಸರ್ಕಾರವಾಗಿದೆ. ಕೂಡಲೇ ಗ್ಯಾಸ್ ದರ, ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಇಳಿಸಬೇಕು ಎಂದು ಆಗ್ರಹಿಸಿದರು. ಬಿಜೆಪಿ ಸರ್ಕಾರ 40 ಪರ್ಸೆಂಟ್ ಅಲ್ಲ 60 ಪರ್ಸೆಂಟ್ ಕಮಿಷನ್ ಸರ್ಕಾರವಾಗಿದ್ದು, ಬಡವರ, ಮಧ್ಯಮ ವರ್ಗದವರ ವಿರೋಧಿಯಾಗಿದೆ. ಇವರಿಗೆ 2023 ಚುನಾವಣೆಯಲ್ಲಿ ತಕ್ಕಪಾಠ ಕಲಿಸಿ, ಮನೆಗೆ ಕಳುಹಿಸಬೇಕು. ಬಿಜೆಪಿ ಅಧಿಕಾರಕ್ಕೆ ಬರುವ ಮುನ್ನ ಗ್ಯಾಸ್ 200 ರೂ. ಕೊಡುತ್ತೇನೆ ಎಂದಿದ್ದರು. 30, 40 ರೂ. ಪೆಟ್ರೋಲ್, ಡೀಸೆಲ್ ಕೊಡುತ್ತೇನೆ ಎಂದಿದ್ದರು ಕೊಟ್ಟಿದ್ದಾರಾ? ಎಲ್ಲರ ಮೇಲೆ ತೆರಿಗೆ ಹಾಕೊಂಡು ಜೀವ ತಿನ್ನುತ್ತಿದ್ದಾರೆ ಎಂದು ಖಾರವಾಗಿ ಪ್ರಶ್ನಿಸಿದರು.

ಬಿಜೆಪಿ ಮೋರ್ಚಾದ ಮಹಿಳಾ ಮಣಿಗಳೇ, ನಾಯಕಿಯರೇ ಶಶಿಕಲಾ ಅಕ್ಕ, ಜೊಲ್ಲೇ ಅಕ್ಕಾ, ತಾರಾ ಅಕ್ಕ, ನಿರ್ಮಲ ಸೀತಾರಾಮನ್, ಸ್ಮೃತಿ ಇರಾನಿ ಇತರ ಮಹಿಳೆ ನಾಯಕಿಯರು ಕಳೆದುಹೋಗಿದ್ದೀರಾ? ನೀವು ಅಧಿಕಾರದಲ್ಲಿರಲು ನಾಲಾಯಕ್, ನೀವು ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು ಎಂದು ಆಗ್ರಹಿಸಿದರು.

ಪೊಲೀಸ್– ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ

ಮಾತಿನ ಚಕಮಕಿ: ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿಯವರ ಪ್ರತಿಕೃತಿ ದಹಿಸಲು ಪ್ರತಿಭಟನಾಕಾರರು ಮುಂದಾದಾಗ ಪೊಲೀಸರು ಪ್ರತಿಕೃತಿ ಕಿತ್ತುಕೊಂಡರು. ಪ್ರತಿಭಟನೆಗೆ ಮಾತ್ರ ಅವಕಾಶ ಕೊಡಲಾಗಿದೆ. ಪ್ರತಿಕೃತಿ ದಹಿಸಲು ಅನುಮತಿ ತೆಗೆದುಕೊಂಡಿಲ್ಲ. ಪ್ರತಿಕೃತಿ ದಹಿಸಲು ಬಿಡುವುದಿಲ್ಲ ಎಂದು ಪೊಲೀಸರು ಹೇಳಿದಾಗ ಕುಪಿತಗೊಂಡ ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಪೊಲೀಸರಿಂದ ಪ್ರತಿಕೃತಿ ಕಿತ್ತುಕೊಂಡು ಇದು ನಮ್ಮದು. ಪ್ರತಿಕೃತಿ ದಹಿಸಬಾರದು ಎಂದು ಏನು ಆದೇಶ ನಿಮ್ಮಲ್ಲಿ ಇದೆ ಕೊಡಿ ಎಂದು ಕೇಳಿದರು. ಪ್ರತಿಕೃತಿ ದಹಿಸಲು ಅವಕಾಶ ಕೊಡುವುದಿಲ್ಲ ಎಂದು ಪೊಲೀಸರು ಹೇಳಿದಾಗ ಪ್ರತಿಭಟನಾಕಾರರು, ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು.

ಪ್ರತಿಭಟನೆಯಲ್ಲಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನಾಗರತ್ನ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನಾ), ಪದ್ಮಾ ಪುರುಷೋತ್ತಮ್, ಮಹಿಳಾ ಬ್ಲಾಕ್ ಅಧ್ಯಕ್ಷರಾದ ಶಕುಂತಲಾ, ಭಾಗ್ಯಮ್ಮ, ನಗರಸಭಾ ಸದಸ್ಯರಾದ ಚಿನ್ನಮ್ಮ, ನೀಲಮ್ಮ, ಭಾಗ್ಯಮ್ಮ, ಕಲಾವತಿ ಭಾಗವಹಿಸಿದ್ದರು.

ವೈ.ಕೆ.ಮೋಳೆಯಲ್ಲಿ ಭಕ್ತಿಭಾವದ ಕೊಂಡೋತ್ಸವ




ಯಳಂದೂರು, ಮಾ.6– ತಾಲೂಕಿನ ವೈ.ಕೆ.ಮೋಳೆ ಗ್ರಾಮದಲ್ಲಿ ಶ್ರೀದೊಡ್ಡಮ್ಮ ತಾಯಿ, ಶ್ರೀಚಿಕ್ಕಮ್ಮತಾಯಿ ಶ್ರೀಚಾಮುಂಡೇಶ್ವರಿ, ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ಸೋಮವಾರ ನಡೆಯಿತು. ಕೊಂಡೋತ್ಸವ ಹಿನ್ನೆಲೆಯಲ್ಲಿ ಮುಂಜಾನೆಯಿಂದಲೇ ದೇವಾಲಯದಲ್ಲಿ ಗ್ರಾಮ ದೇವತೆ ದೊಡ್ಡಮ್ಮತಾಯಿಗೆ ವಿಶೇಷ ಹೂವಿನ ಅಲಂಕಾರ, ಗಿರಿಜನರಿಂದ ವಿಶೇಷ ಪೂಜೆ ನಡೆಸಲಾಯಿತು. ನಂತರ ಗ್ರಾಮದ ಉಪ್ಪಾರ ಬೀದಿಯಲ್ಲಿರುವ ದೊಡ್ಡಮ್ಮತಾಯಿ, ಚಿಕ್ಕಮ್ಮ ತಾಯಿ, ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ತಾಲೂಕಿನ ಅಂಬಳೆಕೆರೆಯಲ್ಲಿ ಪೂಜೆ ಸಲ್ಲಿಸಿದ ಬಳಿಕ ನೀರು ತಂದು ಉತ್ಸವ ಮೂರ್ತಿಯನ್ನು ಸ್ವಚ್ಛಗೊಳಿಸಿದರು. ನಂತರ ಸತ್ತಿಗೆ, ಸೂರಪಾನಿ, ಚಾಮರಗಳಿಗೆ ಹೂವು ಹೊಂಬಾಳೆಯಿಂದ ಸಿಂಗರಿಸಿದರು. ಕೊಂಬು, ಕಹಳೆ ವಾದ್ಯ ಮೇಳಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿತು. ನಂತರ ಕೊಂಡೋತ್ಸವ ಸ್ಥಳಕ್ಕೆ (ದೇವಾಲಯದ ಆವರಣದಲ್ಲಿ) ಉತ್ಸವ ಮೂರ್ತಿ ಆಗಮಿಸುತ್ತಿದ್ದಂತೆ ಭಕ್ತರ ಹರ್ಷೋದ್ಗಾರ ಮೊಳಗಿತು. ದೊಡ್ಡಮ್ಮ ತಾಯಿ, ಚಿಕ್ಕಮ್ಮತಾಯಿಯ ಸತ್ತಿಗೆ ಹೊತ್ತು ಹಾಗೂ ಚಾಮುಂಡೇಶ್ವರಿ ಉತ್ಸವ ಮೂರ್ತಿ ಹೊತ್ತ ಅರ್ಚಕರು ಕೊಂಡೋತ್ಸವ ಹಾದು ಭಕ್ತಿ ಪರಕಾಷ್ಠೆ ಮೆರೆದರು.

ಗುಂಡ್ಲುಪೇಟೆ ಪತ್ರಕರ್ತರ ಭವನಕ್ಕೆ ಭೂಮಿಪೂಜೆ



ಗುಂಡ್ಲುಪೇಟೆ, ಮಾ.6– ಪತ್ರಕರ್ತರಿಗೆ ಅವರದೇ ಆದ ಸ್ಥಾನಮಾನಗಳಿದ್ದು, ಅವುಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಲು ಪ್ರಯತ್ನಿಸಬೇಕು. ಸಮಾಜವನ್ನು ಸರಿದಾರಿಯಲ್ಲಿ ಕರೆದುಕೊಂಡು ಹೋಗುವಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ ಎಂದು ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಹೇಳಿದರು.

ಪಟ್ಟಣದಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪತ್ರಕರ್ತರ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ವರದಿ ವಿಚಾರದಲ್ಲಿ ರಾಜಕಾರಣಿಗಳಾದ ನಾವು ಪರ, ವಿರೋಧದ ಮಾತುಗಳನ್ನಾಡಬಹುದು. ಆದರೆ ನೀವು ಮಾಡುವ ವರದಿಗಳಲ್ಲಿ ವಾಸ್ತವತೆ ಇರಲಿ ಎಂದು ಸಲಹೆ ನೀಡಿದರು. ತಾಲೂಕಿನಲ್ಲಿ ವಾಸ್ತವಿಕ ವರದಿಗಳು ಪ್ರಕಟ ಆಗುತ್ತಿವೆ. ವರದಿಗಳಿಗೆ ಫಲಶೃತಿ ಸಿಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ವಿಧಾನಪರಿಷತ್ ಸದಸ್ಯರು, ಎಂ.ಪಿ ಯವರಿಂದ ಅನುದಾನ ಕೊಡಿಸಲಾಗುತ್ತದೆ. ಎಲ್ಲವನ್ನೂ ಕ್ರೋಢೀಕರಿಸಿ ಕಾಮಗಾರಿ ಪೂರ್ಣ ಮಾಡೋಣ. ನಾನು ಲಭ್ಯತೆ ಆಧಾರದಲ್ಲಿ 20 ಲಕ್ಷ ವರೆಗೆ ಅನುದಾನ ನೀಡಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು.

ಕಾಂಗ್ರೆಸ್ ಯುವ ಮುಖಂಡ ಹೆಚ್.ಎಂ.ಗಣೇಶ್‌ಪ್ರಸಾದ್ ಮಾತನಾಡಿ, ತಾಲೂಕಿನಲ್ಲಿ ಪತ್ರಕರ್ತರಿಗೆ ಒಂದು ನೆಲೆ ಬೇಕು ಎಂಬುದು ಬಹುದಿನದ ಬೇಡಿಕೆಯಾಗಿತ್ತು. ಈಗ ಭವನ ನಿರ್ಮಾಣ ಕಾರ್ಯಕ್ಕೆ ಭೂಮಿಪೂಜೆ ಮಾಡುವ ಮೂಲಕ ಈಡೇರುವ ಹಂತಕ್ಕೆ ಬಂದಿದೆ. ನಾನು ಭವನ ನಿರ್ಮಾಣಕ್ಕೆ ವೈಯಕ್ತಿಕ ನೆರವು ನೀಡುತ್ತೇನೆ ಎಂದು ಭರವಸೆ ನೀಡಿದರು.

ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಎಂ.ಪಿ.ಸುನೀಲ್, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಉಪಾಧ್ಯಕ್ಷೆ ದೀಪಿಕಾ ಅಶ್ವಿನ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ದೇವರಾಜು ಕಪ್ಪಸೋಗೆ, ತಾಲೂಕು ಅಧ್ಯಕ್ಷ ರಂಗೂಪುರ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಮಡಹಳ್ಳಿ ಮಹೇಶ್, ಉಪಾಧ್ಯಕ್ಷ ಸೋಮಶೇಖರ್, ಖಜಾಂಚಿ ಮಲ್ಲೇಶ್, ಕಾರ್ಯದರ್ಶಿ ರಾಜೇಶ್‌ಭಟ್ಟ, ನಿರ್ದೇಶಕರಾದ ಹೆಚ್.ಆರ್.ರಾಜಗೋಪಾಲ್, ಹಂಗಳ ಬಸವರಾಜು, ಹೆಚ್.ಆರ್.ಕೃಷ್ಣಗೋಪಾಲ್, ಮನು ಶ್ಯಾನುಭೋಗ್, ಬೇಗೂರು ನಾಗೇಶ್, ಬೇಗೂರು ಶೇಖರ್, ಬೇಗೂರು ಮಣಿಕಂಠ, ಜನಾರ್ಧನ್, ವಿಶ್ವನಾಥ್ ಭಾರಧ್ವಾಜ್, ಕಂದೇಗಾಲ ಮಹದೇವ ಪ್ರಸಾದ್, ಯಡಹುಂಡಿ ಪ್ರಸಾದ್, ಮೇಲುಕಾಮನಹಳ್ಳಿ ಹರೀಶ್, ಹಂಗಳ ನಂಜಪ್ಪ ಅಬ್ದುಲ್ ರಶೀದ್, ಮಂಜುನಾಥ್, ಕಣ್ಣೇಗಾಲ ಸದಾನಂದ ಹಾಜರಿದ್ದರು.

ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ಇಂದು ಕಾಂಗ್ರೆಸ್ ಸೇರ್ಪಡೆ

ಬಿಜೆಪಿ ಪ್ರಾಥಮಿಕ ಸದಸ್ಯತ್ವ, ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ



ನಾನು ಕಾಂಗ್ರೆಸ್‌ಗೆ ಯಾವುದೇ ಷರತ್ತು ಇಲ್ಲದೇ ಸೇರುತ್ತಿದ್ದೇನೆ. ಶಾಸಕ ಎನ್. ಮಹೇಶ್ ನನಗೆ ಕಾಂಪಿಟೇಟರ್ ಅಲ್ಲ. ಮಹೇಶ್ ನಿನ್ನೆ, ಮೊನ್ನೆ ರಾಜಕಾರಣಕ್ಕೆ ಬಂದಿರೋದು. ನಾನು ಕಳೆದ 30 ವರ್ಷದಿಂದಲೂ ರಾಜಕಾರಣದಲ್ಲಿದ್ದೇನೆ. ನನಗೆ ರಾಜಕೀಯ ಹಿನ್ನೆಲೆ ಇದೆ. ಪೂರಕ ವಾತಾವರಣ ಇಲ್ಲದ ಕಾರಣ ಪಕ್ಷ ಬಿಡುತ್ತಿದ್ದೇನೆ. ಕಾಂಗ್ರೆಸ್‌ನ ಎಲ್ಲರೂ ನನ್ನನ್ನು ಸ್ವಾಗತಿಸುತ್ತಿದ್ದಾರೆ. –ಜಿ.ಎನ್. ನಂಜುಂಡಸ್ವಾಮಿ, ಮಾಜಿ ಶಾಸಕರು.

ಚಾಮರಾಜನಗರ, ಮಾ.6– ಬಿಜೆಪಿಯಲ್ಲಿನ ಉಸಿರುಗಟ್ಟುವ ವಾತಾವರಣದಿಂದ ಬೇಸತ್ತು ಪಕ್ಷ ತೊರೆದು ಕಾಂಗ್ರೆಸ್ ಸೇರ್ಪಡೆಯಾಗುತ್ತಿದ್ದೇನೆ ಎಂದು ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸ್ವತಃ ವಿಷಯ ತಿಳಿಸಿದ ನಂಜುಂಡಸ್ವಾಮಿ ಅವರು, ನಾಳೆ(ಮಾ.7) ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗುತ್ತಿದ್ದೇನೆ ಎಂದು ಮಾಹಿತಿ ನೀಡಿದರು. 2008ರಿಂದ ಇಲ್ಲಿಯವರೆಗೆ 15 ವರ್ಷಗಳ ಕಾಲ ನಾನು ಬಿಜೆಪಿಯಲ್ಲಿ ಇದ್ದೆ. ಆದರೆ, ಪ್ರಸ್ತುತ ಪಕ್ಷದಲ್ಲಿ ನನ್ನ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವಂತಹ ವಾತಾವರಣ ಸೃಷ್ಟಿಯಾಗಿದೆ. ಹೀಗಾಗಿ, ಪಕ್ಷದಲ್ಲಿ ಇರುವುದು ಸೂಕ್ತವಲ್ಲವೆಂದು ತೀರ್ಮಾನಿಸಿ ಬಿಜೆಪಿಯ ಪ್ರಾಥಮಿಕ ಸದಸ್ಯತ್ವ ಹಾಗೂ ರಾಜ್ಯ ಎಸ್‌ಸಿ ಮೋರ್ಚಾದ ಉಪಾಧ್ಯಕ್ಷ ಸ್ಥಾನಕ್ಕೆ ಪಕ್ಷದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರಿಗೆ ರಾಜೀನಾಮೆ ಕಳುಹಿಸಿದ್ದೇನೆ ಎಂದು ತಿಳಿಸಿದರು.

ಕೊಳ್ಳೇಗಾಲದಲ್ಲಿ ಇತ್ತೀಚೆಗೆ ನಡೆದ ಬಿಜೆಪಿ ಸಮಾವೇಶದ ಬಗ್ಗೆ ಸರಿಯಾದ ಮಾಹಿತಿಯನ್ನು ನನಗೆ ಯಾರೂ ನೀಡಲಿಲ್ಲ. ನಾನು ಸಮಾವೇಶಕ್ಕೆ ಗೈರಾದಾಗಲೂ ಪಕ್ಷದ ಯಾರೊಬ್ಬರು ನನ್ನನ್ನು ಸಂಪರ್ಕಿಸಲಿಲ್ಲ. ಅಲ್ಲದೇ ಇತ್ತೀಚೆಗೆ ಪಕ್ಷದಲ್ಲಿನ ಬಿಗುವಿನ ವಾತಾವರಣದಿಂದ ನಾನು ಮರಳಿ ಮನೆಗೆ ಎಂಬಂತೆ ಮತ್ತೊಮ್ಮೆ ಕಾಂಗ್ರೆಸ್ ಸೇರ್ಪಡೆಯಾಗುತ್ತಿದ್ದೇನೆ ಎಂದರು. ಕಾಂಗ್ರೆಸ್‌ನ ಮೂವರು ಮಾಜಿ ಶಾಸಕರು ನನ್ನನ್ನು ಪಕ್ಷಕ್ಕೆ ಆಹ್ವಾನಿಸಿದ್ದಾರೆ. ಹೀಗಾಗಿ ನಾನು ಪಕ್ಷ ಸೇರ್ಪಡೆಯಾಗಿ ನಾವು ನಾಲ್ವರು ಮಾಜಿ ಶಾಸಕರು ಮುಂದಿನ ದಿನಗಳಲ್ಲಿ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸುತ್ತೇವೆ ಎಂದರು. ಕೊಳ್ಳೇಗಾಲದಲ್ಲಿ ಮಾ.18ರಿಂದ 20ರೊಳಗೆ ಬೃಹತ್ ಸಮಾವೇಶ ನಡೆಸುವ ಮೂಲಕ ಶಕ್ತಿ ಪ್ರದರ್ಶನ ಮಾಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮಾದೇಶ್, ಮಹೇಶ್, ಕೃಷ್ಣ, ರೇವಣ್ಣ, ಜಯಣ್ಣ, ಪುಟ್ಟಣ್ಣ ಹಾಜರಿದ್ದರು.



ಗುಂಡ್ಲುಪೇಟೆ ನ್ಯಾಯಾಲಯಕ್ಕೆ ಭಾನುವಾರ ಸಂಜೆ ಆಗಮಿಸಿದ್ದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ಪ್ರಸನ್ನ ಬಿ. ವರಾಳೆ, ಹೈಕೋರ್ಟ್ ಹಿರಿಯ ನ್ಯಾಯಮೂರ್ತಿಗಳಾದ ಕೆ.ಸೋಮಶೇಖರ್, ಚಾಮರಾಜನಗರ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿ ಶಿವಶಂಕರ್ ಅಮರಣ್ಣನವರ್, ರಿಜಿಸ್ಟ್ರಾರ್ ಜನರಲ್ ಕೆ.ಎಸ್.ಭರತ್ ಕುಮಾರ್ ಅವರನ್ನು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್. ಭಾರತಿ, ಜಿಲ್ಲಾಧಿಕಾರಿ ರಮೇಶ್, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಎಸ್. ಮಂಜು, ಪ್ರಧಾನ ಕಾರ್ಯದರ್ಶಿ ಎನ್.ಕೆ. ವಿರೂಪಾಕ್ಷಸ್ವಾಮಿ, ಜಂಟಿ ಕಾರ್ಯದರ್ಶಿ ಮಲ್ಲು ಉಪಸ್ಥಿತರಿದ್ದರು.

ಮೈಸೂರು ಮಿತ್ರ
ಮಂಗಳವಾರ 7 ಮಾರ್ಚ್ 2023

ಒಂದರನೇ ಪುಟದಿಂದ

ಬೇಸಿಗೆಯಲ್ಲಿ ಕುಡಿಯುವ ನೀರಿನ ಚಿಂತೆ ಬೇಡ

ನೀರು ಪೂರೈಸಲಾಗುವುದು.ಪ್ರಸ್ತುತ ಅಣೆಕಟ್ಟೆಯಲ್ಲಿ 28.44 ಟಿಎಂಸಿ ಅಡಿ ನೀರು ಸಂಗ್ರಹ ಇರುವುದರಿಂದ ಮೈಸೂರು, ಮಂಡ್ಯ, ಬೆಂಗಳೂರು ನಗರಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡಬಹುದಾಗಿದ್ದು, ಈ ಬಾರಿ ಭಾರೀ ಪ್ರಮಾಣದ ಮಳೆಯಾಗಿದ್ದರಿಂದ ವರ್ಷದ ಬಹುತೇಕ ದಿನಗಳಲ್ಲಿ ಒಳಹರಿವು ಹೆಚ್ಚಾಗಿತ್ತು. ಹಾಗಾಗಿ ಕೆಆರ್‌ಎಸ್ ಜಲಾಶಯ ಹಲವು ತಿಂಗಳ ಕಾಲ ಭರ್ತಿಯಾಗಿಯೇ ಇತ್ತು.

2022ರ ಮಾರ್ಚ್ 6 ರಂದು ಅಣೆಕಟ್ಟೆಯಲ್ಲಿ 112 ಅಡಿ ನೀರು ಸಂಗ್ರಹವಿತ್ತು. ಇಂದು 104.66 ಅಡಿ ನೀರಿದೆ. 90 ಅಡಿಗಿಂತ ಕಡಿಮೆ ಇದ್ದರೆ ಮಾತ್ರ ಕುಡಿಯುವ ನೀರಿನ ಬಗ್ಗೆ ಚಿಂತಿಸಬೇಕಾದ ಪ್ರಮೇಯ ಉದ್ಭವಿಸುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಬೇಸಿಗೆ ಕಾಲಕ್ಕೆ ಆತಂಕ ಪಡಬೇಕಾಗಿಲ್ಲ ಎಂದು ಕಾವೇರಿ ನೀರಾವರಿ ನಿಗಮದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಬು ಫಾರೂಕ್ ಸಹ ತಿಳಿಸಿದ್ದಾರೆ.

ಅತ್ಯಾಧುನಿಕ ಸಂಗೀತ ಕಾರಂಜಿ

ಕಂಪನಿಗೆ ಕಾಮಗಾರಿ ಒಪ್ಪಿಸಲಾಗಿದೆ ಎಂದು ಕಾವೇರಿ ನೀರಾವರಿ ನಿಗಮದ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಅಬು ಫಾರುಖ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಈ ಹಿಂದೆ ಇದ್ದ ಹಳೆಯ ಕಾರಂಜಿ ತೆರವುಗೊಳಿಸಲಾಗಿದೆ. ಹೊಸ ಕಾರಂಜಿ ನಿರ್ಮಿಸಲು ವಿಶೇಷ ನಕ್ಷೆಯೊಂದಿಗೆ ಕಾಮಗಾರಿ ಆರಂಭಿಸಲಾಗಿದೆ. ದೇಶದಲ್ಲೇ ಅತ್ಯಂತ ನವೀನ ಮಾದರಿಯ ಕಾರಂಜಿ ನಿರ್ಮಾಣವಾಗುತ್ತಿದೆ ಎಂದರು. ಇದು ದೇಶ-ವಿದೇಶದ ಪ್ರವಾಸಿಗರ ಆಕರ್ಷಿಸಲಿದೆ. ಕಾಮಗಾರಿ ಭರದಿಂದ ಸಾಗಿದ್ದು, 2023ರ ಏಪ್ರಿಲ್ ಅಂತ್ಯದೊಳಗೆ ಪೂರ್ಣಗೊಳಿಸಿ, ಮೇ ಮೊದಲ ವಾರದಿಂದ ಪ್ರವಾಸಿಗರ ವೀಕ್ಷಣೆಗೆ ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ ಎಂದು ನುಡಿದರು.

ಅಪಾಯಕಾರಿಯಲ್ಲ

ಬಿ 10 ಹಾಗೂ ಅಡೆನೋವೈರಸ್ 60 ಪ್ರಕರಣಗಳು ದೃಢಪಟ್ಟಿವೆ ಎಂದು ವಿವರಿಸಿದರು.

ಸೋಂಕಿಗೆ ಒಳಗಾದ ಯಾರೂ ವೈಯಕ್ತಿಕ ಚಿಕಿತ್ಸೆ ಪಡೆದುಕೊಳ್ಳಬಾರದು. ಅನಗತ್ಯ ಆಂಟಿಬಯೋಟಿಕ್ ಪಡೆದುಕೊಳ್ಳುವುದು ಸರಿಯಲ್ಲ. ರೋಗಕ್ಕೆ ಸಂಬಂಧಿಸಿದ ಔಷಧ ಕೊಡಲಾಗುತ್ತಿದೆ. ಔಷಧೀಯ ಕೊರತೆ ಇಲ್ಲ ಎಂದರು. ಬೇಸಿಗೆಯ ತಾಪಮಾನ ಏರಿಕೆ ಆಗಿದೆ. ಬಿಸಿಗಾಳಿಗೆ ಸಾಕಷ್ಟು ಜನರು ತೊಂದರೆಗೆ ಒಳಗಾಗುತ್ತಿದ್ದಾರೆ.

ಬೆಳಗ್ಗೆ 11 ರಿಂದ 3 ಗಂಟೆಯವರೆಗೆ ಬಿಸಿಲಿನ ಓಡಾಟ ಕಡಿಮೆ ಮಾಡಿ. ಹೆಚ್ಚು ನೀರನ್ನು ಪ್ರತಿನಿತ್ಯ ಕುಡಿಯಬೇಕು. ಜತೆಗೆ ಮಜ್ಜಿಗೆ, ಶರಬತ್ ಹೆಚ್ಚಾಗಿ ಸೇವಿಸಬೇಕು ಎಂದರು. ಕೋವಿಡ್ ಬಂದವರಿಗೆ ಹೆಚ್3ಎನ್2 ವೈರಸ್‌ನಿಂದ ಸ್ವಲ್ಪ ದೀರ್ಘಕಾಲದ ಕೆಮ್ಮು ಇರುತ್ತದೆ. ಈ ರೋಗ ಪತ್ತೆಗಾಗಿ ಹೆಚ್ಚು ದರ ಪಡೆಯಲಾಗುತ್ತಿದೆ. ಇದನ್ನು ನಿಯಂತ್ರಣ ಮಾಡಲು ಸಮಿತಿ ರಚನೆ ಮಾಡುತ್ತೇವೆ. ಸಮಿತಿ ವರದಿಯ ಬಳಿಕ ಜನರಿಗೆ ಹೊರೆಯಾಗದಂತೆ ಕಡಿಮೆ ದರ ನಿಗದಿ ಮಾಡಲಾಗುತ್ತದೆ ಎಂದು ತಿಳಿಸಿದರು.

ತಲಕಾವೇರಿ ಪ್ರಸಾದ

ಭಾರತದ ಒಳಗಿನ ಯಾವುದೇ ಪ್ರದೇಶಕ್ಕೆ ಸ್ಪೀಡ್ ಪೋಸ್ಟ್ ಮೂಲಕ ಪ್ರಸಾದವನ್ನು ತಲುಪಿಸಲಾಗುತ್ತದೆ. 4 ರಿಂದ 5 ದಿನಗಳ ಒಳಗೆ ಪ್ರಸಾದ ಪಡೆಯಲು ಇಚ್ಚಿಸಿದವರ ಮನೆ ಬಾಗಿಲಿಗೆ ಪ್ರಸಾದ ತಲುಪಲಿದೆ ಎಂದು ವಿವರಿಸಿದರು.

ಹೊರ ದೇಶಗಳಿಂದ ಬೇಡಿಕೆ ಬಂದಲ್ಲಿ ಅದನ್ನು ಪೂರೈಸಲು ಸಾಧ್ಯವಾಗುವುದಿಲ್ಲ. ತಲಕಾವೇರಿ ಕ್ಷೇತ್ರಕ್ಕೆ ಭೇಟಿ ನೀಡಲು ಸಾಧ್ಯವಾಗದವರು, ದೂರದ ಊರುಗಳಲ್ಲಿ ನೆಲೆಸಿರುವವರು ಈ ವಿನೂತನ ಯೋಜನೆಯ ಮೂಲಕ ಕಾವೇರಿಯ ಪ್ರಸಾದವನ್ನು ತರಿಸಿಕೊಳ್ಳಬಹುದಾಗಿದೆ ಎಂದು ರಮೇಶ್ ಬಾಬು ಹೇಳಿದರು. ಪ್ರಸಾದ ಸೇವೆಯ ಉದ್ಘಾಟನೆಯ ಸಂದರ್ಭ ಶ್ರೀ ಭಾಗಮಂಡಲ ತಲಕಾವೇರಿ ದೇವಾಲಯ ವ್ಯವಸ್ಥಾಪನಾ ಸಮಿತಿ ಆಡಳಿತಾಧಿಕಾರಿ ಹಾಗೂ ಎ.ಡಿ.ಸಿ ಡಾ.ನಂಜುಂಡೇಗೌಡ, ಕಾರ್ಯನಿರ್ವಹಣಾಧಿಕಾರಿ ಎಂ.ಎಸ್. ದೊರೆ, ಶ್ರೀ ತಲಕಾವೇರಿ ದೇವಾಲಯದ ಪಾರುಪತ್ತೆಗಾರ ಕೆ.ಟಿ.ಪೊನ್ನಣ್ಣ ಹಾಗೂ ಅಂಚೆ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.

ಫಲಾನುಭವಿಗಳ ಸಮ್ಮೇಳನ: ಸಿಎಂ ಉದ್ಘಾಟನೆ

ಮಾಹಿತಿ ಮಳಿಗೆಗಳನ್ನು ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ವಿವಿಧ ಇಲಾಖೆಗಳ ಸಚಿವರು ಜೊತೆಗೂಡಿ ಉದ್ಘಾಟಿಸಲಿದ್ದು, ಕಾರ್ಯಕ್ರಮದಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಜಿಲ್ಲೆಯಾದ್ಯಂತ ಅಂದಾಜು 53 ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ಸಮ್ಮೇಳನಕ್ಕೆ ಆಗಮಿಸುತಿದ್ದು, ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ತಾಲೂಕು, ಹೋಬಳಿ ಹಾಗೂ ಪ್ರಮುಖ ಗ್ರಾಮಗಳಿಂದಲೂ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ 27 ಸಾವಿರ ಫಲಾನುಭವಿಗಳು, ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ 10 ಸಾವಿರ ಫಲಾನುಭವಿಗಳು, ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 5 ಸಾವಿರ ಫಲಾನುಭವಿಗಳು, ಆರೋಗ್ಯ ಇಲಾಖೆ ವ್ಯಾಪ್ತಿಯಲ್ಲಿ 4 ಸಾವಿರ ಫಲಾನುಭವಿಗಳು, ಶೂನ್ಯ ಬಡ್ಡಿ ದರದಲ್ಲಿ ಸಾಲ ಪಡೆದಿರುವ 3 ಸಾವಿರ ರೈತ ಫಲಾನುಭವಿಗಳನ್ನು ಸಹಕಾರ ಇಲಾಖೆಯ ವತಿಯಿಂದ ಕರೆತರಲಾಗುವುದು. ಒಟ್ಟಾರೆಯಾಗಿ 53 ಸಾವಿರ ಫಲಾನುಭವಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸ್ಲಂ ಬೋರ್ಡ್ ವತಿಯಿಂದ 277 ಮನೆಗಳನ್ನು ನಿರ್ಮಿಸಿದ್ದು ಫಲಾನುಭವಿಗಳಿಗೆ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳಿಂದ ಹಕ್ಕು ಪತ್ರಗಳನ್ನು ವಿತರಣೆ ಮಾಡಲಿದ್ದಾರೆ.

'ಕೈ' ಭ್ರಷ್ಟಾಚಾರ

ಯಾವ ಪ್ರತಿಕ್ರಿಯೆಯೂ ಜನರಿಂದ ದೊರೆಯುವುದಿಲ್ಲ ಎಂದರು. ಆಪಾದನೆ ಮಾಡುವವರು ಮೊದಲು ಶುದ್ಧ ಹಸ್ತರಿರಬೇಕು. ಆಗ ಬೆಲೆ ಸಿಗುತ್ತದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಎಲ್ಲಾ ಮಂತ್ರಿಗಳಿಗೆ ಗುರಿ ನೀಡಿದ್ದರು. ಎಂ.ಬಿ.ಪಾಟೀಲ್, ಕೆ.ಜೆ. ಜಾರ್ಜ್, ಮಹದೇವಪ್ಪ ಅವರಿಗೆ ಎಷ್ಟು ಗುರಿ ನೀಡಿದ್ದರು ಎಂಬುದರ ಬಗ್ಗೆ ಕೇಳಬೇಕು ಎಂದು ಹೇಳಿದರು. ಕೈ ಸಂಪೂರ್ಣವಾಗಿ ಭ್ರಷ್ಟಾಚಾರದಿಂದ ಕೂಡಿದ್ದು, ಇಂತಹ ಆಟ ನಡೆಯೋಲ್ಲ. ಮೇ ನಲ್ಲಿ ನಡೆಯುವ ಚುನಾವಣಾ ಅಖಾಡದಲ್ಲಿ ಜನ ತೀರ್ಮಾನ ಮಾಡುತ್ತಾರೆ ಎಂದರು. ಬೆಳಗಾವಿಯಲ್ಲಿ ಶಿವಾಜಿ ಪ್ರತಿಮೆ ಮರು ಉದ್ಘಾಟನೆ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ 50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದರು. ಓಣಪ್ರತಿಷ್ಠೆಗೆ ಈ ಕೆಲಸ ಮಾಡಿದ್ದಾರೆ. ರಾಷ್ಟ್ರ ನಾಯಕರ ಹೆಸರಿನಲ್ಲಿ ರಾಜಕೀಯ ಮಾಡುವುದು ಸರಿಯಲ್ಲ ಎಂದರು. ಕುಕ್ಕರ್ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯ ಬಂಧನವಾಗಿದ್ದು, ಐ.ಎಸ್.ಐ.ಎಸ್ ಸಂಘಟನೆ ಹೊಣೆ ಹೊತ್ತುಕೊಂಡಿದೆ. ಈ ಬಗ್ಗೆ ಡಿ.ಕೆ.ಶಿವಕುಮಾರ್ ಅದೊಂದು ಸಾದಾ ಬಾಂಬ್ ಎಂದಿದ್ದರು. ಈಗ ಏನು ಹೇಳುತ್ತಾರೆ ಎಂದು ಮುಖ್ಯಮಂತ್ರಿ ಮರು ಪ್ರಶ್ನಿಸಿದರು.

ಮಾ.9ರಂದು ಹೆದ್ದಾರಿ ಪರಿಶೀಲಿಸ್ತೇನೆ...

ಸಚಿವರಾಗಿದ್ದರು. ನಾವಿಬ್ಬರೇ ಆಸ್ಕರ್ ಫರ್ನಾಂಡಿಸ್ ಅವರನ್ನು ಭೇಟಿಯಾಗಿ ದಶಪಥ ರಸ್ತೆಯಾಗಿ ಮಾರ್ಪಡಿಸಲು ಅನುಮತಿ ನೀಡುವಂತೆ ಮನವಿ ಮಾಡಿ ದ್ದೆವು. ಅದನ್ನು ಪುರಸ್ಕರಿಸಿ, ಅನುಮತಿ ನೀಡಿದ್ದರು. ಇದು ನಮ್ಮ ಸರ್ಕಾರದಲ್ಲಿ ಜಾರಿಗೆ ತಂದ ಯೋಜನೆಯಾಗಿದೆ ಎಂದು ಪುನರುಚ್ಚರಿಸಿದರು. ದಶಪಥ ಹೆದ್ದಾರಿ ಯೋಜನೆಯಲ್ಲಿ ಸಂಸದ ಪ್ರತಾಪ ಸಿಂಹನ ಪಾತ್ರ ಎಳ್ಳಷ್ಟು ಇಲ್ಲ. ಸಿದ್ದಲಿಂಗಪುರದವರೆಗೆ ಮಾತ್ರ ಪ್ರತಾಪ ಸಿಂಹ ಪ್ರತಿನಿಧಿಸುವ ಕ್ಷೇತ್ರ, ಉಳಿದದ್ದು ಮಂಡ್ಯ, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರುತ್ತದೆ. ಆದರೂ, ಪ್ರತಾಪ ಸಿಂಹ ಸುಳ್ಳು ಹೇಳಿಕೊಂಡು ನನ್ನದೇ ಸಾಧನೆಯೆಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಮಾ.9ರಂದು ಮೈಸೂರು - ಬೆಂಗಳೂರು ದಶಪಥ ಹೆದ್ದಾರಿಯನ್ನು ಪರಿಶೀಲನೆ ನಡೆಸುತ್ತೇನೆ ಎಂದರು.

ವಿರೂಪಾಕ್ಷಪ್ಪನ ಸರ್ಕಾರವೇ ರಕ್ಷಿಸುತ್ತಿದೆ

ಪ್ರಕರಣವನ್ನು ಬಿಜೆಪಿ ಸರ್ಕಾರವೇ ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೆಎಸ್‌ಡಿಎಲ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಲು ಬಂದಾಗಲೇ ಮಾಡಾಳ್ ವಿರೂಪಾಕ್ಷಪ್ಪನನ್ನು ಯಾಕೆ ಬಂಧಿಸಲಿಲ್ಲ. ಆತ ಎಲ್ಲಿದ್ದಾನೆ ಎಂದು ಸರ್ಕಾರಕ್ಕೆ ಗೊತ್ತಿದೆ. ತನ್ನ ಮನೆಯಲ್ಲೇ ಓಡಾಡಿಕೊಂಡಿದ್ದರೂ ಪೊಲೀಸರು ಬಂಧಿಸಲು ಸಾಧ್ಯವಾಗಿಲ್ಲ. ಕೇವಲ ನಾಟಕ ಮಾಡುತ್ತಿದ್ದಾರೆ. ಲುಕ್‌ಔಟ್ ನೋಟಿಸ್ ಹೆಸರಿನಲ್ಲಿ ಜನರ ಗಮನ ಬೇರೆಡೆ ಸೆಳೆಯುತ್ತಿದ್ದಾರೆ ಎಂದು ಟೀಕಿಸಿದರು.

ಭ್ರಷ್ಟಾಚಾರದ ಆರೋಪಗಳು ಕೇಳಿ ಬಂದಾಗಲೆಲ್ಲಾ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಾಕ್ಷಿ ಕೇಳುತ್ತಿದ್ದರು. ಈಗ ಅವರದ್ದೇ ಪಕ್ಷದವರು ರೆಡ್‌ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದಾರೆ. ಅವರ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದಾರೆ. ಇಷ್ಟೆಲ್ಲಾ ಆದರೂ ನಮಗೆ ಮುಜುಗರವಿಲ್ಲ ಎನ್ನುತ್ತಿದ್ದಾರೆ. ಈ ಪ್ರಕರಣದಲ್ಲಿ ಬಿಜೆಪಿಯವರಿಗೆ ಮುಜುಗರ ಆಗಿದೆ. ಅಪ್ಪ ಅಧ್ಯಕ್ಷ ಎಂಬ ಕಾರಣದಿಂದಲೇ ಮಗನಿಗೆ ಲಂಚ ಕೊಡಲು ಬಂದಿರುವುದು. ಹೀಗಾಗಿ ಅಪ್ಪನೇ (ಮಾಡಾಳ್ ವಿರೂಪಾಕ್ಷಪ್ಪ) ಮೊದಲ ಆರೋಪಿ. ಅವನನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಸಾಬೀತು ಪಡಿಸಿದರೆ ಇಂದೇ ರಾಜೀನಾಮೆ: ನಾನು ಲೋಕಾಯುಕ್ತ ಬಂದ್ ಮಾಡಿರಲಿಲ್ಲ. ಒಂದು ವೇಳೆ ಲೋಕಾಯುಕ್ತವನ್ನು ಬಂದ್ ಮಾಡಿರುವುದನ್ನು ಸಾಬೀತುಪಡಿಸಿದರೆ ತಕ್ಷಣ ರಾಜೀನಾಮೆ ಕೊಡುತ್ತೇನೆ. ನಾವು ಭ್ರಷ್ಟಾಚಾರ ನಿಗ್ರಹ(ಎಸಿಬಿ) ರಚನೆ ಮಾಡಿದ್ದೆವು. ಆದರೂ ಲೋಕಾಯುಕ್ತದ ಯಾವ ಅಧಿಕಾರವನ್ನೂ ಕಿತ್ತುಕೊಂಡಿರಲಿಲ್ಲ. ನಮ್ಮ ಕಾಲದಲ್ಲೂ ಲೋಕಾಯುಕ್ತ ಇತ್ತು. ಎಲ್ಲ ಸತ್ಯ ಗೊತ್ತಿದ್ದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಮ್ಮ ಬಗ್ಗೆ ಸುಳ್ಳು ಹೇಳುತ್ತಿದ್ದಾರೆ ಎಂದು ಕಿಡಿಕಾರಿದರು.

2018ರ ಚುನಾವಣೆಯಲ್ಲಿ ಬಿಜೆಪಿ ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ ನಂತರ ಎಸಿಬಿ ರದ್ದು ಮಾಡುತ್ತೇವೆ ಎಂದು ಹೇಳಿತ್ತು. ಆದರೆ ಮಾಡಲಿಲ್ಲ. ಎಸಿಬಿ ರದ್ದು ಮಾಡಿದ್ದು ನ್ಯಾಯಾಲಯವೇ ಹೊರತು ಬಿಜೆಪಿಯಲ್ಲ. ಆ ಪಕ್ಷದವರಿಗೆ ಸುಳ್ಳು ಹೇಳುವುದು ಚಟ, ಸುಳ್ಳೇ ಬಿಜೆಪಿ ಮನೆ ದೇವರು. ಹೀಗಾಗಿ ಲೋಕಾಯುಕ್ತ ವಿಚಾರದಲ್ಲೂ ಸುಳ್ಳು ಹೇಳಿಕೊಂಡು ತಿರುಗುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ಕಾರ್ಖಾನೆಗಳಲ್ಲಿ ಸುರಕ್ಷತೆಗೆ ಆದ್ಯತೆ ನೀಡಲು ಡಿಸಿ ಸಲಹೆ

● ಕಾರ್ಮಿಕರಿಗೆ ರಕ್ಷಣಾ ಸಲಕರಣೆ ಕಡ್ಡಾಯಗೊಳಿಸಬೇಕು ● ಸಣ್ಣಪುಟ್ಟ ನಿರ್ಲಕ್ಷ್ಯವೂ ಭಾರೀ ಅನಾಹುತಕ್ಕೆ ಕಾರಣವಾಗಬಹುದು; ಎಚ್ಚರಿಕೆ ಪಾಠ



ಮೈಸೂರು,ಮಾ.6(ಎಂಟಿವೈ)- ಮೈಸೂರು ಜಿಲ್ಲೆಯಲ್ಲಿ ಇರುವ ಕಾರ್ಖಾನೆಗಳಲ್ಲಿ ಯಾವುದೇ ಸಣ್ಣ ಅವಘಡಗಳೂ ಸಂಭವಿಸದಂತೆ ಕಟ್ಟೆಚ್ಚರ ವಹಿಸುವುದರೊಂದಿಗೆ ಕಾರ್ಮಿಕರೂ ರಕ್ಷಣಾ ಸಲಕರಣೆಗಳ ಧರಿಸುವ ಮೂಲಕ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಹಾಗೂ ನಂಜನಗೂಡು ಇಂಡಸ್ಟ್ರೀಸ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಸೋಮವಾರ ನಡೆದ 52ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಬಾರಿ ರಾಷ್ಟ್ರೀಯ ಸುರಕ್ಷತಾ ದಿನಾಚರಣೆಯನ್ನು 'ನಮ್ಮ ಗುರಿ - ಶೂನ್ಯ ಹಾನಿ' ಧ್ಯೇಯದೊಂದಿಗೆ ಆಚರಿಸಲಾಗುತ್ತಿದೆ. ಜಿಲ್ಲೆಯಲ್ಲಿರುವ ಎಲ್ಲಾ ಕೈಗಾರಿಕೆಗಳಲ್ಲೂ ಸುರಕ್ಷತೆಗೆ ಆದ್ಯತೆ ನೀಡಬೇಕು. ಸಣ್ಣಪುಟ್ಟ ಅವಘಡ ಸಂಭವಿಸದಂತೆ ಕಟ್ಟೆಚ್ಚರ ವಹಿಸಬೇಕು. ಕೈಗಾರಿಕಾ ಆಡಳಿತ ಮಂಡಳಿ ಕೈಗೊಳ್ಳುವ ಕ್ರಮದೊಂದಿಗೆ ಪ್ರತಿಯೊಬ್ಬ ಸಿಬ್ಬಂದಿಯ ಸುರಕ್ಷತೆಗೂ ಆದ್ಯತೆ ನೀಡಬೇಕು. ಸುರಕ್ಷತಾ ಸಲಕರಣೆಗಳನ್ನು ಕಡ್ಡಾಯವಾಗಿ ಬಳಸಬೇಕು ಎಂದು ಸಲಹೆ ನೀಡಿದರು.

ಪ್ರತಿಯೊಂದು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ನೌಕರರು ಕೆಲಸದ ವೇಳೆ ಯಾವುದೇ ಕಾರಣಕ್ಕೂ ಮೈಮರೆಯಬಾರದು. ಸುರಕ್ಷತಾ ಸಲಕರಣೆ ಬಳಸುವುದರಲ್ಲಿ ನಿರ್ಲಕ್ಷ್ಯ ಅಥವಾ ಅಸಡ್ಡೆ ಮಾಡಬಾರದು. ಯಾಕೆಂದರೆ ಪ್ರತಿಯೊಬ್ಬ ಸಿಬ್ಬಂದಿಯ ಮನೆಯಲ್ಲೂ ತಮಗಾಗಿ ಕಾಯುತ್ತಿರುವವರು, ಅವಲಂಬಿತರು ಇರುತ್ತಾರೆ. ಸಣ್ಣಪುಟ್ಟ ನಿರ್ಲಕ್ಷ್ಯವು ಗಂಭೀರ ಸಮಸ್ಯೆಯನ್ನು ತಂದೊಡ್ಡಬಹುದು. ಇಂತಹ ಸಮಸ್ಯೆ ನೌಕರರ ಮನೆ ಮಾತ್ರವಲ್ಲದೆ, ಕೆಲಸ ಮಾಡುವ ಸಂಸ್ಥೆಯ ಉತ್ಪಾದನೆಯ ಮೇಲೂ ಪರಿಣಾಮ ಬೀರಬಹುದು. ಈ ಹಿನ್ನೆಲೆಯಲ್ಲಿ ಸುರಕ್ಷೆ, ಭದ್ರತೆಗೆ ಗಮನ ಹರಿಸಬೇಕು ಎಂದರು.

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ನಿರ್ದೇಶಕ ಕೆ.ಶ್ರೀನಿವಾಸ್ ಮಾತನಾಡಿ, ಕಳೆದ ಹಲವು ವರ್ಷಗಳಿಂದ ರಾಷ್ಟ್ರೀಯ ಸುರಕ್ಷತಾ ದಿನಾಚರಣೆಯನ್ನು ಆಯೋಜಿಸುತ್ತಾ ಬಂದಿದ್ದೇವೆ. ಕಾರ್ಖಾನೆಗಳಲ್ಲಿ ಯಾವುದೇ ಅವಘಡ ಸಂಭವಿಸುವುದನ್ನು ತಡೆಗಟ್ಟುವುದಕ್ಕಾಗಿ ಜಾಗೃತಿ ಮೂಡಿಸಲು ಈ ಕಾರ್ಯಕ್ರಮ ನಿರಂತರವಾಗಿ ನಡೆಸಲಾಗುತ್ತಿದೆ. ಕೆಲವು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮ ಸ್ಥಗಿತಗೊಂಡಿದ್ದರೆ, ಮೈಸೂರು ಜಿಲ್ಲೆಯಲ್ಲಿ ನಂಜನಗೂಡು ಕೈಗಾರಿಕಾ ಸಂಘವು ಪ್ರತಿ ವರ್ಷವೂ ಕಾರ್ಯಕ್ರಮ ನಡೆಸುತ್ತಾ ಬಂದಿದೆ. ಯಾವುದೇ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೌಕರರ ಹಿತಕಾಯುವುದಕ್ಕೆ ನಮ್ಮ ಇಲಾಖೆ ಬದ್ಧವಾಗಿದೆ. ಆದರೆ, ಸುರಕ್ಷತೆಯಲ್ಲಿ, ಭದ್ರತೆಯಲ್ಲಿ ಸಣ್ಣ ಲೋಪವನ್ನೂ ಸಹಿಸುವುದಿಲ್ಲ. ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಹ್ಯಾಂಡ್ ಗ್ಲೌಸ್, ಗಮ್‌ಬೂಟ್, ಮಾಸ್ಕ್ ಧರಿಸಬೇಕಾದ ಸಂದರ್ಭದಲ್ಲಿ ನೌಕರರು ನಿಯಮವನ್ನು ಪಾಲಿಸಬೇಕು. ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನವನ್ನು ಸಹಿಸುವುದಿಲ್ಲ ಎಂದು ಖಡಕ್ ಎಚ್ಚರಿಕೆ ನೀಡಿದರು.

'ಶೂನ್ಯ ಹಾನಿ' ಗುರಿಯೊಂದಿಗೆ ಸುರಕ್ಷಾ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಶೂನ್ಯ ಹಾನಿ ಎಂಬುದನ್ನು ಕೈಗಾರಿಕಾ ಆಡಳಿತ ಮಂಡಳಿ ಹಾಗೂ ನೌಕರರು ಅರ್ಥ ಮಾಡಿಕೊಳ್ಳಬೇಕು. ಆಕಸ್ಮಿಕ ಅಥವಾ ಮಾನವ ನಿರ್ಲಕ್ಷಿತ ಅವಘಡ ತಡೆಗಟ್ಟಲು ಪರಸ್ಪರ ಸಹಕಾರ ನೀಡಬೇಕು. ಇದರೊಂದಿಗೆ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯೂ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದೆ. ಕೈಗಾರಿಕೆಗಳಲ್ಲಿ ಸುರಕ್ಷತೆಯ ಬಗ್ಗೆ ಕಾಲಕಾಲಕ್ಕೆ ಅರಿವು ಮೂಡಿಸುವುದರೊಂದಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಮನವರಿಕೆ ಮಾಡಿಕೊಡಲಾಗುತ್ತಿದೆ ಇದರೊಂದಿಗೆ ಐಟಿಐ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಸುರಕ್ಷತಾ ಕ್ರಮದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಅಂತಿಮ ವರ್ಷದ ವಿದ್ಯಾರ್ಥಿಗಳು ಕೋರ್ಸ್ ಮುಗಿದ ಬಳಿಕ ಕೈಗಾರಿಕೆಗಳಿಗೆ ಸೇರುವುದರಿಂದ ಈ ಅರಿವು ಮಹತ್ವದ ಪಾತ್ರ ಪಡೆದುಕೊಂಡಿದೆ. ರಾಜ್ಯದಲ್ಲಿ 250ಕ್ಕೂ ಐಟಿಐ ಕಾಲೇಜುಗಳಲ್ಲಿ ಸುರಕ್ಷತಾ ಜಾಗೃತಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಆ ಮೂಲಕ ನೀವು ಜಾಗೃತರಾಗಿರಿ, ನಿಮ್ಮ ಸುತ್ತಮುತ್ತಲಿನವರನ್ನೂ ಜಾಗೃತರಾಗಿಸಿ ಎಂಬ ಸಂದೇಶ ಸಾರಲಾಗುತ್ತಿದೆ ಎಂದು ವಿವರಿಸಿದರು.

ಮೆರವಣಿಗೆ: 52ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆಯ ಜಾಗೃತಿ ಜಾಥಾ ಆಯೋಜಿಸಲಾಗಿತ್ತು. ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು. ದೇವರಾಜ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಜೈಕೀರ್ತಿ ಜಾಥಾಕ್ಕೆ ಚಾಲನೆ ನೀಡಿದರು. ಡಿ.ದೇವರಾಜ ಅರಸ್ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು. ಜಾಥಾದಲ್ಲಿ ವಿವಿಧ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ನೌಕರರು, ಭದ್ರತಾ ಸಿಬ್ಬಂದಿಗಳು, ಭದ್ರತಾ ಅಧಿಕಾರಿಗಳು ಹಾಗೂ ವಿವಿಧ ಶಾಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಎಟಿ ಅಂಡ್ ಎಸ್ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಗುಂಡಪಿ, ಎಜಿಸ್ಟೋನಿ ಸಂಸ್ಥೆಯ ಶಶಿ ರಂಜನ್, ಎಐಟಿಯುಸಿ ಅಧ್ಯಕ್ಷ ಹೆಚ್.ಆರ್.ಶೇಷಾದ್ರಿ, ನಂಜನಗೂಡು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಎಂ.ಎಸ್.ರಾಮಪ್ರಸಾದ್, ಡಾ.ಎನ್.ಮುತ್ತುಕುಮಾರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಸುರಕ್ಷತಾ ಸಲಕರಣೆಗಳ ಪ್ರದರ್ಶನ

ಕಾರ್ಯಕ್ರಮದ ಅಂಗವಾಗಿ ಕಲಾಮಂದಿರದ ಆವರಣದಲ್ಲಿ ಕೈಗಾರಿಕೆಗಳಲ್ಲಿ ನೌಕರರು ಬಳಸುವ ಸುರಕ್ಷತಾ ಸಲಕರಣೆಗಳ ಪ್ರದರ್ಶನ ಏರ್ಪಡಿಸಲಾಗಿತ್ತು. 6 ಮಳಿಗೆಗಳಲ್ಲಿ ಹೆಲ್ಮೆಟ್, ಗ್ಲೌಸ್, ಗಮ್ ಬೂಟ್, ಮಾಸ್ಕ್ ಆಕ್ಸಿಜನ್ ಮಾಸ್ಕ್ ಬೆಂಕಿ ನಂದಿಸುವ ಫೈರ್ ಬಾಕ್ಸ್ ಸುರಕ್ಷತಾ ಬೆಲ್ಟ್ ಸೇರಿದಂತೆ ಇನ್ನಿತರ ವಸ್ತು ಹಾಗೂ ಉಪಕರಣಗಳನ್ನು ಪ್ರದರ್ಶಿಸಲಾಗಿತ್ತು

ಮೈಸೂರು ಜಿಲ್ಲೆಯಲ್ಲಿ ಮತದಾನ ಜಾಗೃತಿ ಅಭಿಯಾನ ಆರಂಭಿಸಲು ಜಿಲ್ಲಾಧಿಕಾರಿ ಸೂಚನೆ



ಮೈಸೂರು,ಮಾ.6(ಎಂಟಿವೈ)- ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿರುವ ಎಲ್ಲಾ ಕೈಗಾರಿಕೆಗಳಲ್ಲೂ ಮತದಾನದ ಜಾಗೃತಿ ಮೂಡಿಸುವ ಅಭಿಯಾನ ಆರಂಭಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸೂಚಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಸೋಮವಾರ ನಡೆದ 52ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಧಾನಸಭಾ ಚುನಾವಣೆ ಸಮೀಪಿಸುತ್ತಿದೆ. ಜಿಲ್ಲೆಯಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಜಿಲ್ಲಾಡಳಿತ ಹಲವು ಕ್ರಮ ಕೈಗೊಂಡಿದೆ. ಈ ಹಿಂದೆ ನಡೆದಿರುವ ಚುನಾವಣೆಗಳನ್ನು ಗಮನಿಸಿದರೆ, ನಗರ ಪ್ರದೇಶದಲ್ಲಿ ಮತದಾನದ ಪ್ರಮಾಣ ಕಡಿಮೆ ಇರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ನಗರ ಪ್ರದೇಶವೂ ಸೇರಿದಂತೆ ಜಿಲ್ಲೆಯಲ್ಲಿ ಹೆಚ್ಚಿನ ಮತದಾನ ನಡೆಯುವಂತೆ ಕ್ರಮ ಕೈಗೊಳ್ಳಲಾಗಿದೆ. ಇದಕ್ಕೆ ಸಂಘ-ಸಂಸ್ಥೆಗಳು ಮಾತ್ರವಲ್ಲದೆ, ಸಾರ್ವಜನಿಕರ ಸಹಕಾರವೂ ಅಗತ್ಯ ಎಂದರು.

ಮೈಸೂರು ಜಿಲ್ಲೆಯಲ್ಲಿರುವ ಎಲ್ಲಾ ಕೈಗಾರಿಕೆ, ಕಾರ್ಖಾನೆಗಳಲ್ಲಿ ಮತದಾನ ಜಾಗೃತಿ ಬಗ್ಗೆ ನೌಕರರಿಗೆ ಅರಿವು ಮೂಡಿಸಬೇಕು. ಹಾಗೆಯೇ ದೇಶದ ಪ್ರಜಾಪ್ರಭುತ್ವದ ಭದ್ರತೆಗೂ ಕ್ರಮ ಕೈಗೊಳ್ಳಬೇಕು. ಕೈಗಾರಿಕೆ ಮತ್ತು ಕಾರ್ಮಿಕ ಇಲಾಖೆ ಜಿಲ್ಲೆಯಲ್ಲಿರುವ ಕೈಗಾರಿಕೆಗಳಲ್ಲಿ ಮತದಾನದ ಅರಿವು ಮೂಡಿಸುವ ಕೌಂಟರ್ ತೆರೆಯಲು ಕ್ರಮ ಕೈಗೊಳ್ಳಬೇಕು. ಆಯಾಯ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ನೌಕರರ ಕುಟುಂಬದಲ್ಲಿರುವ ಮತದಾರರ ಸಂಖ್ಯೆ, ಯಾವ ಮತಗಟ್ಟೆಯಲ್ಲಿ ಮತದಾನ ಮಾಡಬೇಕು, ಅಲ್ಲಿನ ಮತಗಟ್ಟೆ ಅಧಿಕಾರಿ ಹೆಸರು, ಆ ಅಧಿಕಾರಿಯನ್ನು ಭೇಟಿ ಮಾಡಿ ಮತದಾರರ ಪಟ್ಟಿಯಲ್ಲಿ ಹೆಸರು ಇರುವಿಕೆ ಖಚಿತಪಡಿಸಿಕೊಂಡಿದ್ದಾರಾ, ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ ಫಾರಂ-6 ಪಡೆದು ನಮ್ಮ ಕಚೇರಿಗೆ ತಲುಪಿಸಿದರೆ, 3-4 ದಿನದೊಳಗೆ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ನಿರಾಸಕ್ತಿ ಬೇಡ: ನಗರ ಪ್ರದೇಶದಲ್ಲಿ ಮತದಾನದ ಪ್ರಮಾಣ ಕಡಿಮೆಯಾಗಲು ಕೆಲವರಲ್ಲಿರುವ ನಿರಾಸಕ್ತಿಯೇ ಕಾರಣ ಎಂದು ತಿಳಿದುಬಂದಿದೆ. ಬೇರೆ ಬೇರೆ ಸ್ಥಳದಿಂದ ನಗರಕ್ಕೆ ವಿವಿಧ ಕೆಲಸ, ವೃತ್ತಿಗಾಗಿ ಬಂದು ನೆಲೆಸಿರುವ ಜನರು ಮತದಾನ ಪ್ರಕ್ರಿಯೆಯಿಂದ ದೂರವುಳಿಯುತ್ತಿದ್ದಾರೆ. ಅವರಿಗೆ ಮತದಾನ ಮಾಡುವುದಕ್ಕೆ ಆಸಕ್ತಿ ಇರುವುದಿಲ್ಲ. ಆದರೆ, ಈ ಬಾರಿ ಹೆಚ್ಚು ಜನರು ಮತದಾನ ಮಾಡಿ, ಪ್ರಜಾಪ್ರಭುತ್ವವನ್ನು ಗೌರವಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದ ವಿಜಯ ಸಂಕಲ್ಪ ಯಾತ್ರೆಯಲ್ಲಿ ನಗರಪಾಲಿಕೆ ಸದಸ್ಯ ಎಂ.ಸತೀಶ್ ನೇತೃತ್ವದಲ್ಲಿ ಸಾವಿರಾರು ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಈ ಯಾತ್ರೆಯಲ್ಲಿ ಸಚಿವ ಕೋಟಾ ಶ್ರೀನಿವಾಸ್ ಪೂಜಾರಿ, ಸಂಸದರಾದ ರಾಘವೇಂದ್ರ ಯಡಿಯೂರಪ್ಪ, ಪ್ರತಾಪ್ ಸಿಂಹ, ಮುಖಂಡರಾದ ಶ್ರೀವತ್ಸ, ಭಾನುಪ್ರಕಾಶ್, ಸ್ವಾಮಿ, ರೇಣು, ನಾಣಿಗೌಡ, ಬ್ರಹ್ಮಾಚಾರ್ ಹಾಗೂ ಇನ್ನಿತರರು ಭಾಗವಹಿಸಿದ್ದರು.



ಮೈಸೂರು ಮಹಾಜನ ಪದವಿ ಪೂರ್ವ ಕಾಲೇಜು ನೂತನ ಪ್ರಿನ್ಸಿಪಾಲ್ ವಿಷಕಂಠ ಮೂರ್ತಿ ಅವರನ್ನು ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರು ಅಭಿನಂದಿಸಿದರು. ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಯೋಗೀಶ್, ಮಂಚೇಗೌಡನಕೊಪ್ಪಲು ರವಿ(ಡೆಲ್ಲಿ ರವಿ), ಪಡುವಾರಹಳ್ಳಿ ಪಾಪಣ್ಣ, ರಮೇಶ್, ಕೃಷ್ಣ, ಕಾಂತರಾಜ್, ರಾಜಣ್ಣ, ಮಹಿ ಉಪಸ್ಥಿತರಿದ್ದಾರೆ.

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಕಾನೂನಿನಲ್ಲಿ ಅವಕಾಶವಿಲ್ಲ

ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ



ಮೈಸೂರು,ಮಾ.6(ಪಿಎಂ)- ಪಂಚಮಸಾಲಿ ಸಮುದಾಯಕ್ಕೆ '2ಎ' ಮೀಸಲಾತಿ ಕಲ್ಪಿಸಬೇಕೆಂದು ಕೂಡಲಸಂಗಮ ಪೀಠದ ಜಯಮೃತ್ಯುಂಜಯ ಸ್ವಾಮೀಜಿ ಹೋರಾಟಕ್ಕಿಳಿದಿರುವುದು ಈ ನೆಲದ ಕಾನೂನಿಗೆ ಮಾಡಿದ ಅಪಚಾರ ಎಂದು ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ಅಸಮಾಧಾನ ವ್ಯಕ್ತಪಡಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರವರ್ಗ 2ಎಗೆ ಪಂಚಮಸಾಲಿ ಸಮುದಾಯ ಸೇರಿಸಲು ಬರುವುದಿಲ್ಲವೆಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಬೆಳಗಾವಿ ಅಧಿವೇಶನದಲ್ಲಿ ಮುಖ್ಯಮಂತ್ರಿಗಳಿಗೆ ವರದಿ ನೀಡಿದೆ. ಅಲ್ಲದೆ, ಒಕ್ಕಲಿಗ ಸಮುದಾಯಕ್ಕೆ '2ಸಿ' ಮತ್ತು ಪಂಚಮಸಾಲಿ ಸಮುದಾಯಕ್ಕೆ '2ಡಿ' ಪ್ರವರ್ಗಗಳನ್ನು ಸೃಷ್ಟಿಸಿ ಪ್ರತ್ಯೇಕ ಮೀಸಲಾತಿ ನೀಡಬಹುದುದೆಂದು ಸಲಹೆ ನೀಡಿದೆ. ಇದಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದ್ದರೂ ಹೋರಾಟ ಮುಂದುವರೆಸಿರುವುದು ಸರಿಯಲ್ಲ ಎಂದು ಹೇಳಿದರು.

ಕೆಲ ಸಚಿವರು ಮತ್ತು ಮಠಾಧೀಶರು ತಮ್ಮ ಜನಾಂಗದ ಪರ ಮೀಸಲಾತಿಗಾಗಿ ಬೇಡಿಕೆ ಮುಂದಿಟ್ಟಿರುವುದು ಸಾಮಾಜಿಕ ನ್ಯಾಯಕ್ಕೆ ಕೊಡಲಿ ಪೆಟ್ಟು ಬಿದ್ದಂತೆ. ಹೋರಾಟದ ಮೂಲಕ ಅಮಾಯಕ ಭಕ್ತರನ್ನು ಪ್ರಚೋದಿಸಲಾಗುತ್ತಿದೆ. ಇದರ ವಿರುದ್ಧ ಸರ್ಕಾರ ಸೂಕ್ತ ಕ್ರಮ ವಹಿಸಬೇಕು. ಇಲ್ಲವಾದರೆ 2ಎಗೆ ಸೇರಿರುವ 102 ಕಾಯಕ ಸಮಾಜಗಳು ಹೋರಾಟಕ್ಕಿಳಿಯುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದರು. ಮಾ.11ರಂದು ಬೆಂಗಳೂರಿನಲ್ಲಿ ಒಕ್ಕೂಟದ ಕಾರ್ಯಕಾರಿಣಿ ಸಭೆ ನಡೆಸಿ, ನಮ್ಮ ಸಂಘಟನೆಯ ಮುಂದಿನ ಹೋರಾಟಗಳ ರೂಪುರೇಷೆ ನಿರ್ಧರಿಸಲಾಗುವುದು ಎಂದರು. ಮುಖಂಡರಾದ ನಂಜುಂಡಸ್ವಾಮಿ, ಕೆಂಪಶೆಟ್ಟಿ, ದಾಸಪ್ಪಶೆಟ್ಟಿ, ಸಂಪತ್ ಗೋಷ್ಠಿಯಲ್ಲಿದ್ದರು.

ರಾಜ್ಯದ 224 ಕ್ಷೇತ್ರಗಳಲ್ಲಿ ಎಐಎಂಇಪಿ ಸ್ಪರ್ಧೆ



ಮೈಸೂರು,ಮಾ.6(ಪಿಎಂ)- ಅಖಿಲ ಭಾರತ ಮಹಿಳಾ ಸಬಲೀಕರಣ ಪಕ್ಷವು (ಎಐಎಂಇಪಿ) ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ 224 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲಿದೆ ಎಂದು ಪಕ್ಷದ ರಾಜ್ಯ ಕಾರ್ಯಾಧ್ಯಕ್ಷ ಮಹಮದ್ ಇಫ್ತೀಕರ್ ಶರೀಫ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ ಡಾ.ನೌಹೇರಾ ಶೇಕ್ ಅವರ ಆದೇಶದ ಮೇರೆಗೆ 224 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಿದ್ಧತೆ ನಡೆಸಲಾಗುತ್ತಿದೆ. ಅಭ್ಯರ್ಥಿಗಳ ಆಯ್ಕೆಗೆ ಶೀಘ್ರ ಚಾಲನೆ ನೀಡಲಾಗುವುದು ಎಂದರು. ಅಲ್ಲದೆ, ಪಕ್ಷದ ಸಂಘಟನೆಗೆ ಪೂರಕವಾಗಿ ಮೈಸೂರು ಜಿಲ್ಲಾ ಕಾರ್ಯಾಧ್ಯಕ್ಷರಾಗಿ ಸಗೀರ್ ಅಹಮದ್, ಚಾಮರಾಜನಗರ ಜಿಲ್ಲಾ ಕಾರ್ಯಾಧ್ಯಕ್ಷರಾಗಿ ಸರಸ್ವತಿ ಅವರನ್ನು ನೇಮಕ ಮಾಡಲಾಗಿದೆ ಎಂದರು. ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಮುತ್ತು ಸುರಕೋಡ, ರಾಜ್ಯ ಸಂಘಟನಾ ಕಾರ್ಯದರ್ಶಿ ಪುತಬ್ಬ, ರಾಜ್ಯ ಕಾರ್ಯದರ್ಶಿ ನಜೀಯಾ ಬೇಗಂ, ಮಹಿಳಾ ವಿಭಾಗದ ರಾಜ್ಯ ಉಪಾಧ್ಯಕ್ಷೆ ಅನಿತಾ ಗೋಷ್ಠಿಯಲ್ಲಿದ್ದರು.

ಮೊಣಕಾಲಿನ ಚಿಕಿತ್ಸಾ ಶಿಬಿರ

ಮೈಸೂರು, ಮಾ. 6- ಮೈಸೂರಿನ ಲಲಿತಾದ್ರಿಪುರ ರಸ್ತೆಯ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಮಾ. 16 ರವರೆಗೆ ಮೊಣಕಾಲಿನ ಸಂಧಿವಾತಕ್ಕೆ ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9741513392, ದೂ. 0821-2548231, 2548433 ಸಂಪರ್ಕಿಸಬಹುದು.

ಸ್ವತ್ತಿಗೆ ಅಕ್ರಮ ಖಾತೆ ಆರೋಪ ; ಪ್ರತಿಭಟನೆ



ಮೈಸೂರು,ಮಾ.6(ಪಿಎಂ)- ಮೈಸೂರು ನಗರದ ದೇವರಾಜ ಮೊಹಲ್ಲಾದ ಬಿಡಾರಂ ಕೃಷ್ಣಪ್ಪ ರಸ್ತೆಯ ತಮ್ಮ 587ರ ಸ್ವತ್ತಿಗೆ ಎರಡು ಖಾತೆಗಳನ್ನು ಅಕ್ರಮವಾಗಿ ಮಾಡಲಾಗಿದೆ ಎಂದು ಆರೋಪಿಸಿ ದೇವರಾಜ ಮೊಹಲ್ಲಾದ ನಿವಾಸಿಗಳಾದ ವೆಂಕಟೇಶ್, ಸುರೇಶ್, ಕೃಷ್ಣ ಎಂಬುವರು ವಿವಿಧ ಸಂಘಟನೆಗಳ ಮುಖಂಡರೊಂದಿಗೆ ಸೋಮವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯ ಮೈಸೂರು ಮಹಾನಗರ ಪಾಲಿಕೆ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ನಿವೇಶನಕ್ಕೆ ಅಕ್ರಮವಾಗಿ ಅನ್ಯರಿಗೆ ಖಾತೆ ಮಾಡಲಾಗಿದೆ. ಕೆಲವು ಅಧಿಕಾರಿಗಳು ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ಈ ಅಕ್ರಮ ಖಾತೆಗಳನ್ನು ರದ್ದುಪಡಿಸಿ ನಮ್ಮ ಸ್ವತ್ತನ್ನು ನಮಗೆ ಅಧಿಕೃತ ಮಾಡಿಕೊಡುವ ಸಂಬಂಧ ಪಾಲಿಕೆ ವಲಯ ಕಚೇರಿ 6ರಿಂದ ಫೆ.2ರಂದು ಎಲ್ಲಾ ದಾಖಲೆಗಳನ್ನು ಪಾಲಿಕೆ ಪ್ರಧಾನ ಕಚೇರಿಗೆ ಕಳುಹಿಸಲಾಗಿದೆ. ಹೀಗಿದ್ದರೂ ಶೀಘ್ರ ಮುಂದಿನ ಕ್ರಮ ಜರುಗಿಸುತ್ತಿಲ್ಲ ಎಂದು ಆರೋಪಿಸಿದರು.

ಸರ್ಕಾರ ಅನುದಾನ ನೀಡಿದ್ದರೂ ಸಂಗೀತ ವಿವಿಯ ವಜಾಗೊಂಡ

21 ಬೋಧಕೇತರ ಸಿಬ್ಬಂದಿಗೆ ಪೂರ್ಣ ಬಾಕಿ ವೇತನ ಪಾವತಿಸಿಲ್ಲ

ಮಾಜಿ ಮೇಯರ್ ಪುರುಷೋತ್ತಮ್ ಆರೋಪ



ಮೈಸೂರು,ಮಾ.6(ಪಿಎಂ)- ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದಲ್ಲಿ ವಜಾಗೊಳಿಸಿರುವ 21 ಬೋಧಕೇತರ ಸಿಬ್ಬಂದಿಯ ಬಾಕಿ ವೇತನ ಪಾವತಿಗೆ ಸರ್ಕಾರ 87 ಲಕ್ಷ ರೂ. ಬಿಡುಗಡೆ ಮಾಡಿದ್ದರೂ ಪೂರ್ಣ ಪ್ರಮಾಣದಲ್ಲಿ ಪಾವತಿಸಿಲ್ಲ. ಬಿಡುಗಡೆಗೊಂಡ ಒಟ್ಟು ಹಣದಲ್ಲಿ ಕೇವಲ ಶೇ.40ರಷ್ಟು ಮಾತ್ರವೇ ನೌಕರರ ಖಾತೆಗೆ ಪಾವತಿಸಲಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವರ್ಷದ 15 ದಿನಗಳು ಕಳೆದರೂ ಬಾಕಿ ವೇತನ ಹಾಗೂ ಮರು ನೇಮಕಕ್ಕಾಗಿ 21 ಸಿಬ್ಬಂದಿ ಹೋರಾಟ ಮಾಡುತ್ತಿದ್ದಾರೆ. ಹೋರಾಟದ ಫಲವಾಗಿ ಸರ್ಕಾರ 87 ಲಕ್ಷ ರೂ. ಬಿಡುಗಡೆ ಮಾಡಿದೆ. ಆದರೆ ಅದರಲ್ಲಿ ಶೇ.40ರಷ್ಟು ಹಣವನ್ನು ಮಾತ್ರವೇ ನೌಕರರ ಖಾತೆಗೆ ಪಾವತಿಸಿದ್ದಾರೆ. ಉಳಿದ ಶೇ.60 ರಷ್ಟು ಹಣವನ್ನು ವಿವಿಯ ಖಾತೆಯಲ್ಲಿಯೇ ಇಟ್ಟುಕೊಂಡಿದ್ದಾರೆ. ಸರ್ಕಾರ ವೇತನದ ಹಣ ಬಿಡುಗಡೆ ಮಾಡಿದ್ದರೂ ಕುಲಪತಿಗಳು ನೀಡುತ್ತಿಲ್ಲ ಎಂದು ದೂರಿದರು.

ಹೊರಗುತ್ತಿಗೆ ನೌಕರರೆಂದು ಬಿಂಬಿಸಿ ಹಾಗೂ ಹೆಚ್ಚುವರಿ ನೌಕರರು ಎಂಬ ಕಾರಣ ನೀಡಿ ಈ 21 ಮಂದಿಯನ್ನು ವಜಾಗೊಳಿಸಲಾಗಿದೆ. ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅವರ ಅವೈಜ್ಞಾನಿಕ ನಿಲುವು ಮತ್ತು ಸ್ವಾರ್ಥದಿಂದ ದುಡಿಯುವ ಈ ವರ್ಗ ಇಂದು ಸಂಕಷ್ಟಕ್ಕೆ ಸಿಲುಕಿದೆ. ಸದರಿ ನೌಕರರ ಕುಟುಂಬಗಳ ಪರಿಸ್ಥಿತಿ ನೋಡಲಾಗದು. ತಮ್ಮನ್ನು ವಜಾಗೊಳಿಸಿರುವ ಬಗ್ಗೆ ನೌಕರರು ಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸುತ್ತಿದ್ದಾರೆ ಎಂದು ಹೇಳಿದರು.

ವಜಾಗೊಳಿಸಿರುವ ಬಗ್ಗೆ ಕುಲಪತಿಗಳು ಕೊಡುವ ಕಾರಣಗಳು ಒಂದಕ್ಕೊಂದು ತಾಳೆಯೇ ಆಗುವುದಿಲ್ಲ. ಹೆಚ್ಚುವರಿ ಎಂದು ಇವರನ್ನು ವಜಾಗೊಳಿಸಿ, ಬೇರೆಯವರನ್ನು ನೇಮಕ ಮಾಡಿಕೊಂಡಿದ್ದಾರೆ. ಇವರಿಗೆ ಸಂಗೀತದ ಜ್ಞಾನವೂ ಇಲ್ಲ. ಸಂಗೀತಕ್ಕೂ ಇವರಿಗೂ ಸಂಬಂಧವೇ ಇಲ್ಲ. ಕೂಡಲೇ ಸರ್ಕಾರ ಇವರನ್ನು ಕುಲಪತಿ ಸ್ಥಾನದಿಂದ ಬಿಡುಗಡೆಗೊಳಿಸಿ, ಸದರಿ 21 ಬೋಧಕೇತರ ಸಿಬ್ಬಂದಿಯನ್ನು ಮರು ನೇಮಕ ಮಾಡಿಕೊಳ್ಳಲು ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ದಲಿತ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು ಮಾತನಾಡಿ, ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿದ್ದಾರೆ. ಸದರಿ 21 ಮಂದಿಯನ್ನು ಕೆಲಸದಿಂದ ತೆಗೆದು ಬೇರೆ 10 ಮಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ 21 ನೌಕರರು ನೇರ ನೇಮಕಾತಿಯಡಿ ಕೆಲಸ ಪಡೆದಿದ್ದು, ಇದನ್ನು ವಿವಿ ಸಿಂಡಿಕೇಟ್ ಅನುಮೋದಿಸಿದೆ. ಆದಾಗ್ಯೂ ಇವರನ್ನು ವಜಾಗೊಳಿಸಿರುವುದು ಕಾನೂನು ಉಲ್ಲಂಘನೆ ಎಂದು ದೂರಿದರು. ಸಂಗೀತ ವಿವಿ ಮಾಜಿ ಬೋಧಕೇತರ ಸಿಬ್ಬಂದಿಯಾದ ಕೆ.ಚಂದ್ರಶೇಖರ್, ಕೈಸರ್ ಬಾಬು, ಮುಖಂಡ ಚಿಕ್ಕ ಅನ್ನದಾನಿ ಗೋಷ್ಠಿಯಲ್ಲಿದ್ದರು.

ಅಂಬೇಡ್ಕರ್ ಬಗ್ಗೆ ಗೌರವವಿರುವವರು ಬಿಜೆಪಿಯಲ್ಲಿರಬೇಡಿ

- ಬಿಜೆಪಿ ಸಂವಿಧಾನಕ್ಕೆ ವಿರುದ್ಧವಾದ ಪಕ್ಷ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ
- ಬಿಜೆಪಿ, ಬಿಎಸ್‌ಪಿ ತೊರೆದ ಸ್ವಾಭಿಮಾನಿ ದಲಿತ ಮುಖಂಡರು ಕಾಂಗ್ರೆಸ್ ಸೇರ್ಪಡೆ

ತಿ.ನರಸೀಪುರ, ಮಾ.6– ಡಾ.ಬಿ.ಆರ್. ಅಂಬೇಡ್ಕರ್ ಬಗ್ಗೆ ಗೌರವವಿರುವ ಯಾರೊಬ್ಬರು ಭಾರತೀಯ ಜನತಾ ಪಕ್ಷದಲ್ಲಿ ಇರಬೇಡಿ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಮಹದೇಶ್ವರ ಸ್ಮಾರಕ ಭವನದಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಬಿಜೆಪಿ ಹಾಗೂ ಬಿಎಸ್‌ಪಿ ತೊರೆದ ಸ್ವಾಭಿಮಾನಿ ದಲಿತ ಮುಖಂಡರಿಗೆ ಕಾಂಗ್ರೆಸ್ ಬಾವುಟ ನೀಡುವ ಮೂಲಕ ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ಭಾರತೀಯ ಜನತಾ ಪಕ್ಷ ಸಂವಿಧಾನಕ್ಕೆ ವಿರುದ್ಧವಾದ ಪಕ್ಷ. ಅಂಬೇಡ್ಕರ್ ಕೊಟ್ಟಿರುವ ಸಂವಿಧಾನವನ್ನು ವಿರೋಧಿಸಿ, ಅವರಿಗೆ ಅವಮಾನಿಸುತ್ತಿರುವ ಪಕ್ಷದಲ್ಲಿ ಯಾವೊಬ್ಬ ಸ್ವಾಭಿಮಾನಿ ದಲಿತರು ಇರಬಾರದು ಎಂದರು.

ಬಿಜೆಪಿಯವರಿಗೆ ಸನಾತನ ಧರ್ಮ, ಮನುವಾದ, ಮನಸ್ಮೃತಿ ಆಧಾರ ವ್ಯವಸ್ಥೆಯಲ್ಲಿ ನಂಬಿಕೆ, ಚಾತುರ್ವರ್ಣ ವ್ಯವಸ್ಥೆ ಅವರಿಗೆ ಬೇಕು. ಹಾಗಾಗಿ ಶೂದ್ರರು, ದಲಿತರು ಮುಂದುವರೆಯುವುದು ಅವರಿಗೆ ಬೇಕಿಲ್ಲ. ಬರೀ ಮಾತಲ್ಲಿ ಮಾತ್ರವೇ ದಲಿತರು, ಹಿಂದುಳಿದವರ ಪರ ಇದ್ದೇವೆ ಎನ್ನುತ್ತಾರೆ. ಆದರೆ ಆಂಧ್ರ ಪ್ರದೇಶದ ಬಂಗಾರು ಲಕ್ಷ್ಮಣ್‌ಗೆ ಆದ ಗತಿ ನಿಮಗೆ ಗೊತ್ತಿಲ್ಲವೇ? ಇದೇ ಬಿಜೆಪಿಯವರು ಅಧಿಕಾರ ಕೊಡುತ್ತೇವೆ ಎಂದು ಅವರಿಗೆ ಮಾಡಿದ್ದೇನು ಗೊತ್ತಿಲ್ಲವೇ ಎಂದು ಕಿಡಿಕಾರಿದರು.

ನಾನು ಆರ್‌ಎಸ್‌ಎಸ್ ಅನ್ನು ಬಲವಾಗಿ ವಿರೋಧಿಸುತ್ತೇನೆ. ಅವರಿಗೆ ಸಮಾನತೆಯಲ್ಲಿ ನಂಬಿಕೆ ಇಲ್ಲ. ಅವರು ಮೇಲಿರಬೇಕು. ನಾವು ಕೆಳಗಿರಬೇಕು ಎಂಬ ಮನಸ್ಥಿತಿ ಉಳ್ಳವರಾಗಿದ್ದಾರೆ. ಅದಕ್ಕಾಗಿಯೇ 850 ವರ್ಷಗಳ ಹಿಂದೆಯೇ ಬಸವಣ್ಣನವರು ಅನುಭವ ಮಂಟಪ ಮಾಡಿದರು. ಅವತ್ತಿನ ಅನುಭವ ಮಂಟಪವೇ ಇಂದಿನ ಪಾರ್ಲಿಮೆಂಟ್ ಹಾಗೂ ವಿಧಾನ ಸಭೆಯಾಗಿದೆ ಎಂದರು.

ಯಾವ ಧರ್ಮ ಅಸಮಾನತೆ ಹಾಗೂ ದ್ವೇಷ ಪೋಷಣೆ ಮಾಡುತ್ತದೆ. ಯಾವ ಧರ್ಮ ಮನುಷ್ಯ ಮನುಷ್ಯರಲ್ಲಿ ಭೇದಭಾವ ಮಾಡುವಂತೆ ಹೇಳುತ್ತದೆ? ಬಿಜೆಪಿಯವರು ಹಿಂದೂ ಧರ್ಮದಲ್ಲಿರೋ ದಲಿತರನ್ನೇಕೆ ವಿರೋಧಿಸುತ್ತಾರೆ. ನಾನು ಸಹ ಹಿಂದೂ ನನ್ನನ್ನೇಕೆ ವಿರೋಧ ಮಾಡುತ್ತಾರೆ ಎಂದು ಬಿಜೆಪಿ ನಡೆಗೆ ಆಕ್ರೋಶ ವ್ಯಕ್ತಪಡಿಸಿದರು.

ನನ್ನಪ್ಪ, ನನ್ನವ್ವ, ನಾನೂ ಹಿಂದೂ: ನನ್ನಪ್ಪ, ನನ್ನವ್ವ, ನಾನು ಪೂಜಿಸುವ ದೇವರು ಹಿಂದೂ. ನನ್ನ ಮನೆ ದೇವರು ಸಿದ್ದರಾಮೇಶ್ವರ ಹಾಗಿದ್ದರೂ ಆ ಸಿ.ಟಿ.ರವಿ ನನ್ನನ್ನ ಸಿದ್ರಾಮುಲ್ಲಾ ಖಾನ್ ಎನ್ನುತ್ತಾನೆ. ಈ ಬಿಜೆಪಿಯವರಿಗೆ ಮಾನ ಮರ್ಯಾದೆ ಇದೆಯೇ ಎಂದು ಪ್ರಶ್ನಿಸಿದರು.

ಎಸ್‌ಸಿಪಿ/ಟಿಎಸ್ಪಿಗೇಕೆ ಹಣ ಮೀಸಲಿಲ್ಲ: 2008 ರಿಂದ 2013ರವರೆಗೆ ಬಿಜೆಪಿಯ ಮೂವರು ಮುಖ್ಯಮಂತ್ರಿಗಳಾಗಿದ್ದರು. ಅವರೇಕೆ ಜನಸಂಖ್ಯೆಗೆ ಅನುಗುಣವಾಗಿ ಅಭಿವೃದ್ಧಿಗೆ ಹಣ ಮೀಸಲಿಡಲಿಲ್ಲ. 5 ವರ್ಷದಲ್ಲಿ ಎಸ್‌ಸಿಪಿ, ಟಿಎಸ್ಪಿ ಯೋಜನೆಗೆ ಹಣ ಖರ್ಚು ಮಾಡಬೇಕೆಂದು ಕಾನೂನು ಜಾರಿ ಮಾಡಲಿಲ್ಲ. ರಾಜ್ಯದಲ್ಲಿರಲೀ, ಬಿಜೆಪಿ ಪಕ್ಷ ಅಧಿಕಾರದಲ್ಲಿರೋ ಯಾವುದೇ ರಾಜ್ಯದಲ್ಲಿ ಈ ಕಾನೂನು ಮಾಡಿದ್ದಾರಾ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವಾದರೂ ಮಾಡಿದೆಯಾ, ಆದರೆ ನಾವು ಕರ್ನಾಟಕ ಮತ್ತು ಆಂಧ್ರ ಪ್ರದೇಶದಲ್ಲಿ ಯೋಜನೆ ಜಾರಿಗೆ ತಂದಿದ್ದೇವೆ. ನಾನು ಮುಖ್ಯಮಂತ್ರಿಯಾಗಿ ಕಾನೂನು ಜಾರಿಗೆ ತರುವ ಮುನ್ನಾ ಪ.ಜಾತಿ, ಪಂಗಡಕ್ಕೆ 5 ವರ್ಷದ ಅವಧಿಗೆ 22 ಸಾವಿರ ಕೋಟಿ ರೂ. ಮೀಸಲಿರಿಸಲಾಗಿತ್ತು ನಾನು ಕಾನೂನು ಜಾರಿಗೆ ತಂದ ಮೇಲೆ ಅದೇ ಯೋಜನೆಗೆ 78 ಸಾವಿರ ಕೋಟಿ ರೂ. ಮೀಸಲಿಟ್ಟು ಹಿಂದುಳಿದ ವರ್ಗಗಳ ಹಿತ ಕಾಯಲಾಯಿತು ಎಂದರು.

ಬೊಮ್ಮಾಯಿ ಮುಖ್ಯಮಂತ್ರಿಯಾದ ಮೇಲೆ ನಾನು ಮಾಡಿದ್ದ ಕಾನೂನನ್ನು ಮುಂದುವರೆಸಿದ್ದಾರೆ. ನನ್ನ ಕೊನೆ ಬಜೆಟ್‌ನ ಗಾತ್ರ 2 ಲಕ್ಷ 2 ಸಾವಿರ ಕೋಟಿ ರೂ.ಗಳಾಗಿತ್ತು. ಆಗ ಎಸ್‌ಸಿಪಿ, ಟಿಎಸ್ಪಿಗೆ 30 ಸಾವಿರ ಕೋಟಿ ಮೀಸಲಿಟ್ಟಿದ್ದೆ. ಈಗ ಬಜೆಟ್ ಗಾತ್ರ 3 ಲಕ್ಷ 9 ಸಾವಿರದ 180 ಕೋಟಿ ರೂ, ಗಳಾಗಿದ್ದು ಈಗಲೂ ಯೋಜನೆಗೆ ಕೇವಲ 30 ಸಾವಿರ ಕೋಟಿಗಳನ್ನು ಮೀಸಲಿಟ್ಟಿದ್ದಾರೆ ಎಂದರು.

ಜಾರಕಿಹೊಳಿ, ಹರ್ಷವರ್ಧನ್‌ಗೆ ನಾಚಿಕೆ ಇಲ್ಲವೇ?: ಎಸ್‌ಸಿಪಿ, ಟಿಎಸ್ಪಿ ಯೋಜನೆಗೆ ಮೀಸಲಿಟ್ಟ ಹಣದ ಬಗ್ಗೆ ಯಾರಾದರೂ ಚಕಾರ ಎತ್ತಿದ್ದಾರೆಯೇ ಇಲ್ಲ. ಪಜಾತಿ ಪಂಗಡದ ಶಾಸಕ, ಸಂಸದರು ಕೇಳಿದ್ದಾರಾ ಇಲ್ಲ. ಬಾಲಚಂದ್ರ ಜಾರಕಿಹೊಳಿ, ಶ್ರೀನಿವಾಸ ಪ್ರಸಾದ್ ಅಳಿಯ ಹರ್ಷವರ್ಧನ್‌ರಿಗೆ ನಾಚಿಕೆಯಾಗುವುದಿಲ್ಲವೇ? ಪಜಾತಿ ವರ್ಗಕ್ಕೆ ಕಡಿಮೆ ಹಣ ಮೀಸಲಿಟ್ಟ ಬಗ್ಗೆ ಕೇಳಲು ಆಗುವುದಿಲ್ಲವೇ? ಮೀಸಲಿಟ್ಟ ಹಣ ಬೇರೆ ಕಡೆ ಡೈವರ್ಟ್ ಮಾಡಬಾರದೆಂದು ಕಾನೂನು ಮಾಡಿದ್ದೇವೆ. ಆದರೂ ಯಡಿಯೂರಪ್ಪ, ಬೊಮ್ಮಾಯಿ ಪ.ಜಾತಿ ಪಂಗಡವರಿಗೆ ಅನ್ಯಾಯ ಮಾಡಿದ್ದಾರೆ ಎಂದು ವಾಗ್ದಾಳಿ ಮಾಡಿದರು. ಹಾಗಾಗಿ ದಲಿತರಿಗೆ ಬಿಜೆಪಿ ಪಕ್ಷದಲ್ಲಿ ಯಾವುದೇ ಸಮಾನತೆ, ಅಧಿಕಾರ ಕೊಡಲು ಸಾಧ್ಯವಿಲ್ಲ. ಇದನ್ನು ಅರಿತು ಬಂದಿರುವ ಮುಖಂಡರಿಗೆ ಸ್ವಾಗತ ಕೋರುತ್ತೇನೆ ಎಂದರು.

ಇದೇ ವೇಳೆ ಮಾಜಿ ಶಾಸಕ ಎಂ.ಶ್ರೀನಿವಾಸಯ್ಯ, ಮಾಜಿ ಜಿಪಂ ಸದಸ್ಯ ದಯಾನಂದ್, ಬಿಜೆಪಿ ಎಸ್‌ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೃಷ್ಣಮೂರ್ತಿ, ಪುರಸಭಾ ಸದಸ್ಯ ಗಣೇಶ್, ಕೆಡಿಪಿ ನಿರ್ದೇಶಕ ಮಿಥುನ್ ಸೇರಿದಂತೆ ಅನೇಕ ಅಭಿಮಾನಿಗಳು ಪಕ್ಷಕ್ಕೆ ಸೇರ್ಪಡೆಗೊಂಡರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಮಾಜಿ ಸಂಸದ ಆರ್.ಧ್ರುವನಾರಾಯಣ್, ವೀಕ್ಷಕ ರಾಘವನ್, ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಮಾಜಿ ಜಿಪಂ ಸದಸ್ಯೆ ಸುಧಾ ಮಹದೇವಯ್ಯ, ಮಾಜಿ ಶಾಸಕಿ ಸುನಿತಾ ವೀರಪ್ಪಗೌಡ, ವಸತಿ ಯೋಜನಾ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನಿಲ್ ಬೋಸ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ವಜ್ರೇಗೌಡ, ತಾಯೂರು ಗ್ರಾಪಂ ಮಾಜಿ ಅಧ್ಯಕ್ಷ ಹಾರೋ ಪುರ ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡ, ಪುರಸಭಾಧ್ಯಕ್ಷ ನಂಜುಂಡತ ಸ್ವಾಮಿ, ನಿಕಟಪೂರ್ವ ಅಧ್ಯಕ್ಷ ಮದನ್ ರಾಜ್, ತಾಪಂ ಮಾಜಿ ಉಪಾಧ್ಯಕ್ಷ ಬಿ. ಮರಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್, ಎಂ.ಡಿ ಬಸವರಾಜು, ರಂಗಸ್ವಾಮಿ, ಹುಣ ಸೂರು ಬಸವಣ್ಣ ಮತ್ತಿತರರಿದ್ದರು.



ನಾನು ಬದುಕಿರುವವರೆಗೂ ಆರ್‌ಎಸ್‌ಎಸ್ ವಿರೋಧಿ

ಯಾರು ಆರ್‌ಎಸ್‌ಎಸ್ ಹಾಗೂ ಸನಾತನ ಧರ್ಮ ವಿರೋಧಿಸುತ್ತಾರೋ ಅವರೆಲ್ಲಾ ಬಿಜೆಪಿಯವರ ದೃಷ್ಟಿಯಲ್ಲಿ ವೈರಿಗಳು ಎಂದ ಸಿದ್ದರಾಮಯ್ಯ ಸೈದ್ಧಾಂತಿಕವಾಗಿ ನಾನು ಅಧಿಕಾರದಲ್ಲಿರಲೀ, ಇಲ್ಲದಿರಲೀ, ಬದುಕಿರುವವರೆಗೂ ಆರ್‌ಎಸ್‌ಎಸ್ ವಿರೋಧಿಸುತ್ತೇನೆ. ಅಧಿಕಾರಕ್ಕಾಗಿ ನಾನೆಂದು ರಾಜಕಾರಣ ಮಾಡಲ್ಲ ಎಂದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ಸರಗೂರು, ಮಾ.6– ವಿವಿಧ ಪಕ್ಷಗಳ ಕಾರ್ಯಕರ್ತರು ಪಕ್ಷಕ್ಕೆ ಸೇರ್ಪಡೆಗೊಳ್ಳುವ ಮೂಲಕ ಕ್ಷೇತ್ರದಲ್ಲಿ ಕಾಂಗ್ರೆಸ್ ಬಲ ಹೆಚ್ಚಿಸಲು ಮುಂದಾಗಿರುವುದು ಸಂತಸ ತಂದಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲೂಕಿನ ಯಶವಂತಪುರ, ಆಲಲಹಳ್ಳಿ, ಎತ್ತಿಗೆ, ಕಾಡನಹಳ್ಳಿ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಯಶವಂತಪುರ ಗ್ರಾಮದಲ್ಲಿ ಮುಖಂಡ ಶಿವಲಿಂಗಯ್ಯ ಅಧ್ಯಕ್ಷತೆಯಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ವಿವಿಧ ಪಕ್ಷಗಳ ಕಾರ್ಯಕರ್ತರನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ಮುಂದಿನ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರ ಹಿಡಿಯಲಿದೆ. ಕ್ಷೇತ್ರದಲ್ಲಿ ಕಾಂಗ್ರೆಸ್ ಬಲಿಷ್ಠವಾಗಿದ್ದು, ಪಕ್ಷದ ಗೆಲುವಿಗೆ ಕಾರ್ಯಕರ್ತರು ಶ್ರಮಿಸಬೇಕು ಎಂದರು.

ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಎಚ್.ಸಿ.ನರಸಿಂಹಮೂರ್ತಿ ಮಾತನಾಡಿ, ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಬಲವಾಗಿದ್ದು, ಪಕ್ಷ ಸಂಘಟನೆಗೆ ಎಲ್ಲರೂ ಮುಂದಾಗಬೇಕು. ಪಕ್ಷದ ಜನಪರ ಕಾರ್ಯಕ್ರಮಗಳನ್ನು ಜನತೆಗೆ ಮನವರಿಕೆ ಮಾಡಿಕೊಡಬೇಕು ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಕೆ.ಚಿಕ್ಕವೀರನಾಯಕ, ಗ್ರಾಪಂ ಅಧ್ಯಕ್ಷೆ ಪ್ರಿಯಾಂಕ, ಉಪಾಧ್ಯಕ್ಷೆ ಜ್ಯೋತಿ, ಸದಸ್ಯರಾದ ಶಿವಲಿಂಗಯ್ಯ, ಪ್ರಕಾಶ್, ಶಿವರಾಜು, ಎಚ್.ಸಿ.ಭಾಗ್ಯ, ರತ್ನಮ್ಮ, ಮಂಜುಳಾ, ಬಿ.ಎಸ್.ಗಂಗಾಧರ, ಶಿವಕುಮಾರ್, ಚಿಕ್ಕಕ್ಯಾತ, ವೆಂಕಟರಾಮು, ಮುಖಂಡರಾದ ಪುಟ್ಟಸ್ವಾಮಿ, ಶಿವಮೂರ್ತಿ, ನಿಜಪ್ಪ ಮಹದೇವಸ್ವಾಮಿ, ವೆಂಕಟೇಶ್, ನಾಗಮಲ್ಲಪ್ಪ, ಪ್ರಕಾಂಶ, ಬಸವಣ್ಣ, ನಂದೀಶ್, ಗೋವಿಂದಚಾರಿ, ಲಕ್ಷ್ಮಣ್, ರೇವಣ್ಣ ನಾಗಣ್ಣ, ಉಮೇಶ್, ರಂಗಸ್ವಾಮಿ, ಮಹೇಂದ್ರ, ಸಿದ್ದಯ್ಯ ಸೇರಿದಂತೆ ಇನ್ನಿತರರಿದ್ದರು.

ಸಮಾಜ ಸುಧಾರಕರನ್ನು ಜಾತಿಗೆ ಸೀಮಿತಗೊಳಿಸದಿರಿ

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್



ಹುಣಸೂರು, ಮಾ.6– ಸಮಾಜ ಸುಧಾರಕರಾದ ಬಸವಣ್ಣ, ಅಂಬೇಡ್ಕರ್ ಹಾಗೂ ಕನಕದಾಸ ಸೇರಿದಂತೆ ಇನ್ನಿತರರ ತತ್ವ ಸಿದ್ಧಾಂತಗಳನ್ನು ಅರ್ಥ ಮಾಡಿಕೊಳ್ಳದೇ, ಪಾಲಿಸದೇ ಅವರನ್ನು ಜಾತಿಗೆ ಸೀಮಿತಗೊಳಿಸಿ ಜಯಂತಿಗಳನ್ನು ಆಚರಿಸುತ್ತಿರುವುದು ವಿಪರ್ಯಾಸ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಮಹದೇವ್ ಜೆ.ಕಲ್ಕುಣಿಕೆ ಅವರ ಕನಕ ಪಥ ಪುಸ್ತಕ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಸಾಮಾಜಿಕ ಸಮಾನತೆಗಾಗಿ ಹೋರಾಡಿದ ಮಹನೀಯರನ್ನು ಇತ್ತೀಚಿನ ದಿನಗಳಲ್ಲಿ ಆಯಾ ಜಾತಿಯವರ ಆಸ್ತಿಯನ್ನಾಗಿ ಮಾಡಿ, ಜಾತಿ ಬಣ್ಣ ಕಟ್ಟಿ ತತ್ವಾದರ್ಶ ಮರೆತು ಜಯಂತಿ ಆಚರಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. ಜನಸಾಮಾನ್ಯರು ಎಲ್ಲಿಯವರೆಗೆ ಇದನ್ನು ಅರಿಯುವುದಿಲ್ಲವೋ ಅಲ್ಲಿಯವರೆಗೆ ಮಹನೀಯರ ಚಿಂತನೆಗಳು ಸಮಾಜಮುಖಿಯಾಗಿ ಹರಿಯದೇ ಜಾತಿ ಪಂಕ್ತಕ್ಕೆ ಸೀಮಿತವಾಗಿ ಯುವ ಪೀಳಿಗೆಯನ್ನು ಕತ್ತಲಲ್ಲಿ ಇಡುವ ಸ್ಥಿತಿ ಮುಂದುವರೆಯಲಿದೆ. ಈ ಕತ್ತಲಿಗೆ ಬೆಳಕು ಚೆಲ್ಲುವ ಕೆಲಸ ಇಂತಹ ಪುಸ್ತಕಗಳಿಂದ ಆಗಬೇಕಾಗಿದೆ ಎಂದರು.

ಪುಸ್ತಕಗಳು ಓದುಗರ ಮನಸ್ಸಿಗೆ ನವ ಚೈತನ್ಯ ತಂದುಕೊಡುವ ದಿಕ್ಕಿನಲ್ಲಿ ಮೌನಕ್ರಾಂತಿ ನಡೆಸಬೇಕಿದೆ. ಅಲ್ಲದೇ ಯುವ ಪೀಳಿಗೆಯಲ್ಲಿ ಪುಸ್ತಕ ಓದುವ ಹವ್ಯಾಸ ಬೆಳೆಸಬೇಕು ಎಂದ ಅವರು ಪ್ರಸ್ತುತ ಜನಪ್ರತಿನಿಧಿ ತನ್ನ ಸ್ಥಾನ ಹೆಚ್ಚಿಸಿಕೊಳ್ಳುವ ದಿಕ್ಕಿನಲ್ಲಿ ಒಂದಿಷ್ಟು ಸಮಯ ಓದಿಗಾಗಿ ಕಾಯ್ದಿರಿಸಬೇಕು. ಈ ಕೆಲಸವಾಗದೇ ತನ್ನ ಕಾರ್ಯ ಕ್ಷೇತ್ರದಲ್ಲಿ ಯಾವುದೇ ಹೊಸತನ ಮತ್ತು ಬದಲಾವಣೆ ತರಲು ಸಾಧ್ಯವಿಲ್ಲ ಎಂದರು.

ಕೃತಿ ಕರ್ತೃ ಮಹದೇವ್.ಜೆ.ಕಲ್ಕುಣಿಕೆ ಪುಸ್ತದ ರಚನೆ ಕುರಿತು ಮಾತನಾಡಿದರು. ಚಾಮರಾಜನಗರದ ಪ್ರಾಂಶುಪಾಲ ಮಹೇಶ್. ಬಿ ಪುಸ್ತಕದ ವಿಮರ್ಶೆ ಮಾಡಿದರು. ಕಾರ್ಯಕ್ರಮದಲ್ಲಿ ಹುಡಾ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ಕಾವೇರಿ ಆಸ್ಪತ್ರೆ ಡಾ.ಲೋಹಿತ್, ಟ್ಯಾಲೆಂಟ್ ಸಂಸ್ಥೆ ನಿರ್ದೇಶಕ ನವೀನ್ ರೈ, ಸಂವಿಧಾನ ಚಿಂತಕ ಮೋದೂರು ಮಹೇಶಾರಧ್ಯ, ಪಿಡಿಓ ಕೆಂಚೇಗೌಡ, ರೇಣುಕಾ ಪ್ರಸಾದ್ ಸೇರಿದಂತೆ ಇನ್ನಿತರರಿದ್ದರು.

ಇವಿಎಂ, ವಿವಿ ಪ್ಯಾಟ್ ಬಗ್ಗೆ ಮತದಾರರಿಗೆ ಜಾಗೃತಿ

ಕೆ.ಆರ್.ನಗರ ತಹಸೀಲ್ದಾರ್ ಬಾಲಸುಬ್ರಹ್ಮಣ್ಯ



ಕೆ.ಆರ್.ನಗರ, ಮಾ.6– ಮುಂಬರುವ ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಮತ್ತು ವಿವಿ ಪ್ಯಾಟ್‌ಗಳು ಹೇಗೆ ಕಾರ್ಯ ನಿರ್ವಹಿಸಲಿವೆ ಹಾಗೂ ಅದರ ಬಳಕೆ ಹೇಗೆ ಎಂಬ ಬಗ್ಗೆ ಜಾಗೃತಿ ಮೂಡಿಸಿ, ಮತದಾರರಿಗೆ ಪ್ರಾತ್ಯಕ್ಷಿಕೆ ಮೂಲಕ ತಿಳಿಸಿಕೊಡುವ ಉದ್ದೇಶದಿಂದ ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನ 250 ಮತಗಟ್ಟೆಗಳಲ್ಲಿ ಜಾಗೃತಿ ಮತ್ತು ಅರಿವು ಮೂಡಿಸಲಾಗುತ್ತದೆ ಎಂದು ತಹಸೀಲ್ದಾರ್ ಬಾಲಸುಬ್ರಹ್ಮಣ್ಯ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಇವಿಎಂ ಮತ್ತು ವಿವಿ ಪ್ಯಾಟ್‌ನ ಪ್ರಾತ್ಯಕ್ಷಿಕೆ ನಡೆಸಿ ಮಾತನಾಡಿದ ಅವರು, ಚುನಾವಣಾ ಆಯೋಗದ ನಿರ್ದೇಶನದ ಮೇರೆಗೆ ವಿದ್ಯುನ್ಮಾನ ಮತಯಂತ್ರ ಹೇಗೆ ಕಾರ್ಯ ನಿರ್ವಹಿಸಲಿದೆ. ಬ್ಯಾಲೆಟ್ ಯೂನಿಟ್, ವಿವಿ ಪ್ಯಾಟ್, ಕಂಟ್ರೋಲ್ ಯೂನಿಟ್ ಎಂದರೆ ಏನು ಎಂಬ ಬಗ್ಗೆ ಮತದಾರರಲ್ಲಿ ಜಾಗೃತಿ ಮೂಡಿಸಲಾಗುತ್ತದೆ. ಮತದಾರರು ಯಾರಿಗೆ ಮತ ಚಲಾಯಿಸಿದ್ದಾರೆ. ಅವರು ಮತ ಚಲಾಯಿಸಿದ ಅಭ್ಯರ್ಥಿ ಹೆಸರು, ಚಿಹ್ನೆ ವಿವರಗಳು ಸರಿಯಾಗಿದೆಯೇ ಎಂಬ ಬಗ್ಗೆ ವಿವಿ ಪ್ಯಾಟ್‌ನಲ್ಲಿ ಖಾತರಿಪಡಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕೆ.ಆರ್.ನಗರ ಕ್ಷೇತ್ರದ ಎಲ್ಲಾ ಮತಗಟ್ಟೆಗಳಲ್ಲಿ ತಂಡಗಳನ್ನು ನಿಯೋಜಿಸಲಾಗಿದೆ ಎಂದರು.

ಈ ಜಾಗೃತಿ ಕಾರ್ಯಕ್ರಮವನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಬೇಕು. ಚುನಾವಣೆಯಲ್ಲಿ ಮತದಾರರು ತಪ್ಪದೇ ಮತದಾನ ಮಾಡುವ ಮೂಲಕ ತಮ್ಮ ಹಕ್ಕನ್ನು ಚಲಾಯಿಸಿ ಎಂದರು.

ಕೆ.ಆರ್.ನಗರ ಕ್ಷೇತ್ರದಲ್ಲಿ ಒಟ್ಟು 250 ಮತಗಟ್ಟೆಗಳಿದ್ದು, ಎಲ್ಲಾ ಮತಗಟ್ಟೆಗಳಿಗೂ ಮೂಲ ಸೌಕರ್ಯ ಕಲ್ಪಿಸಲಾಗಿದೆ. ಈಗಾಗಲೇ 24 ಸೆಕ್ಟರ್ ಅಧಿಕಾರಿಗಳು ಜೊತೆಗೆ 9 ಮಂದಿ ಪ್ಲೇಯಿಂಗ್ ಸ್ಕ್ವಾಡ್ ತಂಡಗಳನ್ನು ರಚಿಸಲಾಗಿದೆ. ಅಲ್ಲದೇ ಚೆಕ್‌ಪೋಸ್ಟ್‌ಗಳನ್ನು ರಚಿಸಲಾಗುವುದು ಎಂದರು.

ಕ್ಷೇತ್ರದಲ್ಲಿ ಒಟ್ಟು 2,14,515 ಮತದಾರರಿದ್ದು, ಪುರುಷರು 106623, ಮಹಿಳೆಯರು 107874 ಹಾಗೂ ಇತರೆ 18 ಮತದಾರರು ಇದ್ದಾರೆ ಎಂದು ತಿಳಿಸಿದರು.

ಮಸ್ಟರಿಂಗ್ ತರಬೇತಿ ತಂಡದ ಶಿಕ್ಷಕ ಚೆನ್ನಬಸವಯ್ಯ, ಚುನಾವಣಾ ಉಪ ತಹಸೀಲ್ದಾರ್ ಮಹೇಶ್, ಶಿರೇಸ್ತಾರ್ ದೀಪಕ್, ಅಸ್ಲಂ ಪಾಷಾ, ಯೋಗಾಚಾರ್, ಸಿಬ್ಬಂದಿಗಳಾದ ರಂಜಿನಿ, ಸಹನ, ಸುಬ್ರಹ್ಮಣ್ಯ ಮೊದಲಾದವರು ಇದ್ದರು.


ಭೇರ್ಯ ಗ್ರಾಪಂಗೆ ಶಿವಣ್ಣ ಪ್ರಭಾರ ಅಧ್ಯಕ್ಷ

ಭೇರ್ಯ, ಮಾ.6– ಭೇರ್ಯ ಗ್ರಾಪಂ ಪ್ರಭಾರ ಅಧ್ಯಕ್ಷರಾಗಿ ಬಿ.ಬಿ.ಶಿವಣ್ಣ ಅಧಿಕಾರ ಸ್ವೀಕರಿಸಿದರು. ಭೇರ್ಯ ಗ್ರಾಪಂ ಅಧ್ಯಕ್ಷೆಯಾಗಿದ್ದ ಜ್ಯೋತಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಕಾರಣ ಉಪಾಧ್ಯಕ್ಷ ಬಿ.ಬಿ.ಶಿವಣ್ಣ ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಪಿಡಿಓ ಕೆ.ಎ.ಮಂಜುನಾಥ್ ಅಧಿಕಾರ ಹಸ್ತಾಂತರ ಮಾಡಿದರು.

ಗ್ರಾಪಂ ಸದಸ್ಯರಾದ ಬಿ.ಕೆ ಕುಮಾರ್, ಬಿ.ಕೆ.ಶಿವಕುಮಾರ್, ಮಂಜಪ್ಪ, ಬಿ.ಪಿ.ಪ್ರಕಾಶ್, ಜಯಲಕ್ಷ್ಮಮ್ಮ, ಅಂಬೇಡ್ಕರ್ ಸಂಘದ ಮಾಜಿ ಅಧ್ಯಕ್ಷ ಕೃಷ್ಣ, ಸದಸ್ಯ ಅಭಿ, ಹರೀಶ್, ಗ್ರಾಪಂ ಸಿಬ್ಬಂದಿಗಳಾದ ಕುಮಾರ್, ಜಯಂತ್ ಅಭಿನಂದಿಸಿದರು.

ಅಧಿಕಾರಕ್ಕಾಗಿ ಸ್ವಾಭಿಮಾನ ಬಿಟ್ಟು ತಲೆಬಾಗಲ್ಲ

ಕುರುಬರ ಸಂಘದ ಬ್ಯಾಂಕ್ ಕಟ್ಟಡ ಉದ್ಘಾಟಿಸಿದ ವಿಪಕ್ಷ ನಾಯಕ ಸಿದ್ದರಾಮಯ್ಯ



ತಿ.ನರಸೀಪುರ, ಮಾ.6– ಅಧಿಕಾರಕ್ಕಾಗಿ ಸ್ವಾಭಿಮಾನ ಬಿಟ್ಟು ಯಾರ ಮುಂದೆಯೂ ತಲೆ ಬಾಗಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಮರೀಗೌಡ ಸ್ಮಾರಕ ಭವನದಲ್ಲಿ ಸೋಮವಾರ ತಾಲೂಕು ಕುರುಬರ ಸಂಘದ ಬ್ಯಾಂಕ್ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿಯಾಗಿದ್ದ ಬಂಗಾರಪ್ಪ ಅವರನ್ನು 2 ವರ್ಷಕ್ಕೆ ಇಳಿಸಲಾಯಿತು. ವೀರಪ್ಪ ಮೊಯಿಲಿ ಅವರನ್ನು ಸಭೆ ಮಾಡಲು ಬಿಡಲಿಲ್ಲ. ಆದರೆ ನಾನು ಜನಾಶೀರ್ವಾದದಿಂದ 5 ವರ್ಷ ಸಾಮಾಜಿಕ ನ್ಯಾಯ ಪರಿಕಲ್ಪನೆಯೊಂದಿಗೆ ಆಡಳಿತ ನಡೆಸಿದ್ದೇನೆ. ಜನರು ಹೆಮ್ಮೆ ಪಡುವ ರೀತಿ ಸ್ವಾಭಿಮಾನದಿಂದ ಆಡಳಿತ ನಡೆಸಿದ್ದೇನೆ. ನಿಮ್ಮ ಆಶೀರ್ವಾದ ಹೀಗೆ ಇರಲಿ. ಮುಂದೆ ನಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಲಿದೆ. ನಾವು ಅಧಿಕಾರಕ್ಕೆ ಬಂದಲ್ಲಿ ಹಿಂದುಳಿದ ಅಲ್ಪಸಂಖ್ಯಾತ, ದಲಿತ ವರ್ಗಗಳಿಗೆ ಸಾಮಾಜಿಕ ನ್ಯಾಯ ಸಿಗುವಂತೆ ಆಡಳಿತ ನೀಡಲಿದ್ದೇವೆ ಎಂದರು.

ಸಂಘಗಳನ್ನು ದೊಡ್ಡಸ್ತಿಕೆಗೆ ಮಾಡಿಕೊಳ್ಳುವುದಲ್ಲ. ಗುಂಪುಗಾರಿಕೆ ಮಾಡಿಕೊಂಡು ಸದಾ ಅಧಿಕಾರದಲ್ಲಿರುವುದಲ್ಲ. ಬೈಲಾದನ್ವಯ ಚುನಾವಣೆ ನಡೆಸಿ ಅಧಿಕಾರ ಬೇರೆಯವರಿಗೂ ಸಿಗುವಂತೆ ಮಾಡಬೇಕು. ಇರುವ ಅವಧಿಯಲ್ಲಿ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು. ಕುರುಬರ ಸಂಘ ಮಾತ್ರವಲ್ಲ. ಎಲ್ಲಾ ಹಿಂದುಳಿದ ಸಮಾಜದ ಸಂಘಟನೆಗಳು ರಾಜಕೀಯವಾಗಿ ಜಾಗೃತವಾಗಬೇಕು. ಮುಂದುವರೆದ ಸಮುದಾಯಗಳು ಯಾವ ದಿಕ್ಕಿನಲ್ಲಿ ಪ್ರಗತಿ ಕಾಣುತ್ತೇವೆ ಎಂಬುದನ್ನು ವಿಮರ್ಶಿಸಿಕೊಳ್ಳಬೇಕು. ರಾಜಕೀಯ ಜಾಗೃತಿ ಮೂಡದ ಹೊರತು ಸಮಾಜದ ಮುಖ್ಯವಾಹಿನಿಗೆ ಯಾವ ಸಮಾಜವೂ ಬರಲು ಅಸಾಧ್ಯ. ಬಾಬಾ ಸಾಹೇಬರ ಆಶಯದಂತೆ ಶಿಕ್ಷಣಕ್ಕೆ ಆದ್ಯತೆ ನೀಡಿ, ಸಂಘಟನೆ ಮಾಡಿಕೊಂಡು ಸವಲತ್ತು ಪಡೆಯಲು ಅಗತ್ಯ ಹೋರಾಟ ಮಾಡಬೇಕು ಎಂದರು.

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಸಹಕಾರ ಸಂಘಗಳ ಸಾಲ ಮನ್ನಾ ಮಾಡಿದ ಮೊದಲ ಮುಖ್ಯಮಂತ್ರಿ ಸಿದ್ದರಾಮಯ್ಯ. ಅವರ ಗಟ್ಟಿ ಧ್ವನಿಯಿಂದಲೇ ಇಂದು ಶೋಷಿತ ಸಮುದಾಯಗಳನ್ನು ಮೇಲೆತ್ತಲು ಶ್ರಮಿಸಿದ್ದಾರೆ. ಇಲ್ಲಿಯೂ ಕೂಡ ಸಮುದಾಯಕ್ಕೆ 1 ಎಕರೆ ಜಮೀನನ್ನು ಮಂಜೂರು ಮಾಡಿಸಿದ್ದೇವೆ. ಇದನ್ನು ಸ್ಮಶಾನಕ್ಕೆ ಬಳಸದೇ ಮತ್ತಿತರ ಚಟುವಟಿಕೆಗಳಿಗೆ ಬಳಸಿಕೊಳ್ಳುವಂತೆ ಸಲಹೆ ನೀಡಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಮಾತನಾಡಿ, ಸಿದ್ದರಾಮಯ್ಯನವರು 4 ದಶಕಗಳ ಕಾಲ ರಾಜಕಾರಣ ಮಾಡಿ ಕಳಂಕವಿಲ್ಲದೇ ಉತ್ತಮ ಆಡಳಿತ ನೀಡಿ ಸಮುದಾಯಕ್ಕೆ ಗೌರವ ತರುವ ಕೆಲಸ ಮಾಡಿದ್ದಾರೆ ಎಂದರು.

ಕೇರಳ ಸಂಸದ ರಾಘವನ್, ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿದರು. ಕಾರ್ಯಕ್ರಮದಲ್ಲಿ ಯುವ ಮುಖಂಡ ಸುನೀಲ್ ಬೋಸ್, ಪುರಸಭಾಧ್ಯಕ್ಷ ನಂಜುಂಡಸ್ವಾಮಿ, ಉಪಾಧ್ಯಕ್ಷೆ ನಾಗರತ್ನ, ರಾಜ್ಯ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ, ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಮನ್ನೆಹುಂಡಿ ಮಹೇಶ್, ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಮಾಜಿ ಅಧ್ಯಕ್ಷರಾದ ಪ್ರಶಾಂತ್ ಬಾಬು, ಬಸವಣ್ಣ, ಮಲ್ಲಿಕಾರ್ಜುನಸ್ವಾಮಿ, ನಿರ್ದೇಶಕರಾದ ಗುರುಮೂರ್ತಿ, ಮುಸುವಿನ ಕೊಪ್ಪಲು ಶಿವರಾಮ್, ಎನ್.ಮಹದೇವಸ್ವಾಮಿ, ಅಶ್ವಿನ್, ಭಾಗ್ಯಮ್ಮ, ಕವಿತಾ, ಅರುಣ್ ಕುಮಾರ್, ಉಕ್ಕಲಗೆರೆ ಬಸವಣ್ಣ, ಪ್ರಭಾಕರ್ ಬಲರಾಂ, ಜಿಪಂ ಮಾಜಿ ಸದಸ್ಯ ಎಂ.ಆರ್. ಸೋಮಣ್ಣ, ಸುಧಾ, ಮೂಗೂರು ಎಂ.ಡಿ. ಬಸವರಾಜು, ಕಾಳಬಸವನಹುಂಡಿ ಮಲ್ಲೇಶ್, ಶಿವಶಂಕರ್, ಭಾಗ್ಯ ಹಾಳೇಗೌಡ, ಕೆ.ನಾಗರಾಜು, ಚಂದ್ರಶೇಖರ್ ಮತ್ತಿತರರಿದ್ದರು.

ಇಂದಿನಿಂದ ಶ್ರೀದುರ್ಗಮ್ಮ–ಮರ್ಗಮ್ಮದೇವಿ ಅಡ್ಡಪಲ್ಲಕ್ಕಿ ಉತ್ಸವ

ಹುಣಸೂರು, ಮಾ.6– ನಗರದ ಸರಸ್ವತಿಪುರಂನಲ್ಲಿರುವ ಶ್ರೀದುರ್ಗಮ್ಮ–ಮರ್ಗಮ್ಮ ದೇವಿ 116ನೇ ವಾರ್ಷಿಕೋತ್ಸವ ಮತ್ತು ಅಡ್ಡಪಲ್ಲಕ್ಕಿ ಉತ್ಸವ ಮಾ.7 ರಿಂದ 9 ರ ವರೆಗೆ ಅದ್ಧೂರಿಯಾಗಿ ನಡೆಯಲಿದೆ ಎಂದು ದೇವಾಲಯ ಸೇವಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.



ಮಾ.7 ರಂದು ಬೆಳಗ್ಗೆ 6 ಗಂಟೆಗೆ ದೇವಿಗೆ ಅಭಿಷೇಕ, ಹೂವಿನ ಅಲಂಕಾರ ಹಾಗೂ ಕುಂಕುಮಾರ್ಚನೆ ನಡೆಯಲಿದೆ. ಬೆಳಗ್ಗೆ 11 ಗಂಟೆಗೆ ಮಹಾಮಂಗಳಾರತಿ ನಡೆಯಲಿದೆ. ಸಂಜೆ 4 ಗಂಟೆಗೆ ಲಕ್ಷ್ಮಣತೀರ್ಥ ನದಿಯಿಂದ ಅಡ್ಡಪಲ್ಲಕ್ಕಿಯಲ್ಲಿ ಶುದ್ಧ ಗಂಗಾಜಲದೊಂದಿಗೆ ಶ್ರೀದುರ್ಗಮ್ಮ–ಮರ್ಗಮ್ಮ ದೇವಿಯರಿಗೆ ಹೋಮಹವನ ನಡೆಸಿ, ನಗರದ ಪ್ರಮುಖ ಬೀದಿಗಳಲ್ಲಿ ಡೊಳ್ಳು ಕುಣಿತ, ನಗಾರಿ, ವಾದ್ಯಮೇಳ, ತಮಟೆ, ಮತ್ತಿತರ ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ದೇವಿಯರನ್ನು ಕರೆತರಲಾಗುವುದು.

ಮಾ.8ರಂದು ಬೆಳಗ್ಗೆ 5.30ಕ್ಕೆ ಶ್ರೀದುರ್ಗಮ್ಮ–ಮರ್ಗಮ್ಮ ದೇವಿಯರಿಗೆ ತಂಬಿಟ್ಟು ಆರತಿ ನೆರವೇರಿಸಿದ ನಂತರ ಮಹಾ ಮಂಗಳಾರತಿ ನಡೆಯಲಿದೆ. ಮಾ.9ರಂದು ಬೆಳಗ್ಗೆ 8 ಗಂಟೆಗೆ ಹೋಳಿ ಹಬ್ಬ ಆಚರಿಸಲಾಗುವುದು. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರಕಟಣೆ ತಿಳಿಸಿದೆ.

ಮಾ.8ರಿಂದ ಶ್ರೀಆದಿಶಕ್ತಿ ಭಂಗಿ ಮಾರಮ್ಮನ ಜಾತ್ರೆ

ಹೆಡತಲೆ, ಮಾ.6– ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ಗ್ರಾಮದೇವತೆ ಶ್ರೀಆದಿಶಕ್ತಿ ಭಂಗಿ ಮಾರಮ್ಮನ ಜಾತ್ರೆ ಮಾ.8ರಿಂದ 10ರವರೆಗೆ ಮೂರು ದಿನಗಳ ಕಾಲ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.




ಮಾ.8ರಂದು ಬೆಳಗ್ಗೆ 9 ಗಂಟೆಗೆ ಮಾರಮ್ಮನಿಗೆ ವಿಧಿವಿಧಾನಗಳೊಂದಿಗೆ ಪೂಜೆ ಸಲ್ಲಿಸಿ ಮಹಾ ಮಂಗಳಾರತಿ ನೆರವೇರಿಸಲಾಗುವುದು. ರಾತ್ರಿ 7 ಗಂಟೆಗೆ ಬಾಣಂತಿ ಮಾರಮ್ಮನ ದೇವಸ್ಥಾನದ ಮುಂಭಾಗ ಹೆಣ್ಣು ಮಕ್ಕಳಿಂದ ಮಡೆ ಉತ್ಸವ, ರಾತ್ರಿ 11 ಗಂಟೆಗೆ ಹರಕೆ ಹೊತ್ತಿರುವ ಭಕ್ತರಿಂದ ಬಾಯಿ ಬೀಗ, 2 ಗಂಟೆಗೆ ಎಮ್ಮಡೆ ಉತ್ಸವ, ಬೆಳಗಿನ ಜಾವ 4 ಗಂಟೆಗೆ ಈಡಗರ ತಂಪು ಕಾರ್ಯಕ್ರಮ ನಡೆಯಲಿದೆ. ಮಾ.9ರಂದು ಮಧ್ಯಾಹ್ನ 3 ಗಂಟೆಗೆ ವೀರ ಮಕ್ಕಳ ಕುಣಿತ, ಕಡ್ಡಿ ವರಸೆ, ಕಂಸಾಳೆ ನೃತ್ಯ, ಗಾಡಿಗೊಂಬೆ ಕುಣಿತ ನಡೆಯಲಿದೆ. ರಾತ್ರಿ 9 ಗಂಟೆಗೆ ರಕ್ತ ಕಂಡ ರಣಧೀರ ಅಥವಾ ತಂಗಿಯ ಕಣ್ಣೀರು ಎಂಬ ಸಾಮಾಜಿಕ ನಾಟಕ ನಡೆಯಲಿದೆ. ಮಾ.10 ರಂದು ಶ್ರೀಆದಿಶಕ್ತಿ ಭಂಗಿ ಮಾರಮ್ಮನವರ ರಥೋತ್ಸವ ಸಂಜೆ 4 ಗಂಟೆಗೆ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ

ಮೋದಿ ರೋಡ್ ಶೋ ತಂತ್ರಕ್ಕೆ ದೇವೇಗೌಡರಿಂದ ಪ್ರತಿತಂತ್ರ

ದೇಶದ ಚುನಾವಣಾ ರಣಕಣವಾಗಲಿದೆ ಹಳೇ ಮೈಸೂರು ಭಾಗ

ಬೆಂಗಳೂರು: ಹಳೇ ಮೈಸೂರು ಭಾಗದ ಮೇಲೆ ಬಿಜೆಪಿ ಕಣ್ಣಿಟ್ಟು, ಮಾ.12ರಂದು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ರೋಡ್ ಶೋಗೆ ನಡೆಸುತ್ತಿರುವ ತಂತ್ರಕ್ಕೆ ಮಾಜಿ ಪ್ರಧಾನಮಂತ್ರಿ, ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡ ಅವರು ಪ್ರತಿತಂತ್ರ ರೂಪಿಸಿ, ಕೌಂಟರ್ ನೀಡಿದ್ದಾರೆ.

ವಿಧಾನಸಭಾ ಚುನಾವಣೆಗೆ ಮುನ್ನ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಮಾಜಿ ಪ್ರಧಾನಮಂತ್ರಿ ಎಚ್‌ಡಿ ದೇವೇಗೌಡರು ತಮ್ಮ ನೆಲೆಯನ್ನು ಬಲಪಡಿಸಲು ವಿವಿಧ ದಿನಗಳಲ್ಲಿ ಹಳೇ ಮೈಸೂರು ಭಾಗದಲ್ಲಿ ಮೆಗಾ ರೋಡ್‌ಶೋಗಳಲ್ಲಿ ಭಾಗವಹಿಸಲಿದ್ದಾರೆ. ಹೀಗಾಗಿ ಹಳೇ ಮೈಸೂರು ಭಾಗ ಮಾಜಿ ಹಾಗೂ ಹಾಲಿ ಪ್ರಧಾನಮಂತ್ರಿಗಳ ನಡುವಿನ ರಣಕಣವಾಗಿ ಬದಲಾಗುವ ಸಾಧ್ಯತೆ ಇದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಮಾರ್ಚ್ 12ರಂದು ಮೋದಿ ಅವರಿಂದ ಉದ್ಘಾಟನೆಗೊಳ್ಳಲಿದೆ. ಬೆಂಗಳೂರು ಮತ್ತು ಮೈಸೂರು ನಡುವಿನ ಪ್ರಯಾಣದ ಸಮಯವನ್ನು ಅರ್ಧದಷ್ಟು ಈ ಎಕ್ಸ್‌ಪ್ರೆಸ್‌ವೇ ಕಡಿಮೆ ಮಾಡಲಿದೆ. ಕಾರ್ಯಕ್ರಮದ ನಂತರ ಮೋದಿ ಅವರು ಬೃಹತ್ ರೋಡ್ ಶೋನಲ್ಲಿ ಭಾಗವಹಿಸಲಿದ್ದಾರೆ.



ಹಳೆ ಮೈಸೂರು ಭಾಗದಲ್ಲಿ ಗೆಲುವು ಸಾಧಿಸಲು ಬಿಜೆಪಿ ಹರಸಾಹಸಪಡುತ್ತಿದ್ದು, ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಗಳ ಮೇಲೆ ಕಣ್ಣಿಟ್ಟಿದೆ. ಉಪಚುನಾವಣೆಯಲ್ಲಿ ನಾರಾಯಣಗೌಡ ಅವರು ಕೆಆರ್ ಪೇಟೆಯಲ್ಲಿ ಗೆಲವು ಸಾಧಿಸಿದ್ದರು. ಮಂಡ್ಯದ ಬೂಕನಕೆರೆ, ಕೆಆರ್ ಪೇಟೆಯಿಂದ ಲಿಂಗಾಯತ ಪ್ರಬಲ ನಾಯಕ ಯಡಿಯೂರಪ್ಪ ಇದ್ದರೂ ಕೂಡ ಮಂಡ್ಯ ಭಾಗದಲ್ಲಿ ಬಿಜೆಪಿ ಇನ್ನೂ ತನ್ನ ಖಾತೆಯನ್ನು ತೆರೆದಿಲ್ಲ ಇದೀಗ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಬಗ್ಗೆ ಹೆಚ್ಚಿನ ನಿರೀಕ್ಷೆಗಳಿದ್ದು, ಜನರ ಮನಗೆಲ್ಲುವ ವಿಶ್ವಾಸವಿದೆ. ಎಕ್ಸ್‌ಪ್ರೆಸ್‌ವೇ ಹೆಚ್ಚಿನ ಸಂಖ್ಯೆಯ ಜನರ ಪ್ರಯಾಣವನ್ನು ಸುಗಮಗೊಳಿಸುತ್ತದೆ. ಮಂಡ್ಯದಲ್ಲಿ ರೋಡ್‌ಶೋ ಜೆಡಿಎಸ್ ಭದ್ರಕೋಟೆಯನ್ನು ಛಿದ್ರಗೊಳಿಸುವ ಗುರಿಯನ್ನು ಹೊಂದಿದೆ. ಅಲ್ಲಿ ಕಾಂಗ್ರೆಸ್ ಕೂಡ ಗಮನಾರ್ಹ ಅಸ್ತಿತ್ವವನ್ನು ಹೊಂದಿದೆ. ನಾವು ಮತದಾರರನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಿಸುತ್ತಿದ್ದೇವೆಂದು ಬಿಜೆಪಿಯ ಹಿರಿಯ ನಾಯಕರೊಬ್ಬರು ಹೇಳಿದ್ದಾರೆ. ಈ ಮಧ್ಯೆ, ಮಾರ್ಚ್ 26ರಂದು ಮೈಸೂರಿನಲ್ಲಿ ಜೆಡಿಎಸ್ ಪಂಚರತ್ನ ರಥ ಯಾತ್ರೆಯ ಸಮಾರೋಪ ವನ್ನು ನಡೆಸಲಿದ್ದು, ಪಕ್ಷದ ವರಿಷ್ಠ ಮತ್ತು ಮಾಜಿ ಪ್ರಧಾನಿ ದೇವೇಗೌಡರನ್ನು ರಾಮನಗರದಿಂದ ಮೈಸೂರಿಗೆ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಲು ಮುಂದಾಗಿದ್ದಾರೆ. ರೋಡ್ ಶೋನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವಂತೆ ಮಾಡಿ, ಪಕ್ಷವು ತನ್ನ ಶಕ್ತಿ ಪ್ರದರ್ಶನ ಮಾಡುವ ನಿರೀಕ್ಷೆಗಳಿವೆ. ಮಂಡ್ಯ ಜನರ ಮನಗೆದ್ದಿರುವ ಜೆಡಿಎಸ್, ಇತರೆ ಪಕ್ಷಗಳಿಗೆ ಈ ಭಾಗವನ್ನು ಬಿಟ್ಟುಕೊಡಲು ಸಿದ್ಧವಿಲ್ಲ. ಮಂಡ್ಯ ಮತ್ತು ಮೈಸೂರಿನಲ್ಲಿ ಅಧಿಕಾರ ಮುಂದುವರಿಸಲು ಸಕಲ ಪ್ರಯತ್ನಗಳನ್ನು ನಡೆಸಲಿದೆ. ದೇವೇಗೌಡರ ಆರೋಗ್ಯದ ಬಗ್ಗೆ ನಮಗೆ ಅರಿವಿದ್ದು, ಅಷ್ಟರೊಳಗೆ ಅವರು ಗುಣಮುಖರಾಗುತ್ತಾರೆಂಬ ವಿಶ್ವಾಸವನ್ನು ಜೆಡಿಎಸ್ ಶಾಸಕರೊಬ್ಬರು ವ್ಯಕ್ತಪಡಿಸಿದ್ದಾರೆ.

ಯಾದವ ಸಂಘದ ಕಾರ್ಯಕಾರಿ ಮಂಡಳಿ ಚುನಾವಣೆಗೆ ನಿರ್ಧಾರ

ಮೈಸೂರು, ಮಾ. 6– ಯಾದವ (ಗೊಲ್ಲರ) ಸಂಘದ ಕಾರ್ಯಕಾರಿ ಮಂಡಳಿ ಚುನಾವಣೆ ನಡೆಸಲು ಆಡಳಿತ ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗಿದೆ. ಸಂಘದ ಹಾಲಿ ಸದಸ್ಯರ (2005ಕ್ಕಿಂತ ಹಿಂದೆ ನೊಂದಾಯಿಸಿದವರು) ಪಟ್ಟಿಯನ್ನು ದೇವರಾಜ ಮೊಹಲ್ಲಾದ ದಿವಾನ್ಸ್ ರಸ್ತೆಯಲ್ಲಿರುವ ಸಂಘದ ಕಚೇರಿಯ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗಿದೆ. ಸದಸ್ಯರು ಪಟ್ಟಿಯನ್ನು ಪರಿಶೀಲಿಸಿಕೊಳ್ಳಲು ಮಾರ್ಚ್ 31ರವರೆಗೆ ಅವಕಾಶವಿದೆ ಎಂದು ಅಧ್ಯಕ್ಷ ಡಿ.ಧ್ರುವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುಗಾದಿ ಕವಿಮೇಳಕ್ಕೆ ಕವನಗಳ ಆಹ್ವಾನ

ಮೈಸೂರು, ಮಾ. 6– ಸ್ಪಂದನಾ ಸಾಂಸ್ಕೃತಿಕ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಸ್ಮಯ ಬುಕ್ ಹೌಸ್ ಸಂಯುಕ್ತ ಆಶ್ರಯದಲ್ಲಿ ಮಾ. 26ರಂದು ರಾಜ್ಯ ಮಟ್ಟದ 'ಯುಗಾದಿ ಕವಿಮೇಳ'ವನ್ನು ಮೈಸೂರಿನ ವಿಜಯನಗರದ ಜಿಲ್ಲಾ ಸಾಹಿತ್ಯ ಭವನದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದ್ದು, ನಾಡಿನ ಕವಿ– ಕವಯತ್ರಿಯರಿಂದ ಕವನಗಳ ಆಹ್ವಾನಿಸಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ 9880264678 ಸಂಪರ್ಕಿಸಬಹುದು.



ಮೈಸೂರಿನ ಮಹದೇವಪುರದ ರಾಹುಲ್ ನರ್ಸರಿ ಹಾಗೂ ಹಿರಿಯ ಪ್ರಾಥಮಿಕ ಶಾಲೆ ಅಧ್ಯಕ್ಷ ಮ. ವೆಂಕಟರಾಮುರವರ 77ನೇ ಹುಟ್ಟುಹಬ್ಬದ ಅಂಗವಾಗಿ ಅವರನ್ನು ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಲೇಖಕ ಡಾ.ರಂಗನಾಥ್, ಸಿದ್ಧಾರ್ಥ (ಸಿಪಿಸಿ) ಇನ್ನಿತರರು ಸನ್ಮಾನಿಸಿದರು.

ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ 463 ಕೋಟಿ ಕಾಂಡೋಮ್ ಹಗರಣ

ಬೆಂಗಳೂರು: ಸಿದ್ದರಾಮಯ್ಯ ಅವರ ಸರ್ಕಾರದ ಅವಧಿಯಲ್ಲಿ ಆರೋಗ್ಯ ಇಲಾಖೆಯ ಅಧೀನದಲ್ಲಿರುವಂತಹ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ಮೂಲಕ ಕಾಂಡೋಮ್ ವಿತರಣೆಯಲ್ಲಿ 463 ಕೋಟಿ ರೂಪಾಯಿಗಳ ಹಗರಣ ನಡೆದಿದೆ ಎಂದು ಬಿಜೆಪಿ ವಕ್ತಾರ ಎನ್.ಆರ್.ರಮೇಶ್ ಆರೋಪಿಸಿದ್ದಾರೆ. ಸುದ್ದಿಗೋಷ್ಠಿ ನಡೆಸಿ ಸಿದ್ದರಾಮಯ್ಯ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿ, ಇಂದು ದಾಖಲೆಗಳನ್ನು ಬಿಡುಗಡೆ ಮಾಡಿದರು. ದೊಡ್ಡದೊಡ್ಡ ಕಾಮಗಾರಿಗಳಲ್ಲಿ ಭಾರೀ ಹಗರಣಗಳು ಸಿದ್ದರಾಮಯ್ಯ ಅವರ ಸರ್ಕಾರದ ಅವಧಿಯಲ್ಲಿ ನಡೆದಿರುವುದು ಸಾಮಾನ್ಯವಾಗಿದೆ. ಕಾಂಡೋಮ್ ಹಗರಣ ಸಂಬಂಧ ಲೋಕಾಯುಕ್ತ, ಸಿಬಿಐ ಮತ್ತು ಜನಪ್ರತಿನಿಧಿ ನ್ಯಾಯಾಲಯದಲ್ಲಿ ಪ್ರಕರಣ ಈಗಾಗಲೇ ದಾಖಲಾಗಿದೆ ಎಂದರು.



ರಮೇಶ್

ಸ್ವಾತಂತ್ರ್ಯ ನಂತರದ ಭಾರತದ 75 ವರ್ಷಗಳ ಇತಿಹಾಸದಲ್ಲಿ ಕರ್ನಾಟಕ ರಾಜ್ಯದ ಯಾವ ಒಂದು ಸರ್ಕಾರವೂ ಮಾಡದಿರುವಂತಹ ಸಣ್ಣಸಣ್ಣ ವಿಚಾರಗಳಲ್ಲೂ ನೂರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ. ಈಗಾಗಲೇ ಹಾಸಿಗೆ ದಿಂಬು ಪ್ರಕರಣ, ಇಂದಿರಾ ಕ್ಯಾಂಟಿನ್ ಗ್ರಾಹಕರ ಸಂಖ್ಯೆಯಲ್ಲಿ ಮಾಡಿರುವಂತಹ ಬೃಹತ್ ಹಗರಣ, ಅದೆಲ್ಲದಕ್ಕಿಂತಲೂ ಅಸಹ್ಯವಾಗಿ ಆರೋಗ್ಯ ಇಲಾಖೆಯ ಅಧೀನದಲ್ಲಿರುವಂತಹ ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ ಮೂಲಕ ಕಾಂಡೋಮ್ ವಿತರಣೆಯಲ್ಲಿ 463 ಕೋಟಿ ರೂಪಾಯಿಗಳ ಹಗರಣ ನಡೆದಿದೆ ಎಂದು ದಾಖಲೆ ಸಹಿತ ಆರೋಪ ಮಾಡಿದರು.

ಎನ್.ಆರ್.ರಮೇಶ್ ಅವರು ಕಾಂಡೋಮ್ ಹಗರಣದ ಬಗ್ಗೆ ಇದೇ ಮೊದಲ ಬಾರಿ ಆರೋಪಿಸಿದ್ದಲ್ಲ. ಸಿದ್ದರಾಮಯ್ಯ ಅವರ ಸರ್ಕಾರದ ಪೂರ್ಣಾವಧಿಯಲ್ಲಿ ಯುಟಿ ಖಾದರ್ ಅವರು ಆರೋಗ್ಯ ಸಚಿವರಾಗಿದ್ದಾಗ 2016ರಲ್ಲಿ ರಮೇಶ್ ಅವರು ಈ ಆರೋಪವನ್ನು ಮಾಡಿದ್ದರು. ಕಾಂಡೋಮ್ ವಿತರಣೆಗಾಗಿ ಮೀಸಲಿಟ್ಟ ಹಣದಲ್ಲಿ 500 ಕೋಟಿ ರೂಪಾಯಿಗಳು ದುರುಪಯೋಗವಾಗಿದೆ ಎಂದು ದಾಖಲೆ ಸಹಿತ ಆರೋಪಿಸಿದ್ದರು. ಏಡ್ಸ್ ನಿಯಂತ್ರಣ ಸೊಸೈಟಿಯ ಅಧ್ಯಕ್ಷ ಸಿಎಂ ಹಾಗೂ ಉಪಾಧ್ಯಕ್ಷ ಆರೋಗ್ಯ ಸಚಿವರಾಗಿದ್ದರು.

ದಕ್ಷ, ಪ್ರಾಮಾಣಿಕ ಆಡಳಿತಕ್ಕೆ ಸರ್ಕಾರಿ ನೌಕರರಿಗೆ ಸಚಿವರ ಸಲಹೆ

ಬೆಂಗಳೂರು, ಮಾ.6(ಕೆಎಂಶಿ)–ಸ್ವಚ್ಛ, ದಕ್ಷ ಮತ್ತು ಪ್ರಾಮಾಣಿಕ ಆಡಳಿತ ವಿಧಾನವನ್ನು ಸರ್ಕಾರಿ ನೌಕರರು ಮೈಗೂಡಿಸಿಕೊಳ್ಳಬೇಕು. ಇದರಿಂದ ಸರ್ಕಾರದ ಆದಾಯ ಹೆಚ್ಚಿ ಜನಪರ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಸಾಧ್ಯವಾಗಲಿದೆ ಎಂದು ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವ ಎಂಟಿಬಿ ನಾಗರಾಜು ಹೇಳಿದರು.

ವಿಧಾನಸೌಧದಲ್ಲಿ ಸೀಮ್ಯಾಕ್ ಸಂಸ್ಥೆಯು ಪೌರಾಡಳಿತ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಉತ್ತಮ ಪದ್ಧತಿಗಳ ದಾಖಲೀಕರಣವನ್ನು ಬಿಡುಗಡೆಗೊಳಿಸಿ ನಂತರ ಪ್ರಶಸ್ತಿ ಪ್ರದಾನ ಮಾಡಿ ಸಚಿವರು ಮಾತನಾಡಿದರು. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ತೆರಿಗೆ ಸಂಗ್ರಹಕ್ಕೆ ಒತ್ತು ನೀಡಿದ್ದೇವೆ. ನೇರ ಪಾವತಿ ಮೂಲಕ ಆಸ್ತಿ ತೆರಿಗೆ ಸಂಗ್ರಹಕ್ಕೆ ಸಿದ್ಧತೆ ನಡೆದಿದೆ. 3885 ಕೋಟಿ ರೂ.ಗಳ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಹಲವೆಡೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಕಾಮಗಾರಿಗಳು ಆರಂಭವಾಗಿವೆ. ರಾಜ್ಯದ 248 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ 8691 ಕೋಟಿ ರೂ.ವೆಚ್ಚದಲ್ಲಿ ಕುಡಿಯುವ ನೀರು ಪೂರೈಸುವ ಅಮೃತ್–2.0 ಯೋಜನೆ ಪ್ರಗತಿಯಲ್ಲಿದೆ ಎಂದು ಹೇಳಿದರು.

ತಿದ್ದುಪಡಿ

ದಿನಾಂಕ 06.03.23ರಂದು 'ಮೈಸೂರು ಮಿತ್ರ' ಪತ್ರಿಕೆಯ ಪುಟ 10ರಲ್ಲಿ 'ಹೋಟೆಲ್ ಮಯೂರ ಕಾವೇರಿ, ಬೃಂದಾವನ ಗಾರ್ಡನ್, ಕೆ.ಆರ್. ಸಾಗರ, ಮಂಡ್ಯ ಜಿಲ್ಲೆ', ಇವರ ಜಾಹೀರಾತು 'ಪ್ರಕಟಣೆ'ಯಲ್ಲಿ ಬಹಿರಂಗ ಹರಾಜು ದಿನಾಂಕ 15.02.2023 ಎಂದು ತಪ್ಪಾಗಿ ಪ್ರಕಟವಾಗಿದ್ದು, ಅದನ್ನು '15.03.2023 ರಂದು ನಡೆಯಲಿರುವ ಬಹಿರಂಗ ಹರಾಜಿನಲ್ಲಿ ಬಿಡ್‌ದಾರರು GST ಹೊಂದಿರುವ ಬಿಡ್‌ದಾರರು ಪಾಲ್ಗೊಳ್ಳುವಂತೆ ಸೂಚಿಸಿದೆ' ಎಂದು ಓದಿಕೊಳ್ಳುವುದು.

ಸಹಿ/– ವ್ಯವಸ್ಥಾಪಕರು,

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

8ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ತಮ್ಮ: ಶ್ರೀನಿವಾಸ ಮತ್ತು ಶಾಂತಿ ಶ್ರೀನಿವಾಸ ಹಾಗೂ ಕುಟುಂಬ ವರ್ಗದವರು

ಸಿ.ಕುಮಾರಸ್ವಾಮಿ BSNL
ಗಾಂಧಿನಗರ

7ನೇ ವರ್ಷದ ಸವಿನೆನಪು



ಕೆ.ರಾಜೇಶ್
ದುಃಖಿತಪ್ತರು: ತಾಯಿ ಲಕ್ಷ್ಮೀ, ತಂದೆ ಕುಮಾರ, ತಂಗಿ ರಾಧಿಕ ಮತ್ತು ಚೇತನ ರಾಜ್, ಮಾನ್ಯ, ಗೌರವ್ ಮರಿಗೌಡರ ಕುಟುಂಬವರ್ಗ, ಮಾಕನಹುಂಡಿ.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಛೇರಿ ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಮೂರನೇ ಮಹಡಿ, ಕೊಠಡಿ ಸಂಖ್ಯೆ: 342, ಜಿಲ್ಲಾಡಳಿತ ಭವನ, ಬಿ.ರಾಚಯ್ಯ ಜೋಡಿ ರಸ್ತೆ.
Email ID: dlochamarajanagar@gmail.com ದೂರವಾಣಿ: 08226–224889

ಸಂಖ್ಯೆ: e-H/Tele/CHN/Re-e-tender/02/2022-23 ದಿನಾಂಕ: 02–03–2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

2022–23ನೇ ಸಾಲಿಗೆ ಟೆಲಿಮೆಡಿಷನ್ ಕಾರ್ಯಕ್ರಮವನ್ನು ಜಿಲ್ಲೆಯ ಎಲ್ಲಾ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ (HWC) ಅನುಷ್ಠಾನಗೊಳಿಸಲು ಪ್ರತಿಯೊಂದು ಆರೋಗ್ಯ ಮತ್ತು ಕ್ಷೇಮ ಕೇಂದ್ರಕ್ಕೆ ಒಂದು ಪ್ರಿಂಟರ್ ಮತ್ತು ಹೆಡ್‌ಫೋನ್‌ಗಳ ಅವಶ್ಯಕತೆಯಿರುತ್ತದೆ. ಅದರಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳ ಪಾರದರ್ಶಕ ಅಧಿನಿಯಮ 2000 ರ (KTPP) ಪ್ರಕಾರ www.eproc.karnataka.gov.in ಮುಖಾಂತರ ಇ–ಟೆಂಡರ್ ಕರೆಯಲಾಗಿದೆ. ಇ–ಟೆಂಡರ್ ಅರ್ಜಿ ಸಲ್ಲಿಸಲು ಹಾಗೂ ಸ್ವೀಕರಿಸಲು ಈ ಕೆಳಗೆ ವಿವರಿಸಿದ ಪ್ರಕಾರ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	02–03–2023
ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	11–03–2023 ಸಂಜೆ 5–00 ಗಂಟೆ
ಟೆಂಡರ್ ಅಂದಾಜು ಮೌಲ್ಯ	ರೂ. 17.33 ಲಕ್ಷಗಳು
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	13–03–2023 ಬೆಳಿಗ್ಗೆ 11–00ಕ್ಕೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	ತಾಂತ್ರಿಕ ಬಿಡ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಆರ್ಥಿಕ ಬಿಡ್ ತೆರೆಯಲಾಗುತ್ತದೆ.
E.M.D. (2.5%)	Rs. 43325/-

ಸಹಿ/– ಜಿಲ್ಲಾ ಕುಷ್ಠ ರೋಗ ನಿರ್ಮೂಲನಾಧಿಕಾರಿಗಳು & ಜಿಲ್ಲಾ ನೋಡಲ್ ಅಧಿಕಾರಿಗಳು, ಇ–ಹೆಲ್ತ್ ವಿಭಾಗ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ವಾ.ಸಾ.ಸಂ.ಇ./ಚಾ.ನಗರ/624/2022–23

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈ.ನ.ಪ್ರಾ/ವಕ–4ಪಿ.ಆರ್–94/2022–23 ದಿನಾಂಕ: 06–03–2023

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೈಸೂರು ನಗರದ, ಮನೆ ನಂ. 2842, 1ನೇ ಮೇನ್, 1ನೇ ಕ್ರಾಸ್, ಪಂಪಾಪತಿ ರೋಡ್, ಜಯನಗರ, ಮೈಸೂರು ಇಲ್ಲಿ ವಾಸವಿರುವ ಸುಂದರರಾಜಚಾರ್ಯರವರ ಮಗನಾದ ಶ್ರೀ ವರದಾಚಾರ್ಯ ಕೆ.ಎಸ್. ರವರಿಗೆ ದಿನಾಂಕ: 18–01–2012 ರಂದು "ಹೆಚ್" ಪ್ರವರ್ಗದಡಿಯಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರೀನಗರ ಬಡಾವಣೆಯ ನಿವೇಶನ ಸಂಖ್ಯೆ 2103, ಅಳತೆ 12x18 ಮೀ. ನಿವೇಶನ ಮಂಜೂರಾಗಿದ್ದು, ದಿನಾಂಕ 07–06–2013 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ಮಂಜೂರಾತಿದಾರರಾದ ಶ್ರೀ ವರದಾಚಾರ್ಯ ಕೆ.ಎಸ್. ರವರು ಮತ್ತು ಇವರ ಧರ್ಮಪತ್ನಿ ಶ್ರೀಮತಿ ರಾಜಲಕ್ಷ್ಮಿ ಹಾಗೂ ಮಗಳಾದ ಕುಮುದವಲ್ಲಿ ರವರು ಮೃತರಾಗಿರುತ್ತಾರೆ. ಮೃತರ ಕುಟುಂಬ ಜೀವಿತ ಸದಸ್ಯರ ದೃಢೀಕರಣ ಪತ್ರದಂತೆ ಇವರ ವಾರಸುದಾರರುಗಳಾದ ಶ್ರೀಮತಿ ಕೆ.ಎಸ್. ವಿಜಯಲಕ್ಷ್ಮಿ, ಶ್ರೀಮತಿ ಅಮೃತವಲ್ಲಿ ಕೆ.ವಿ., ಶ್ರೀ ರಾಮಪ್ರಿಯ ಕೆ.ವಿ., ಶ್ರೀಮತಿ ಕುಮುದವಲ್ಲಿ (ಪೌತಿ) ಶ್ರೀ ಕೆ.ವಿ. ನಂದಕುಮಾರ್, ಶ್ರೀ ಕೆ.ವಿ. ಶೇಖರ್ ಎಂಬುವವರಿದ್ದು, ಮತ್ತು ಲೇಟ್ ಕುಮುದವಲ್ಲಿ ರವರ ಪತಿಯಾದ ಶ್ರೀ ಎಂ. ಸಿದ್ದಲಿಂಗಸ್ವಾಮಿ ಹಾಗೂ ಮಗಳು ಎಸ್. ಅನುಷ ರವರುಗಳಿಗೆ ಜಂಟಿಯಾಗಿ ಪೌತಿ ವರ್ಗಾವಣೆ ಕೋರಿರುತ್ತಾರೆ.

ಪ್ರಸ್ತುತ, ಮೇಲ್ಕಂಡ ನಿವೇಶನವು ಮನೆ ನಂ. 924, 6ನೇ ಕ್ರಾಸ್, ಶ್ರೀರಾಂಪುರ 2ನೇ ಹಂತ ದಲ್ಲಿ ವಾಸಿಸುವ ಮೇಲ್ಕಂಡ ನಿವೇಶನದ ವಾರಸುದಾರರಾದ ಶ್ರೀಮತಿ ಕೆ.ಎಸ್. ವಿಜಯಲಕ್ಷ್ಮಿ, ಶ್ರೀಮತಿ ಅಮೃತವಲ್ಲಿ ಕೆ.ವಿ., ಶ್ರೀ ರಾಮಪ್ರಿಯ ಕೆ.ವಿ., ಶ್ರೀ ಕೆ.ವಿ. ನಂದಕುಮಾರ್, ಶ್ರೀ ಕೆ.ವಿ. ಶೇಖರ್, ಶ್ರೀ ಎಂ. ಸಿದ್ದಲಿಂಗಸ್ವಾಮಿ ಹಾಗೂ ಎಸ್. ಅನುಷ ರವರುಗಳು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಲಾಲ್‌ಬಹದ್ದೂರ್ ಶಾಸ್ತ್ರೀನಗರ ಬಡಾವಣೆಯ ನಿವೇಶನ ಸಂಖ್ಯೆ 2103, ಅನ್ನು ತಮ್ಮಗಳ ಹೆಸರಿಗೆ ಜಂಟಿಯಾಗಿ ಪೌತಿವರ್ಗಾವಣೆ ನೀಡುವಂತೆ ಕೋರಿರುವುದರಿಂದ, ಅರ್ಜಿದಾರರ ಮನವಿಯಂತೆ ಸ್ವತ್ತಿನ ವರ್ಗಾವಣೆ ನೀಡುವ ಸಂಬಂಧ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಹಿತಾಸಕ್ತಿದಾರರಿಂದ ಅಥವಾ ಇತರೆ ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 10 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ವಿಶೇಷ ತಹಸೀಲ್ದಾರ್, ವಲಯ ಕಛೇರಿ–4
ದಿನಾಂಕ: 06–03–2023 ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಸರಗೂರು

Email : itstaff_ulb_sargur@yahoo.com Phone: 08228-255327 Website: www.sargurtown.gov.in

ಸಂ:ಸ.ಪ.ಪಂ.ಕಾ.ಸ/ಕಿ.ಅ/ಪಿಆರ್ 04/2022–23 ದಿನಾಂಕ: 03.03.2023

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಸರಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನಮತ್ತು ಎಸ್.ಎಫ್.ಸಿ ಅನುದಾನಗಳಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ 4ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ K.W-1ರ ನಿಯಮಗಳ ಅನ್ವಯ ಮತ್ತು ಸರಗೂರು ಪಟ್ಟಣ ಪಂಚಾಯಿತಿ ಕಛೇರಿ ಉಪಯೋಗಕ್ಕಾಗಿ ನೋಂದಾಯಿತ ಅರ್ಹ ವಾಹನ ಸರಬರಾಜುದಾರರಿಂದ ಮಾಸಿಕ ಬಾಡಿಗೆ ಆಧಾರದ ಮೇಲೆ ವಾರ್ಷಿಕವಾಗಿ ವಾಹನವನ್ನು ಬಾಡಿಗೆಗೆ ಪಡೆಯಲು, ಸರಗೂರು ಪಟ್ಟಣ ಪಂಚಾಯಿತಿ ಕಚೇರಿಯ ಪೌರಕಾರ್ಮಿಕರಿಗೆ ಬೆಳಗ್ಗಿನ ಉಪಹಾರ ಸರಬರಾಜು ಮಾಡಲು ಹಾಗೂ ಸರಗೂರು ಪಟ್ಟಣ ಪಂಚಾಯಿತಿಯಲ್ಲಿ ನೀರು ಸರಬರಾಜು ಆಪರೇಟರ್ ಮತ್ತು ನೀರು ಸರಬರಾಜು ವಾಲ್ ಮೆನ್ ನೌಕರರನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲು 1999 ಹಾಗೂ 2000ರ ಪಾರದರ್ಶಕಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಕಾಮಗಾರಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನ http://eproc.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. 1) ಟೆಂಡರ್‌ನ್ನು ಸಲ್ಲಿಸಲು ಕಡೆಯ ದಿ: 21.03.2023 ಸಂಜೆ 5.30 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿ: 23.03.2023ರ ಬೆಳಿಗ್ಗೆ 11.30 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕ ದಂದು ತೆರೆಯಲಾಗುವುದು.

ಕ್ರ ಸಂ	ವಿವರ	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ರೂಗಳಲ್ಲಿ	ಗುತ್ತಿಗೆದಾರರ ದರ್ಜೆ	ಕಾಲಾವಧಿ
1.	TP/SRG/VEHICLE/HIRE/2022-23	4.20	10500	ನೋಂದಾಯಿತ ಅರ್ಹ ವಾಹನ ಸರಬರಾಜುದಾರರು	12 ತಿಂಗಳು
2.	DMA/2021-22/OW/WORK_INDENT128623/CALL-2	5.00	12500	4ನೇ ದರ್ಜೆ ಹಾಗೂ ಮೇಲ್ಪಟ್ಟು	04 ತಿಂಗಳು
3.	DMA/2020-21/OW/WORK_INDENT113366/CALL-2 (Reserved for ST category contractors)	4.05	5100	4ನೇ ದರ್ಜೆ ಹಾಗೂ ಮೇಲ್ಪಟ್ಟು	04 ತಿಂಗಳು
4.	TP/SARGUR/WS/LABOUR/2023	9.28	23200	ನೋಂದಾಯಿತ ಅರ್ಹ ಮಾನವ ಸಂಪನ್ಮೂಲ ಸರಬರಾಜುದಾರರು	12 ತಿಂಗಳು
5.	SRT/TP/PK/FOOD/02/2023	2.30	5750	–	12 ತಿಂಗಳು

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು http://eproc.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. 2) ಜಿ.ಎಸ್.ಟಿ ತೆರಿಗೆಯನ್ನು ಪ್ರತ್ಯೇಕವಾಗಿ ಕಾಮಗಾರಿಯ ಬಿಲ್ಲಿನಲ್ಲಿ ಸೇರಿಸಲಾಗುವುದು.

ಸಹಿ/– ಅಧ್ಯಕ್ಷರು, ಪಟ್ಟಣ ಪಂಚಾಯಿತಿ, ಸರಗೂರು ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಸರಗೂರು
DIPR/DDMYS/KSMCA/1127/2022-23